ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 16 ಏಪ್ರಿಲ್ 14-20, 1997 ಬೆಲೆ ರೂ. 2.00

ರಾಜಕೀಯ ಅಸ್ಥಿರತೆಯತ್ತ ದೇಶವನ್ನು ತಳ್ಳಿದ ಕಾಂಗ್ರೆ ನಿರ್ಣಯ

ಹತ್ತು ತಿಂಗಳು ಆಳ್ವಿಕೆ ನಡೆಸಿದ ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರ ಕಾಂಗ್ರೆಸ್(ಐ)ನ ವಿಚಿತ್ರ ಮತ್ತು ಮೂರ್ಖ ನಿರ್ಣಯದಿಂದಾಗಿ ಲೋಕಸಭೆಯಲ್ಲಿ ವಿಶ್ವಾಸ ಮತ ಪಡೆಯಲಾಗದೆ (158-292 ಮತಗಳಿಂದ) ಬಿದ್ದು ಹೋಗಿದೆ. ಕಾಂಗ್ರೆಸ್(ಐ)ನಿಂದ ದೇಶದ ಪ್ರಗತಿಪರ ರಾಜಕೀಯಕ್ಕೆ ಎಂತಹಾ ಯುಗಾದಿ ಉಡುಗೊರೆ!

ಕಾಂಗ್ರೆಸ್(ಐ) ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳಲು ನೀಡಿದ ಕಾರಣಗಳಂತೂ ಕ್ಷುಲ್ಲಕ. ಇದೀಗ ಎಲ್ಲರೂ ಒಪ್ಪುವ ಸಂಗತಿ. ಈ ಕಾರಣಗಳ ಹಿಂದಿರುವ ಟೊಳ್ಳುತನವನ್ನು ಈ ಮೊದಲೇ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಬಯಲಿಗೆಳೆದಿದ್ದರು. ('ಐಕ್ಯರಂಗ'ದ ಕಳೆದವಾರದ ಸಂಚಿಕೆಯನ್ನು ನೋಡಿ)

ದೇವೇಗೌಡರು ಮಂಡಿಸಿದ ವಿಶ್ವಾಸ ಠರಾವನ್ನು ವಿರೋಧಿಸಿ ಮಾತನಾಡಿದವರ ಭಾಷಣಗಳಲ್ಲೂ ಇದು ಸ್ಪಷ್ಟವಾಗಿ ಕಂಡು ಬಂತು. ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ಕಾಂಗ್ರೆಸ್(ಐ)ನ ಕ್ರಮದಿಂದ ಸಂತೋಷವಾಗಿದ್ದರೂ, ಅವರ ಮುಖಂಡರ ಭಾಷಣಗಳಲ್ಲೂ ಈ ಅಂಶ ಎದ್ದು ಕಾಣುತ್ತಿತ್ತು. ಹತ್ತು ತಿಂಗಳ ಕಾಲ ಎಲ್ಲಾ ಎಡರು ತೊಡರುಗಳನ್ನು ಎದುರಿಸಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿದು ಯಾವುದೇ ಕೋಮುವಾದಿ ಗಲಭೆಗಳಿಗೆ ಎಡೆಕೊಡದ ಸರಕಾರವನ್ನು, ವಿದೇಶಿ ಧೋರಣೆಯಲ್ಲಿ ಭಾರತ ಮತ್ತು ನೆರೆಹೊರೆಯ ದೇಶಗಳನ್ನು ಇನ್ನಷ್ಟು ಸಮೀಪ ತರುವ ಹೊಸ ಹಾದಿಯನ್ನು ಹಿಡಿದು ಅಂತರ್ರಾಷ್ಟ್ರೀಯ ರಂಗದಲ್ಲಿ ಮತ್ತೆ ಭಾರತಕ್ಕೆ ಸಲ್ಲಬೇಕಾದ ಸ್ಥಾನವನ್ನು ಪಡೆಯುವಂತಹ ನಿಲುವು ತಳೆದ ಸರಕಾರವನ್ನು, ಹಿಂದಿನ ಸರಕಾರಗಳು ಅಲಕ್ಷ ಮಾಡಿಕೊಂಡು ಬಂದ ಈಶಾನ್ಯ ಭಾರತದ ರಾಜ್ಯಗಳಿಗೆ ವಿಶೇಷ ಗಮನ ಕೊಡಲಾರಂಭಿಸಿದ ಸರಕಾರವನ್ನು, ಎಲ್ಲಕ್ಕೂ ಮಿಗಿಲಾಗಿ ಭಾರತದ ವಿವಿಧತೆಯನ್ನು, ಕೇಂದ್ರ ರಾಜ್ಯ ಸಂಬಂಧಗಳಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸುವ ಒಕ್ಕೂಟ ತತ್ವದ ಆಧಾರದ ಮೇಲೆ ಮೊಟ್ಟ ಮೊದಲ ಬಾರಿಗೆ ದೇಶದ ಆಳ್ವಿಕೆಯನ್ನು ನಡೆಸಲಾರಂಭಿಸಿದ ಒಂದು ಸರಕಾರವನ್ನು ಹೀಗೆ ಕ್ಷುಲ್ಲಕ ಕಾರಣವೊಡ್ಡಿ ಪತನಗೊಳಿಸಿದ್ದು ಲೋಕಸಭೆಯ ಹೊರಗೂ, ಎಲ್ಲಾ ಪ್ರಜಾಪ್ರಭುತ್ವವಾದಿಗಳಿಂದಲೂ ತೀವ್ರ ಟೀಕೆಗೊಳಗಾಗಿದೆ. ಕೆಲವು ಪತ್ರಿಕೆಗಳು ಇದನ್ನು ನಾಚಿಕೆಗೇಡು ಎಂದೇ ವರ್ಣಿಸಿವೆ.

ದೇವೇಗೌಡರು ತಮ್ಮ ಸರಕಾರದ ರಾಜೀನಾಮೆಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದಾರೆ. ಆದರೆ ಎಲ್ಲರೂ ನಿರೀಕ್ಷಿಸಿದಂತೆ ಲೋಕಸಭೆಯನ್ನು ವಿಸರ್ಜಿಸುವ ಶಿಫಾರಸ್ಸು ಮಾಡಿಲ್ಲ. ಇದರ ಮೊದಲು ಸರಕಾರವನ್ನು ಉರುಳಿಸುವ ಪಕ್ಷಗಳೂ ಕೂಡಾ ವಿಶ್ವಾಸ ಠರಾವಿನ ಚರ್ಚೆಯ ಮೊದಲೇ ಅದೇ ಸರಕಾರದ ಬಜೆಟ್ ಅಂಗೀಕರಿಸುವಂತಾಗಲಿ ಎಂಬ ಪ್ರಯತ್ನ ನಡೆಸಿದರು. ಆದರೆ ಇದರ ಹಿಂದಿರುವ ಈ ಪಕ್ಷಗಳ ಗೋಸುಂಬೆತನವನ್ನು, ಸಮಯಸಾಧಕತನವನ್ನು ಬಯಲಿಗೆಳೆದ ಸಿಪಿಐ(ಎಂ) ಇದಕ್ಕೆ ಒಪ್ಪಲಿಲ್ಲ. ಈಗ ಏಪ್ರಿಲ್ 21 ರಿಂದ 3 ದಿನಗಳ ವಿಶೇಷ ಅಧಿವೇಶನದಲ್ಲಿ ಹಣಕಾಸು ಮಸೂದೆಯ ಬಗ್ಗೆ ಚರ್ಚಿಸಲು ಎಲ್ಲ ಪಕ್ಷಗಳು ಒಪ್ಪಿವೆ.

ಮುಂದೇನು?

ಸ್ವಾಭಾವಿಕವಾಗಿಯೇ ಮುಂದೇನು ಎಂಬ ಪ್ರಶ್ನೆ ಜನತೆಯ ಮುಂದಿದೆ. ಲೋಕಸಭೆಯಲ್ಲಿ ನಡೆದ ಚರ್ಚೆಗಳಲ್ಲಿ ಬಿಜೆಪಿಯ ಮುಖಂಡರು ಸಂಯುಕ್ತರಂಗದ ಸಮ್ಮಿಶ್ರ ಸ್ವರೂಪದ ಬಗ್ಗೆ ಲೇವಡಿ ಮಾಡಿದರೂ ತಾವೇ ಸ್ವತಃ ಸಮತಾ ಪಾರ್ಟಿ, ಶಿವಸೇನೆ, ಅಕಾಲಿದಳ, ಹೆಚ್.ವಿ.ಪಿ., ಬಿಎಸ್‌ಪಿ ಗಳಂತಹ ಪಕ್ಷಗಳನ್ನು ಸೇರಿಸಿಕೊಂಡು ಮತ್ತೊಮ್ಮೆ ಸರಕಾರ ರಚಿಸುವ ಹವಣಿಕೆಯಲ್ಲಿದ್ದಾರೆ. ಸಮ್ಮಿಶ್ರ ರಾಜಕೀಯದಲ್ಲಿ ಬೆಂಬಲ ನೀಡುವ ಪಕ್ಷಗಳೊಡನೆ ಹೇಗೆ ವರ್ತಿಸಬೇಕು ಎಂದು ಉಪದೇಶ ನೀಡಲು ಮುಂದಾದ ಈ ಪಕ್ಷ, ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆಯೊಬ್ಬರನ್ನು ಮುಖ್ಯಮಂತ್ರಿ ಸ್ಥಾನಕ್ಕೇರಿಸಿದ್ದೇವೆ ಎಂಬ ಹೆಗ್ಗಳಿಕೆಯ ಈ ಪಕ್ಷ ಆ ಸ್ಥಾನವನ್ನು ಆರು ತಿಂಗಳಿಗೆ ಮಾತ್ರ ಏಕೆ ಕೊಡಲಾಗಿದೆ, ನಂತರ ಏಕೆ ಕಿತ್ತುಕೊಳ್ಳಲಾಗುತ್ತದೆ ಎಂಬುದರ ಹಿಂದಿರುವ ಸಮಯ ಸಾಧಕತೆಯನ್ನು ಮರೆಮಾಚಲಾರದೆ ಒದ್ದಾಡುತ್ತಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಕಾಂಗ್ರೆಸ್(ಐ) ಕಳೆದ ವರ್ಷ ಮತದಾರರು ತಮ್ಮನ್ನು ಸಾರಾಸಗಾಟಾಗಿ ತಿರಸ್ಕರಿಸಿದ್ದನ್ನು ಮರೆತು ತಮ್ಮ ನೇತೃತ್ವದ ಸರಕಾರದ ರಚನೆಗೆ ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ 14 ಪಕ್ಷಗಳ ಸಂಯುಕ್ತರಂಗವೂ ಮುಂದಿನ ಕಾರ್ಯಾಚರಣೆಗಳ ಬಗ್ಗೆ ಚರ್ಚಿಸುತ್ತಿದೆ.

ಕೂಡಲೇ ಇನ್ನೊಂದುಚುನಾವಣೆಯ 700 ಕೋಟಿ ರೂಪಾಯಿಗಳ ಹೊರೆಯನ್ನು ತಪ್ಪಿಸುವ ಹಾಗೂ ಕಳೆದ ವರ್ಷದ ಸಾರ್ವತ್ರಿಕ ಚುನಾವಣೆಯಲ್ಲಿ ಜನತೆ ನೀಡಿದ ಆದೇಶಕ್ಕೆ ವಿರುದ್ಧವಾಗಿರದ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಪಕ್ಷಗಳ ಸಂಯುಕ್ತ ರಂಗ ಸರಕಾರ ವಿಳಂಬವಿಲ್ಲದೆ ರಚನೆಯಾಗಬೇಕಾಗಿದೆ. ಎಂತಹ ಸಂದರ್ಭದಲ್ಲೂ ರಂಗದ ಎಲ್ಲಾ ಘಟಕಗಳು ತಮ್ಮ ಐಕ್ಯತೆಯನ್ನು ಮುಂದೆಯೂ ಕಾಯ್ದುಕೊಳ್ಳಬೇಕು ಎಂಬುದು ಎಲ್ಲಾ ಪ್ರಗತಿಪರ ಪ್ರಜಾಪ್ರಭುತ್ವವಾದಿಗಳ ಆಶಯ. ಏಕೆಂದರೆ ಈಗಿನ ಸನ್ನಿವೇಶದಲ್ಲಿ ರಾಜಕೀಯದಲ್ಲಿ ಎಲ್ಲಾ ರಾಜ್ಯಗಳ ಜನಗಳಿಗೆ ಸಮಾನತೆಯ ಭಾವನೆಗೆ ಸ್ಪಂದಿಸಿ ಹೊಸ ಹಾದಿ ನಿರ್ಮಿಸಿರುವ ಸಂಯುಕ್ತ ರಂಗದ ಐಕ್ಯತೆಯಿಲ್ಲದಿದ್ದರೆ ಅದು ದೇಶಕ್ಕೆ ವಿನಾಶಕಾರಿ.

29 ಜಿಲ್ಲೆ ಹೊಂದಿದ ಕರ್ನಾಟಕ ರಾಜ್ಯ

ಕನ್ನಡಿಗರ ಕನಸಾದ ಏಕೀಕೃತ ಕರ್ನಾಟಕದ ನಲವತ್ತೊಂದನೇ ವಾರ್ಷಿಕೋತ್ಸವವನ್ನು ಆಚರಿಸುವಾಗ ನಾವು ಇಪ್ಪತ್ತೊಂಭತ್ತು ಜಿಲ್ಲೆಗಳನ್ನು ಹೊಂದಿದ ಮಹಾನ್ ರಾಜ್ಯವೆಂದು ಹೆಮ್ಮೆಪಟ್ಟುಕೊಳ್ಳುವಂತೆ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಏಪ್ರಿಲ್ 8 ರ ಯುಗಾದಿ ಶುಭ ದಿನದಂದು ಏಳು ಹೊಸ ಜಿಲ್ಲೆಗಳ ಹೆಸರುಗಳನ್ನು ಪ್ರಕಟಿಸಿದ್ದಾರೆ -ಬಾಗಲಕೋಟೆ(ಬಿಜಾಪುರ), ಚಾಮರಾಜ ನಗರ(ಮೈಸೂರು), ದಾವಣಗೆರೆ (ಚಿತ್ರದುರ್ಗ),ಗದಗ ಮತ್ತು ಹಾವೇರಿ(ಧಾರವಾಡ), ಕೊಪ್ಪಳ(ರಾಯಚೂರು) ಮತ್ತು ಉಡುಪಿ(ದಕ್ಷಿಣ ಕನ್ನಡ). ಇನ್ನೆರಡು ಜಿಲ್ಲೆಗಳ ಹೆಸರುಗಳನ್ನು - ಗುಲ್ಬರ್ಗದಲ್ಲಿ ಶಹಾಪುರ ಅಥವಾ ಯಾದಗೀರ್ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ಅಥವಾ ಗೋಕಾಕ್-ಇನ್ನೆರಡು ವಾರಗಳಲ್ಲಿಪ್ರಕಟಿಸುವುದಾಗಿ ಹೇಳಿದ್ದಾರೆ. ಕಳೆದೆರಡು ದಶಕಗಳಿಂದಲೂ ನನೆಗುದಿಗೆ ಬಿದ್ದಿರುವ ಅತಿ ದೊಡ್ಡ ಜಿಲ್ಲೆಗಳ ಪುನರ್ವಿಂಗಡನೆಯ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ನೀಡಿದೆ ಜೆ.ಎಚ್.ಪಟೇಲರ ಸರಕಾರ. ಕಳೆದೆರಡು ದಶಕಗಳಿಂದ ಜನರ ಒತ್ತಡಕ್ಕೆ ಮಣಿದ ಸರಕಾರಗಳು ತಾವೇ ನೇಮಿಸಿದ ಮೂರು ಸಮಿತಿಗಳ ವರದಿಗಳನ್ನು ಬದಿಗಿಟ್ಟಿದ್ದು ಕಳೆದ ಹತ್ತು ತಿಂಗಳ ತನ್ನ ಆಡಳಿತೆಯ ಕಾಲಾವಧಿಯಲ್ಲಿ ರಾಜಕೀಯ ಏರುಪೇರುಗಳುಂಟಾದಾಗ ತನ್ನ ಅಧಿಕಾರ ಭದ್ರಗೊಳಿಸುವ ಉದ್ದೇಶದಿಂದ ವಿವೇಚನಾ ರಹಿತ ಹೇಳಿಕೆಗಳ ಮೂಲಕ, ಗದಗ, ಹಾವೇರಿ ಮುಂತಾದೆಡೆಗಳಲ್ಲಿ ಹಿಂಸಾಚಾರ ನಡೆಯಲು ಅವಕಾಶ ಮಾಡಿಕೊಟ್ಟ ಜೆ.ಎಚ್.ಪಟೇಲ ಸರಕಾರ ಜಿಲ್ಲೆಗಳ ಪುನರ್ವಿಂಗಡಣೆಯ ಆಡಳಿತಾತ್ಮಕ ಸಮಸ್ಯೆಯನ್ನು ಪರಿಹರಿಸುವ ಜವಾಬ್ದಾರಿಯನ್ನು ಸರಕಾರಿ ಕಾರ್ಯದರ್ಶಿಗಳ ಕೂಟಕ್ಕೆ ಬಿಟ್ಟುಕೊಟ್ಟು ಈಗ ಏಳು ಜಿಲ್ಲೆಗಳ ಹೆಸರುಗಳನ್ನು ಪ್ರಕಟಿಸಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿದ್ದ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳು, ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳು, ಮದ್ರಾಸ್ ಪ್ರಾಂತದ ಎರಡು ಜಿಲ್ಲೆಗಳು, ಮೈಸುರು ಸಂಸ್ಥಾನದ ಹತ್ತು ಜಿಲ್ಲೆಗಳು, ಕೊಡಗು ಪ್ರಾಂತ ಒಂದು ಜಿಲ್ಲೆ ಹೀಗೆ ಇಪ್ಪತ್ತು ಜಿಲ್ಲೆಗಳನ್ನು ಹೊಂದಿದ್ದ ಕರ್ನಾಟಕ ರಾಜ್ಯ ಇಪ್ಪತ್ತೊಂಭತ್ತು ಜಿಲ್ಲೆಗಳ ರಾಜ್ಯವಾಗಲಿದೆ. ದೀರ್ಘ ಕಾಲದಿಂದಲೂ ನನೆಗುದಿಗೆ ಬಿದ್ದಿದ್ದು, ಆರ್ಥಿಕ ಮಂತ್ರಿಗಳ ಸಹಮತ ಪಡೆಯದೆ ಈಗಾಗಲೇ ಆರಿಸಿ ಬಂದಿರುವ ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿಗಳು ವಿಂಗಡಣೆಯ ತರುವಾಯ ಆಡಳಿತಾತ್ಮಕ ಸಮಸ್ಯೆ, ಸದಸ್ಯರ ಸಮಸ್ಯೆ, ತಾಲೂಕು ಸೇರ್ಪಡೆಗಳ ಸಮಸ್ಯೆಗಳನ್ನೆಲ್ಲಾ ಮುಂದಿನ ಭವಿಷ್ಯತ್ತಿಗೆ ಬಿಟ್ಟುಕೊಟ್ಟು ತರಾತುರಿಯಲ್ಲಿ ಈಶ್ವರನಾಮ ಸಂವತ್ಸರದಲ್ಲಿ ಪಾದಾರ್ಪಣೆ ಮಾಡುತ್ತಿರುವಾಗ ಒಂಭತ್ತು ಜಿಲ್ಲೆಗಳ ಹೆಸರುಗಳನ್ನು ಪ್ರಕಟಿಸುವ ಒಳಾರ್ಥವನ್ನು ತಿಳಿದುಕೊಳ್ಳಬೇಕಾಗಿದೆ.

ದೇವೇಗೌಡರ ಸಂಯುಕ್ತ ರಂಗ ಸರಕಾರಕ್ಕೆ ತಮ್ಮ ಬೆಂಬಲವನ್ನು ಕಾಂಗ್ರೆ ಅಧ್ಯಕ್ಷ ಸೀತಾರಾಂ ಕೇಸರಿಯವರು ಹಿಂತೆಗೆದುಕೊಂಡುದರ ಹಿನ್ನೆಲೆಯಲ್ಲಿ ದಿಲ್ಲಿಯಲ್ಲುಂಟಾದ ರಾಜಕೀಯ ಗೊಂದಲದ ಪರಿಣಾಮ ರಾಜ್ಯದ ತನ್ನ ಪಕ್ಷದ ಮೇಲೂ ಬೀಳಬಹುದು. ಆದರಿಂದಾಗಿ ತನ್ನ ಸರಕಾರ ಹೊಸ ಸಮಸ್ಯೆಗಳನ್ನೆದುರಿಸಬೇಕಾಗಿ ಬರಬಹುದೆಂಬ ಭೀತಿಯಿಂದ ಜಿಲ್ಲೆಗಳ ಹೆಸರುಗಳನ್ನಷ್ಟೇ ಈಗ ಪ್ರಕಟಿಸಿ, ನವಂಬರ್ ಒಂದರಂದು ಈ ಜಿಲ್ಲೆಗಳು ವಿಧಿವತ್ತಾಗಿ ಉದಯಗೊಳ್ಳುತ್ತವೆಂದೂ ಅಷ್ಟು ಹೊತ್ತಿಗಾಗಲೇ ಹೊಸ ಜಿಲ್ಲೆ, ಹೊಸ ಜಿಲ್ಲಾ ಪಂಚಾಯತಿಗಳು ಹಾಗೆಯೇ ಆಡಳಿತೆಯಲ್ಲಿಯ ಕಾರ್ಯಾಂಗ ಮತ್ತು ನ್ಯಾಯಾಂಗಗಳು ಕಾರ್ಯವಿಧಾನವನ್ನು ಬಗೆಹರಿಸುವ ಆಶ್ವಾಸನೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ದಿಲ್ಲಿಯ ರಾಜಕೀಯ ಆಗು ಹೋಗುಗಳಿಂದಾಗಿ ಕರ್ನಾಟಕದ ಜನತಾದಳ ಸರಕಾರದ ಮೇಲೆ ಹೆಚ್ಚಿನ ಅವಾಂತರ ಉಂಟಾಗಲಾರದೆಂಬ ಆಶಯವನ್ನು ನಾವು ವ್ಯಕ್ತಪಡಿಸಿದ್ದರೂ ಕೂಡಾ ಆಳುವ ಜನಾತದಳದ ಮುಖಂಡರಲ್ಲಿ ಧೈರ್ಯ ನೆಲೆಯೂರಿ ನಿಂತಿರದ ಕಾರಣ ಬಹುತೇಕ ಹೊಸ ಜಿಲ್ಲೆಗಳ ಹೆಸರುಗಳನ್ನು ಪ್ರಕಟಿಸಿ ತಮ್ಮವರನ್ನು ಸಮಾಧಾನ ಪಡಿಸುವ ಹಾಗೆಯೇ ಈ ತಿಂಗಳ ಕೊನೆ ಯೊಳಗಾಗಿಯೇ ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸುವ ಹಾಗೆಯೇ ಅಷ್ಟು ಪ್ರಭಾವಿ ತರಲ್ಲದ ಕೆಲವರನ್ನು ಮಂತ್ರಿ ಮಂಡಲದಿಂದ ಕೈಬಿಟ್ಟು, ಹೊರಗಿನಿಂದ ಗೊಂದಲ ಉಂಟು ಮಾಡುವ ದಿಕ್ಸೂಚಿ ಮುಖ್ಯಮಂತ್ರಿಯವರ ಕಚೇರಿಯಿಂದ ಹೊರಹೊಮ್ಮುತ್ತಿದೆ. ದಿಲ್ಲಿ ರಾಜಕೀಯ ಪ್ರಭಾವದ ಪರಿಣಾಮದಿಂದಲೋ ಅಥವಾ ರಾಜ್ಯಸರಕಾರದ ಪೂರ್ಣ ಪ್ರಜ್ಞ ವಿವೇಚನೆಯಿಂದಲೋ ದೊಡ್ಡ ಜಿಲ್ಲೆಗಳ ವಿಂಗಡಣೆ ಆಗಲಿದೆ. ನವಂಬರ್ ಒಂದರಂದು ವಿಧಿವತ್ತಾಗಿ ಹೊಸತಾಗಿ ರೂಪುಗೊಳ್ಳುವ ಚಿಕ್ಕ ಜಿಲ್ಲೆಗಳು, ಚೊಕ್ಕ ಆಡಳಿತ ನಡೆಸಿ ಜನರೆದುರಿಸುತ್ತಿರುವ ಸಮಸ್ಯೆಗಳ ತುರ್ತು ಪರಿಹಾರಕ್ಕೆ ನೆಲಬೀಡಾಗಲೆಂದು ಹಾರೈಸಿ, ಹೊಸ ಜಿಲ್ಲೆಗಳ ನಿರ್ಮಾಣವನ್ನು ಸ್ವಾಗತಿಸುತ್ತೇವೆ. ಅವು ರಚನಾತ್ಮಕವಾಗಿ ಕಾರ್ಯ ನಿರ್ವಹಿಸಲು ಎಲ್ಲಾ ವಿಧವಾದ ಅನುಕೂಲತೆಗಳನ್ನು ಒದಗಿಸುತ್ತವೆಂದು ಹಾರೈಸುತ್ತೇವೆ.

- ಎನ್.ಕೆ.ಉಪಾಧ್ಯಾಯ

ಉನ್ನತ ವಲಯದಲ್ಲಿನ ಭ್ರಷ್ಟಾಚಾರದ ಕಾನೂನು ವಿಚಾರಣೆಗೊಂದು ಆಘಾತ

ಹವಾಲ ಕಾಂಡದ ಬಗ್ಗೆ ತೀರ್ಪು ದುರದೃಷ್ಟಕರ - ಸಿಪಿಐ(ಎಂ)

ಹವಾಲಾ ಕಾಂಡದಲ್ಲಿ ಆಪಾದಿತರಾದ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಹಾಗೂ ಕಾಂಗ್ರೆಸ್ ಮುಖಂಡ ವಿ.ಸಿ.ಶುಕ್ಲಾ ಇವರ ವಿರುದ್ಧ ಸಿಬಿಐ ಮೊಕದ್ದಮೆಗಳನ್ನು ದಿಲ್ಲಿ ಹೈಕೋರ್ಟ್ ವಜಾ ಮಾಡಿದೆ. ಇದರ ಜೊತೆಗೆ ಈ ಕಾಂಡದ ಮೂಲದಲ್ಲಿರುವ ಡೈರಿಗಳ ಕುಖ್ಯಾತಿಯ ನಾಲ್ಕು ಜೈನ್‌ಗಳನ್ನೂ ಕೂಡಾ ದೋಷಮುಕ್ತ ಗೊಳಿಸಿದೆ. ಇದು ದುರದೃಷ್ಟಕರ ಬೆಳವಣಿಗೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಿಬಿಐ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಬೇಕು ಎಂದಿದೆ. ಈ ಕಾಂಡದಲ್ಲಿ ಹಲವು ಉನ್ನತ ರಾಜಕಾರಣಿಗಳ ಮೇಲೆ ಹಾಕಿರುವ ಚಾರ್ಜ್‌ಶೀಟ್‌ಗಳು ವಿಚಾರಣಾ ನ್ಯಾಯಾಲಯದ ಮುಂದಿವೆ. ಹೀಗಿರುವಾಗ ಒಪ್ಪಬಹುದಾದ ಸಾಕ್ಷ್ಯ ಯಾವುದು ಎಂಬುದನ್ನು ನಿರ್ಣಯಿಸುವುದನ್ನು ಆ ನ್ಯಾಯಾಲಯಕ್ಕೆ ಬಿಡುವುದೊಳ್ಳೆಯದು. ಮೇಲಿನ ನ್ಯಾಯಾಲಯವೊಂದು ಒಂದು ಎಫ್‌ಐಆರ್‌ನ್ನು ಅಥವಾ ಚಾರ್ಜ್‌ಶೀಟ್‌ನ್ನು ರದ್ದು ಮಾಡುವ ಸಂಗತಿ ಅಪರೂಪ ಎಂದು ಸಿಪಿಐ(ಎಂ) ವಕ್ತಾರರು ಅಭಿಪ್ರಾಯ ಪಟ್ಟಿದ್ದಾರೆ.

"ಜೈನ್ ಡೈರಿಗಳು ಮತ್ತು ಕಾಗದ ಪತ್ರಗಳು ವಿದೇಶದಿಂದ ಬಂದ ಹಣ ಹಾಗೂ ಅದರ ಪಾವತಿಗಳ ಒಂದು ವ್ಯವಸ್ಥಿತ ಲೆಕ್ಕ ಪತ್ರವನ್ನು ತೋರಿಸಿವೆ. ಇವೆಲ್ಲಾ ಸುಸಂಬದ್ಧವಾದ ಒಂದು ಸಮಗ್ರ ದಸ್ತಾವೇಜು. ಹಣ ಪಡೆದವರೆನ್ನಲಾದ ಕೆಲವು ಪೂರ್ಣವೋ, ಭಾಗಶಃವೋ ಹಣ ಪಡೆದುದನ್ನು ಒಪ್ಪಿಕೊಂಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಭಾರತೀಯ ಸಾಕ್ಷ್ಯ ಶಾಸನದ 60ನೇ ವಿಭಾಗದ ಪ್ರಕಾರ ಯಾವುದನ್ನು ಸಾಕ್ಷ್ಯವಾಗಿ ಒಪ್ಪಬಹುದು ಎಂಬ ಬಗ್ಗೆ ಹೈಕೋರ್ಟಿನ ಮಾತು ಸಾಧುವಲ್ಲ ಎಂದು ಸಿಪಿಐ(ಎಂ) ವಕ್ತಾರರು ಮುಂದುವರಿದು ಹೇಳಿದ್ದಾರೆ.

"ಈ ನ್ಯಾಯಾಂಗೀಯ ಹಸ್ತಕ್ಷೇಪ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಕಾನೂನು ವಿಚಾರಣೆಯ ಮೇಲೆ ಒಂದು ಆಘಾತ ನೀಡಲಿದೆ. ಹವಾಲಾ ಕೇಸನ್ನು ಹೂತು ಬಿಡದಂತೆ ನೋಡಿಕೊಳ್ಳಲು ಸಿಬಿಐ ಈ ತೀರ್ಪಿನ ವಿರುದ್ಧ ಅಪೀಲು ಹೋಗುವುದು ಅವಶ್ಯಕ. ಹವಾಲಾ ಮೊಕದ್ದಮೆಯಲ್ಲಿ ಆಳುವ ವಲಯಗಳಲ್ಲಿನ ಭ್ರಷ್ಟ ಕೂಟಕ್ಕೆ ಸಂಬಂಧಪಟ್ಟಂತೆ ಅತ್ಯಂತ ವ್ಯಾಪಕ ಆಯಾಮವಿದೆ ಎಂದು ಸಿಪಿಐ(ಎಂ) ವಕ್ತಾರರು ಹೇಳಿದ್ದಾರೆ.

"ಈ ತೀರ್ಪಿನ ಒಂದು ಸಕಾರಾತ್ಮಕ ಅಂಶವೆಂದರೆ ಶಾಸಕರು ಕೂಡಾ ಭ್ರಷ್ಟಾಚಾರ ತಡೆ ಶಾಸನದ ವ್ಯಾಪ್ತಿಗೆ ಬರುವ ಸಾರ್ವಜನಿಕ ಸೇವಕರು, ಆದ್ದರಿಂದ ಇವರ ವಿರುದ್ಧ ವಿಚಾರಣೆಗೆ ಮೊದಲೇ ಮಂಜೂರಾತಿ ಪಡೆಯುವ ಅಗತ್ಯವಿಲ್ಲ ಎಂಬುದು" ಎಂದೂ ಸಿಪಿಐ(ಎಂ) ವಕ್ತಾರರು ಹೇಳಿದ್ದಾರೆ.

(ಐಎನ್‌ಎಸ್)

ಎನ್.ಜಿ.ಇ.ಎಫ್. ಹಗರಣ - ಸರಕಾರದ ಅಸಮರ್ಪಕ ಧೋರಣೆ

- ಎನ್.ಕೆ.ಉಪಾಧ್ಯಾಯ

ಹಿಂದಿನ ನರಸಿಂಹರಾವ್ ಸರಕಾರ, ಇಂದಿನ ದೇವೇಗೌಡ ಸರಕಾರ ಅನುಸರಿಸುತ್ತಿರುವ ಉದಾರ ಆರ್ಥಿಕ ನೀತಿಗೆ ನಮ್ಮ ರಾಜ್ಯದ ಹಲವಾರು ಕೈಗಾರಿಕೆಗಳು ಬಲಿ ಬೀಳುತ್ತಿವೆ. ಖಾಸಗಿ ಕೈಗಾರಿಕಾ ಮಾಲಿಕರ ಮಡಿಲಲ್ಲಿ ಆಶ್ರಯ ಪಡೆಯುವ ಹುನ್ನಾರದಲ್ಲಿದೆ. ರಾಜ್ಯ ಸರಕಾರ ಈ ಕ್ರಮಕ್ಕೆ ಬಹಿರಂಗ ಪ್ರೋತ್ಸಾಹ ನೀಡುತ್ತಿದೆ. ಹಾಗಾಗಿ ನಾವು ಹುಟ್ಟ ಬೆಳೆಸಿದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗೆ ಅಪಾಯದ ಹಾದಿಯನ್ನುಂಟು ಮಾಡುತ್ತಿದೆ. ಇದಕ್ಕೆ ಮೈಸೂರಿನ ವಿಕ್ರಾಂತ್ ಟಯರ್ಸ್ ಒಂದಾದರೆ ಈಗ ಬೆಂಗಳೂರಿನ ಹೆಸರಾಂತ ಎನ್.ಜಿ.ಇ.ಎಫ್. ಕಾರ್ಖಾನೆಯ ದುರಂತ ಕತೆ ಉದಾಹರಣೆಯಾಗಿದೆ.

ನಷ್ಟ ಅನುಭವಿಸುತ್ತಿರುವ ಎನ್.ಜಿ.ಇ.ಎಫ್. ಅನ್ನು ಏಪ್ರಿಲ್ 2ರಿಂದ 15 ರವರೆಗೆ ಉತ್ಪಾದನಾ ವಿಧಾನವನ್ನು ಪುನರ್ ರೂಪಿಸಲಿಕ್ಕೆಂದು ಹೇಳಿ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಈ ಅವಧಿಯಲ್ಲಿ ನೌಕರರು ಪೂರ್ಣ ವೇತನ ಪಡೆಯಲಿದ್ದಾರೆಂದು ಆಡಳಿತ ವರ್ಗ ಪ್ರಕಟಿಸಿದೆ. ಕಾರ್ಮಿಕ ವರ್ಗ ಮಾತ್ರ ಆಡಳಿತ ವರ್ಗದ ಈ ಕ್ರಮವನ್ನು ವಿರೋಧಿಸಿದೆ.

ರಾಜ್ಯದ ಪ್ರತಿಷ್ಠಿತ ಸರಕಾರಿ ಉದ್ದಿಮೆಗಳಲ್ಲಿ ಮುಂಚೂಣಿಯಲ್ಲಿದ್ದ ಎನ್.ಜಿ.ಇ.ಎಫ್. ಲಾಭಗಳಿಸುವಲ್ಲಿ ಮುಂಚೂಣಿಯಲ್ಲಿತ್ತು. ಕಾರ್ಖಾನೆಯ ಆಡಳಿತೆಯಲ್ಲಿ ಸರಕಾರದ ಹಸ್ತಕ್ಷೇಪ ಹಾಗೆಯೇ ಉದಾರೀಕರಣ ನೀತಿ ಈ ಕಾರ್ಖಾನೆಯನ್ನು ನಷ್ಟದ ಹಾದಿಗಿಳಿಸಿದೆ. ಜರ್ಮನಿಯ ಎಇಜಿ ಸಹಯೋಗದೊಂದಿಗೆ ಟ್ರಾನ್ಸ್‌ಫಾರ್ಮರ್ ಮುಂತಾದ ಶ್ರೇಷ್ಠ ದರ್ಜೆಯ ವಿದ್ಯುತ್ ಸಲಕರಣೆಗಳನ್ನು ತಯಾರಿಸುತ್ತಿರುವ ಪ್ರತಿಷ್ಠಿತ ಈ ಉದ್ದಿಮೆ ಏಕಾಏಕಿ ನಷ್ಟ ಅನುಭವಿಸಲು ಸಾಧ್ಯವಿಲ್ಲ. ಕಾರ್ಖಾನೆಯನ್ನು ಖಾಸಗೀಕರಣ ಗೊಳಿಸಬೇಕು, ಆ ನಿಟ್ಟಿನಲ್ಲಿ 200 ಕೋಟಿ ರೂಪಾಯಿಗೂ ಹೆಚ್ಚು ಬೆಲೆಯ ಕಾರ್ಖಾನೆಯ ಬಯಲು ಪ್ರದೇಶವನ್ನು ಮಾರಾಟ ಮಾಡಿ ಆ ಹಣದಲ್ಲಿ ತಾವೂ ಪಾಲುದಾರರಾಗಬೇಕೆಂಬ ದುರುದ್ದೇಶ ದಿಂದಲೇ ಕಾರ್ಖಾನೆ ಮುಚ್ಚಿ, ಉತ್ಪಾದನೆ ನಿಲ್ಲಿಸಿ, ಕೆಲಸಗಾರರಿಗೆ ಪೂರ್ಣ ಸಂಬಳ ನೀಡುವ ಉಪ ಕ್ರಮ ನಡೆಯುತ್ತಿದೆ.

ಹತ್ತು ವರ್ಷಗಳ ಹಿಂದೆ ಎನ್.ಜಿ.ಇ.ಎಫ್. ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಪ್ರಭಾಕರರಾವ್ ಮತ್ತು ಕೆಲವು ವ್ಯಕ್ತಿಗಳ ಮೇಲೆ ಹಲವಾರು ಆರೋಪಗಳನ್ನು ಹೊರಿಸಲಾಗಿತ್ತು. ಆಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಬೈರೇಗೌಡರ ನೇತೃತ್ವದಲ್ಲಿ ಸದನ ಸಮಿತಿ ವಿಚಾರಣೆ ನಡೆಸಿ ಯಂತ್ರೋಪಕರಣಗಳ ವ್ಯವಹಾರದಲ್ಲಿ ಹಲವು ಪ್ರತಿಷ್ಠಿತ ವ್ಯಕ್ತಿಗಳ ಕೈವಾಡವಿರುವುದರಿಂದ ಅದನ್ನು ಸಿಓಡಿಗೆ ಒಪ್ಪಿಸಲು ಸಲಹೆ ಮಾಡಿದ್ದರು. ಸಿಓಡಿ ತನಿಖೆ ಪ್ರಾರಂಭಿಸಿದಾಗ ಏನೋ ಕಾರಣದಿಂದ ಅದನ್ನು ಸಿಬಿಐಗೆ ಒಪ್ಪಿಸಲಾಯಿತು. ಆದರೆ ಅದರ ವರದಿ ಇಂದಿಗೂ ಬೆಳಕು ಕಾಣುತ್ತಿಲ್ಲ. ಯಾಕೆಂದರೆ ಉದಾರ ನೀತಿಯ ಪ್ರತಿಫಲವಾಗಿ ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಯಲ್ಲಿ ಕೇಂದ್ರ ಮಂತ್ರಿಗಳ ಕೈವಾಡ ಈಗಾಗಲೇ ಬಯಲಾಗಿರುವಾಗ, ರಾಜ್ಯ ಸರಕಾರದ ಲಾಭದಲ್ಲಿದ್ದ ಈ ಕಾರ್ಖಾನೆ ಈಗ ನಷ್ಟದಲ್ಲಿರಲಿಕ್ಕೆ ಅದರ ವ್ಯವಹಾರದಲ್ಲಿ ಭಾಗೀದಾರರಾದ ಪ್ರತಿಷ್ಠಿತ ವ್ಯಕ್ತಿಗಳನ್ನು ರಕ್ಷಿಸುವ ದೃಷ್ಟಿಯಿಂದಲೇ ಸಿಬಿಐ ತನ್ನ ವಿಚಾರಣೆಯನ್ನು ಆಮೆ ವೇಗಕ್ಕೆ ಸೀಮಿತಗೊಳಿಸಿರುವುದರಲ್ಲಿ ಅರ್ಥವಿದೆ.

ಉದಾರೀಕರಣ ನೀತಿಯಿಂದಾಗಿ ನಷ್ಟದಲ್ಲಿರುವ ಸರಕಾರೀ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ತಮಾಷೆ ನಡೆದಿದೆ. ಅದಕ್ಕೆ ನಮ್ಮ ರಾಜ್ಯದ ಬಟ್ಟೆ ನೂಲಿನ ಗಿರಣಿಗಳೂ, ಎನ್.ಜಿ.ಇ.ಎಫ್., ವಿಕ್ರಾಂತ್ ಟೈರ್ಸ್, ಮೈಸುಗರ್ ಕಾರ್ಖಾನೆ, ಮೈಸೂರು ಪೇಪರ್ ಮಿಲ್ಸ್, ಮೈಸೂರು ಲ್ಯಾಂಪ್ಸ್, ಮೊದಲಾದ ಲಾಭ ಗಳಿಕೆಯ ಕಾರ್ಖಾನೆಗಳು ಬಲಿಯಾಗುತ್ತಿವೆ. ದೇಶಕ್ಕೂ, ದುಡಿಯುವ ವರ್ಗಕ್ಕೂ ಹಾನಿಕಾರಕವಾದ ಈ ಉದಾರೀಕರಣ ನೀತಿಯನ್ನು ಕೈಬಿಡಬೇಕೆಂದು, ಕಾರ್ಮಿಕರ ಸಹಯೋಗ ದಿಂದ ನಷ್ಟದಲ್ಲಿರುವ ಕಾರ್ಖಾನೆಗಳನ್ನು ಲಾಭದಾಯಕವನ್ನಾಗಿ ಮಾಡಿ ಖಾಸಗೀ ಕಂಪನಿಗಳ ಜೊತೆಯಲ್ಲಿ ಪೈಪೋಟಿ ನಡೆಸುವಂತೆ ರಾಜ್ಯ ಸರಕಾರ ಕಾರ್ಮಿಕರಿಗೆ ಪ್ರೋತ್ಸಾಹ ನೀಡಬೇಕೆಂದು ಬಯಸುತ್ತೇವೆ. ಕಾರ್ಮಿಕರಿಂದ ಕಾರ್ಖಾನೆ ನಷ್ಟ ಅನು ಭವಿಸುತ್ತಿಲ್ಲ. ಕಾರ್ಖಾನೆಯ ಅಸಮರ್ಪಕ ಆಡಳಿತೆಯಿಂದಾಗಿ, ಭ್ರಷ್ಟಾಚಾರ ಸೋರುವಿಕೆಗಳಿಂದಾಗಿ ನಷ್ಟವಾಗುತ್ತಿದೆ ಯೆಂಬುದಕ್ಕೆ ಸಾಬೀತು ಪಡಿಸಲು ಎನ್.ಜಿ.ಇ.ಎಫ್. ಕಾರ್ಖಾನೆ ನಮ್ಮ ಮುಂದೆ ಎದ್ದು ನಿಂತಿದೆ. ನೂರಾರು ಕೋಟಿ ರೂಪಾಯಿಯ ಆರ್ಡರುಗಳು ಫೈಲುಗಳಲ್ಲಿ ಕಣ್ಣೀರಿಡುತ್ತಿವೆ. ಕಾರ್ಮಿಕರು ಮೈ ತುಂಬ ದುಡಿಯಲು ಸಿದ್ಧರಿದ್ದಾರೆ. ಆದರೆ ಆಡಳಿತ ವರ್ಗ ಕಚ್ಚಾ ಮಾಲು ಒದಗಿಸದೆ ಕೆಲಸಕ್ಕೆ ಅಡ್ಡಿಬರುತ್ತಿದೆ. ಇಂಥ ದಾರುಣ ಪರಿಸ್ಥಿತಿಯಿಂದ ಕಾರ್ಖಾನೆಗಳನ್ನು ರಕ್ಷಿಸಲು ನಾವೂ ನೀವೂ ಮುಂದಾಗಬೇಕಾಗಿದೆ.

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಒಂದು ಧೀಮಂತ ಹೋರಾಟ

ಕೃಪಾನಿಧಿ ಕಾಲೇಜು ವಿದ್ಯಾರ್ಥಿಗಳಿಗೆ ಕೊನೆಗೂ ಜಯ

ಒಂದು ತಿಂಗಳಿಗೂ ಹೆಚ್ಚು ಕಾಲದಿಂದ ಶಿಕ್ಷಣದ ಹೆಸರಲ್ಲಿ ವ್ಯಾಪಾರ, ದಮನಕ್ಕೆ ಇಳಿದ ಬೆಂಗಳೂರಿನ ಕೃಪಾನಿಧಿ ಕಾಲೇಜಿನ ವ್ಯವಸ್ಥಾಪಕರ ವಿರುದ್ಧ ವಿದ್ಯಾರ್ಥಿಗಳು ನಡೆಸಿದ ಹೋರಾಟ ಈಗ ಯಶಸ್ವಿಯಾಗಿದೆ. ಏಪ್ರಿಲ್ 9 ರಂದು ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರೂ, ಪ್ರಾಂಶುಪಾಲರು ಎಸ್‌ಎಫ್‌ಐ ನಡುವೆ ಒಂದು ಒಪ್ಪಂದ ಏರ್ಪಟ್ಟು ವಿದ್ಯಾರ್ಥಿ ಮುಖಂಡರ ಅಮಾನತ್ತು ರದ್ದುಗೊಳಿಸಲಾಗಿದೆ. ಮುಖ್ಯ ವಾರ್ಡನ್ ರಾಜೀವ್ ರಾಯ್‌ರನ್ನು ಸಸ್ಪೆಂಡ್ ಮಾಡಲಾಗಿದೆ. ಸಹಾಯಕ ವಾರ್ಡನ್ ಪ್ರಭಾಕರ ಪಾಂಡೆಯವರನ್ನು ಲೆಕ್ಚರರ್ ಹುದ್ದೆಯಿಂದ ಟ್ಯೂಟರ್ ಹುದ್ದೆಗೆ ಇಳಿಸಲಾಗಿದೆ. ಆತನ ವಿರುದ್ಧ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಕೊಡಲು ನಿರಾಕರಿಸುತ್ತಿದ್ದ ಮಾರ್ಕ್ಸ್‌ಕಾರ್ಡ್‌ಗಳನ್ನು ಹಿಂದಿರುಗಿಸಲಾಗಿದೆ. ವಿದ್ಯಾರ್ಥಿಗಳಿಗೆ ಸಂಘ ಕಟ್ಟಿಕೊಳ್ಳಲು ಆಡಳಿತ ಮಂಡಳಿ ಒಪ್ಪಿಕೊಂಡಿದೆ. ಹಾಸ್ಟೆಲ್ ಕಡ್ಡಾಯ ಮಾಡದಿರಲು, ದಂಡ ಶುಲ್ಕ ವಸೂಲಿ ಮಾಡದಿರಲು ಕೂಡಾ ಆಡಳಿತ ಮಂಡಳಿ ಒಪ್ಪಿಕೊಂಡಿದೆ.

ಶಿಕ್ಷಣದ ಖಾಸಗೀಕರಣದ ದುಷ್ಪರಿಣಾಮದ ಬಗ್ಗೆ ಪ್ರಗತಿಪರರು ಹಾಗೂ ಪ್ರಜಾಪ್ರಭುತ್ವ ವಾದಿಗಳು ಜನತೆಗೆ ಎಚ್ಚರಿಸುತ್ತಲೇ ಬಂದಿದ್ದಾರೆ. ಇವುಗಳು ಹಿಂದೆ ಎಂತಹ ಸತ್ಯ ಅಡಗಿದೆ ಎಂಬುದಕ್ಕೆ ಕೃಪಾನಿಧಿ ಕಾಲೇಜಿನ ವ್ಯವಹಾರಗಳು ಒಂದು ಜ್ವಲಂತ ಉದಾಹರಣೆ. ಕೃಪಾನಿಧಿ ಕಾಲೇಜಿನ ಆಡಳಿತ ಮಂಡಳಿಯ ವಿರುದ್ಧ ಹೋರಾಟಕ್ಕೆ ಇಳಿಯಬೇಕಾಗಿ ಬಂದ ವಿದ್ಯಾರ್ಥಿಗಳು ಇದನ್ನು ಸ್ವತಃ ಅನುಭವಿಸಿದ್ದಾರೆ. ಈ ಹೋರಾಟಕ್ಕೆ ಒಂದು ಸ್ಪಷ್ಟ ದಿಕ್ಕು ನೀಡಲು ಶ್ರಮಿಸಿದ ಎಸ್‌ಎಫ್‌ಐ ನ ರಾಜ್ಯ ಉಪಾಧ್ಯಕ್ಷರಾದ ಆರ್.ರಾಮಕೃಷ್ಣರಿಂದ ಈ ಬಗ್ಗೆ ಒಂದು ವರದಿ.

'ಕೃಪಾನಿಧಿ ಕಾಲೇಜು' ಬೆಂಗಳೂರು ನಗರದ ಕೋರಮಂಗಲ ಬಡಾವಣೆಯಲ್ಲಿರುವ ಒಂದು ಖಾಸಗಿ ಶಿಕ್ಷಣ ಸಂಸ್ಥೆ. ಔಷಧ('ಬಿ'ಫಾರ್ಮ, 'ಡಿ' ಫಾರ್ಮ), ನರ್ಸಿಂಗ್, ಫಿಸಿಯೋಥೆರಪಿ ಮುಂತಾದ ಅರೆ ವೈದ್ಯಕೀಯ ಕೋರ್ಸುಗಳಿರುವ ಕಾಲೇಜು. ಸುಮಾರು 650 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಕಾಲೇಜಿನಲ್ಲಿ ಅಭ್ಯಾಸ ಮಾಡು ತ್ತಿರುವ ಬಹುತೇಕ ವಿದ್ಯಾರ್ಥಿಗಳು ಹೊರ ರಾಜ್ಯಗಳಲ್ಲಿ 'ಕೃಪಾನಿಧಿ' ಸಂಸ್ಥೆಯ ಜಾಹೀರಾತನ್ನು ನೋಡಿ, ಕಾಲೇಜಿನ ಸ್ಥಿತಿಗಳನ್ನು ಅರಿಯದೇ ದುಬಾರಿ ವಂತಿಗೆ ಕೊಟ್ಟು ಸೇರಿರು ವವರು. 50-60-75 ಸಾವಿರಗಳು 1, 1.5 ಲಕ್ಷ ರೂಪಾಯಿಗಳು, ವಿವಿಧ ಕೋರ್ಸುಗಳಿಗೆ ವಿವಿಧ ದರಗಳು- ಎಲ್ಲವೂ ಅನಧಿಕೃತ - ರಸೀದಿ ಇಲ್ಲ. ಕಾಲೇಜಿನಲ್ಲಿ ಅಕ್ರಮ ಹಣ ಸುಲಿಗೆಗೆ ಲೆಕ್ಕವೇ ಇಲ್ಲ. 25 ಸಾವಿರ ರೂಗಳು ಬೋಧನ ಶುಲ್ಕಕ್ಕೆ ತೆರಬೇಕು. 22850-00 ರೂಗೆ ಮಾತ್ರ ರಸೀದಿ. ಮಿಕ್ಕಿದ್ದು ಕೇಳಬಾರದು. ಪ್ರತಿ ವಿದ್ಯಾರ್ಥಿಯು ಕಂಪ್ಯೂಟರ್ ತರಬೇತಿ ಶುಲ್ಕ ಎಂದು ಒಂದು ಸಾವಿರ ರೂ. ಕಡ್ಡಾಯವಾಗಿ ಕೊಡಬೇಕು. ಕಂಪ್ಯೂಟರ್ ತರಬೇತಿ ಏಕೆ ಕೊಡುತ್ತಿಲ್ಲ ಎಂದು ಮಾತ್ರ ಯಾರೂ ಕೇಳಬಾರದು. 4500 ರೂ. ಶುಲ್ಕ ಕೊಟ್ಟು ಎಲ್ಲರೂ ಕಡ್ಡಾಯವಾಗಿ ಸೇರಿದ 'ಫಾರ್ಮ ಸುಟಿಕಲ್' ಮಾರ್ಕೆಟ್ ಮೇನೇಜ್‌ಮೆಂಟ್ ಕೋರ್ಸ್, 2 ವರ್ಷಕ್ಕೆ ಬದಲಾಗಿ ನಾಲ್ಕೆ ತಿಂಗಳಿಗೇಕೆ ನಿಂತಿತು ಎಂದು ಯಾರೂ ಕೇಳಬಾರದು. ಇಲ್ಲದ ವಿದ್ಯಾರ್ಥಿ ಸಂಘಕ್ಕೆ ವಾರ್ಷಿಕ 650 ರೂ. ಶುಲ್ಕ ಇತ್ಯಾದಿ ಇತ್ಯಾದಿ.

'ಕೃಪಾನಿಧಿ ಶಿಕ್ಷಣ ಸಂಸ್ಥೆ' ವಸತಿ ಕಾಲೇಜೇನಲ್ಲ, ಆದರೂ ಹೊರ ರಾಜ್ಯದ ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ಉಳಿಯುವುದು ಕಡ್ಡಾಯ. ಒದ್ದರೆ ಬಿದ್ದು ಹೋಗುವಂತಹ ಕಟ್ಟಡ, ಸೋರುವ ಮಾಳಿಗೆ, ನೀರಿಲ್ಲ, ಶೌಚಾಲಯಗಳಿಗೆ ಬಾಗಿಲಿಲ್ಲ, ಕುಡಿಯುವ ನೀರಿನ ಕೊಳವೆಗೆ ಕೊಳಚೆ ನೀರು ಸೇರುತ್ತದೆ ಕೇಳುವವರಿಲ್ಲ. ಊಟ ಒಂದು ಕಡೆ, ವಸತಿ ಒಂದು ಕಡೆ, ವಿದ್ಯಾರ್ಥಿಗಳು ದಿನಕ್ಕೆ ಮೂರು ಬಾರಿ ಮೈಲಿಗಟ್ಟಲೆ ನಡೆಯಬೇಕು. ಪ್ರಾಣಿಗಳೂ ತಿನ್ನಲು ಕಷ್ಟ ಪಡುವಂತಹ ಗುಣಮಟ್ಟದ ಆಹಾರ, ಅಲ್ಸರ್ ಇತ್ಯಾದಿ ಆರೋಗ್ಯದ ತೊಂದರೆ ಇದ್ದರೂ ವಿನಾಯಿತಿ ಇಲ್ಲ. ಹಾಸ್ಟೆಲ್ ಕಡ್ಡಾಯ. 1010-00 ರೂ ತಿಂಗಳಿಗೆ 'ಆಹಾರದ ಬಿಲ್' ವಿದ್ಯುತ್ ಬಿಲ್, ನೀರಿನ ಬಿಲ್, ನಿರ್ವಹಣೆಗೆ ರಿಪೇರಿಗೆ, ಇತ್ಯಾದಿ ಇತ್ಯಾದಿಗಳಿಗೆ ನಿರಂತರ ಸುಲಿಗೆ, ಸರಾಸರಿ ತಿಂಗಳಿಗೆ ಪ್ರತಿ ವಿದ್ಯಾರ್ಥಿ 2500 ತೆರಬೇಕು. ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಿಗೂ 'ಪುರುಷ ವಾರ್ಡನ್'ಗಳು!!

ಇಂತಹ ಗಂಭೀರ ಸಮಸ್ಯೆಗಳ ಬಗೆಗೆ ವಿದ್ಯಾರ್ಥಿಗಳು ದನಿಯೆತ್ತ ಬಾರದು, ವಿದ್ಯಾರ್ಥಿಗಳ ಎಸ್‌ಎಸ್‌ಎಲ್‌ಸಿ-ಪಿಯುಸಿ ವಿವಿಧ ಕೋರ್ಸುಗಳ ವಿವಿಧ ವರ್ಷಗಳ ಮೂಲ ಅಂಕಪಟ್ಟಿಯನ್ನು ಆಡಳಿತ ಮಂಡಳಿ ಹಿಡಿದುಕೊಂಡಿತ್ತು. ಇಷ್ಟಾದ ಮೇಲೂ ಯಾರಾದರೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತನಾಡಿದರೆ ಅವರ ಮೇಲೆ ದೈಹಿಕ-ಮಾನಸಿಕ ದೌರ್ಜನ್ಯ.

ಅಸಮಾಧಾನದ ದನಿ

ಇಡೀ ಕಾಲೇಜಿನಲ್ಲಿ ಅಪ್ರಜಾಸತ್ತಾತ್ಮಕ ವಾತಾವರಣ. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ತಮ್ಮ ಅಸಮಾಧಾನವನ್ನು ಸೂಚಿಸಲು ವಿದ್ಯಾರ್ಥಿಗಳು ಕಪ್ಪು ಬಟ್ಟೆ ಧರಿಸಿ ತರಗತಿಗೆ ಹಾಜರಾದದ್ದೇ ದೊಡ್ಡ ಅಪರಾಧವಾಯಿತು. ಮಾರ್ಚ್ 3 ರ ರಾತ್ರಿ ರಾಜೀವ್ ರಾಯ್, ಪ್ರಭಾಕರ ಪಾಂಡೆ, ಮುಖ್ಯ ವಾರ್ಡನ್ ಮತ್ತು ಸಹಾಯಕ ವಾರ್ಡನ್ ಇಬ್ಬರೂ ಫಾರ್ಮಸಿ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಬಂದರು. ಮಲಗಿದ್ದ ವಿದ್ಯಾರ್ಥಿಗಳ ತಲೆಯ ಮೇಲೆ ನೀರು ಸುರಿದರು. ಎಬ್ಬಿಸಿ ಹೊರ ತಂದು ತಲೆಗೆ ಬಕೆಟ್ ಬೋರಲು ಹಾಕಿದರು. 'ಹಾಕಿ' ಕೋಲಿನಲ್ಲಿ ಹೊಡೆದರು. 'ಕಪ್ಪು ಬಟ್ಟೆ ಧರಿಸಲು ಹೇಳಿದವರು ಯಾರು? ವಿದ್ಯಾರ್ಥಿ ಮುಖಂಡರು ಯಾರು ಎಂಬುದು ಅವರಿಗೆ ಬೇಕಾಗಿತ್ತು. ಸುಮಾರು 14 ವಿದ್ಯಾರ್ಥಿಗಳನ್ನು ಹೀಗೆ ಹೊಡೆದರು. ಅರ್ಹತೆಯೇ ಇಲ್ಲದೆ ಅದೇ ಕಾಲೇಜಿನಲ್ಲಿ ಫಿಸಿಯೋಥೆರಪಿ ವಿಭಾಗದಲ್ಲಿ ಅಧ್ಯಾಪಕರೂ ಆಗಿರುವ ಈ ವಾರ್ಡನ್‌ಗಳು ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳು ಮಾಡುವುದಾಗಿ ಬೆದರಿಕೆ ಹಾಕಿದರು.

ಮಾರ್ಚ್ 4, 97 ರಂದು ವಿದ್ಯಾರ್ಥಿಗಳು ತರಗತಿ-ಹಾಸ್ಟೆಲ್‌ಗಳನ್ನು ಬಹಿಷ್ಕರಿಸಿ ಕಾಲೇಜಿನ ಮುಂದೆ ಧರಣಿ ಕುಳಿತರು. ಧರಣಿ ಎಂದರೆ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಎಲ್ಲರೂ ರಾತ್ರಿ-ಹಗಲು ಕಾಲೇಜಿನ ಮುಂದೆಯೇ ಕೂರುವುದು, ಅಲ್ಲೇ ಅಡಿಗೆ ಅಲ್ಲೇ ಊಟ ಮಾಡುವುದು. ಸಂಜೆ-ರಾತ್ರಿ ಸ್ವಲ್ಪ ಅವಕಾಶ ಕೊಟ್ಟರೆ ತಮ್ಮನ್ನು ಹೊತ್ತುಕೊಂಡು ಹೋಗಬಹುದು ಎಂಬಂಥ ಸೊಳ್ಳೆಗಳ ಸಾಮೂಹಿಕ ಧಾಳಿಗೂ ಅಂಜದೇ ಹೋರಾಟ ಮುಂದುವರಿಯಿತು.

ಹೋರಾಟಕ್ಕೆ ತಿರುವು

ಎಸ್‌ಎಫ್‌ಐನ ಮಧ್ಯ ಪ್ರವೇಶ ಹೋರಾಟಕ್ಕೆ ಹೊಸ ತಿರುವನ್ನು ತಂದು ಕೊಟ್ಟಿತು. ಮಾರ್ಚ್ 8, 97 ರಂದು ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಕೆ.ಆರ್.ವೃತ್ತದವರೆಗೆ ಮೆರವಣಿಗೆ ನಡೆಸಿ, ರಾಜ್ಯಪಾಲರಿಗೆ ಮನವಿ ಪತ್ರ ಕೊಡಲಾಯಿತು. ಮಾರ್ಚ್ 10 ರಂದು ರಾಜೀವ್ ಗಾಂಧಿ ವೈದ್ಯಕೀಯ ವಿಶ್ವ ವಿದ್ಯಾಲಯದ ಮುಂದೆ ಪ್ರತಿಭಟನೆ ನಡೆಸಿ ಉಪಕುಲಪತಿಗಳಿಗೆ, ರಿಜಿಸ್ಟ್ರಾರ್‌ರವರಿಗೆ ವೈದ್ಯಕೀಯ ಶಿಕ್ಷಣ ಸಚಿವರಿಗೆ ಅರ್ಪಿಸಲಾಯಿತು. ಮಾರ್ಚ್ 11 ರಂದು ಬೆಂಗಳೂರು ವಿಶ್ವ ವಿದ್ಯಾಲಯದ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿ ರಿಜಿಸ್ಟ್ರಾರ್‌ರವರಿಗೆ ಮನವಿ ಅರ್ಪಿಸಲಾಯಿತು. ಅಂದೇ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಕಚೇರಿಯ ಮುಂದೆಯೂ ಪ್ರತಿಭಟನೆ ನಡೆಸಿ ನಿರ್ದೇಶಕರು-ಜಂಟಿ ನಿರ್ದೇಶಕರೊಂದಿಗೆ ಚರ್ಚಿಸಿ-ಮನವಿ ಸಲ್ಲಿಸಲಾಯಿತು. ಮಾರ್ಚ್ 12 ರಂದು ಕಾಲೇಜಿನ ಮುಂದೆ ದುಷ್ಟ ಮಾಲೀಕ ವರ್ಗದ ಹಾಗೂ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿರುವ ವಾರ್ಡನ್‌ಗಳ 'ಭೂತ' ದಹನ ನಡೆಸಲಾಯಿತು.

ಮಾರ್ಚ್ 14 ರಂದು ಈ ಸಮಸ್ಯೆಯ ಕುರಿತು ಸರಕಾರ ತತ್‌ಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ನೂರಾರು ವಿದ್ಯಾರ್ಥಿಗಳು ರಸ್ತೆ ತಡೆ ನಡೆಸಿ ಬಂಧನಕ್ಕೆ ಒಳಗಾದರು. ಮಾರ್ಚ್ 15 ರಂದು ಕೋರಮಂಗಲ ಬಡಾವಣೆಯಲ್ಲಿ ಆಡಳಿತ ಮಂಡಳಿ-ವಾರ್ಡನ್‌ಗಳ 'ಭೂತ'ದೊಂದಿಗೆ ಮೆರವಣಿಗೆ ನಡೆಸಿ ಸುಡಲಾಯಿತು. ಮಾರ್ಚ್ 17 ರಂದು ತುರ್ತುಕ್ರಮಕ್ಕಾಗಿ ಆಗ್ರಹಿಸಿ ವೈದ್ಯಕೀಯ ಶಿಕ್ಷಣ ಸಚಿವ ಡಾ|| ಶಂಕರ್ ನಾಯಕ್ ಮನೆಯ ಮುಂದೆ ಧರಣಿ ನಡೆಸಲಾಯಿತು.

ಈ ಎಲ್ಲ ಹೋರಾಟಗಳ ಫಲವಾಗಿ ಮಾರ್ಚ್ 18 ರಂದು ವೈದ್ಯಕೀಯ ಶಿಕ್ಷಣ ಸಚಿವರ ಕಛೇರಿ, ವಿಧಾನಸೌಧದಲ್ಲಿ ಸಚಿವರು ಹಾಗೂ ಎಸ್‌ಎಫ್‌ಐನ ಸಂಸ್ಥಾಪಕ ಮುಖಂಡ ಜಿ.ವಿ.ಶ್ರೀರಾಮರೆಡ್ಡಿ ಸಮ್ಮುಖದಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳು ಹಾಗೂ ಆಡಳಿತ ಮಂಡಳಿಯ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆದು ಒಪ್ಪಂದಕ್ಕೆ ಬರಲಾಯಿತು. ವಿದ್ಯಾರ್ಥಿಗಳ ಪ್ರಾಮಾಣಿಕ ಬೇಡಿಕೆಗಳು-ಗಂಭೀರ ಸಮಸ್ಯೆಗಳ ಬಗೆಗೆ ಸಚಿವರ ಎದುರು 'ಬೇರೇನೂ' ಮಾತನಾಡಲು ಸಾಧ್ಯವಾಗದ ಆಡಳಿತ ಮಂಡಳಿ ಎಲ್ಲವನ್ನೂ ಒಪ್ಪಿಕೊಂಡಿತು.

ಈ ನಡುವೆ ಬೆಂಗಳೂರು ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳ ಬೇಡಿಕೆಗಳ ಕುರಿತು ಸ್ಪಷ್ಟ ನಿರ್ದೇಶನ ನೀಡುವ ಆಜ್ಞೆ ಹೊರಡಿಸಿದೆ. ವಿದ್ಯಾರ್ಥಿಗಳ ಎಸ್‌ಎಸ್‌ಎಲ್‌ಸಿ-ಪಿಯುಸಿ ಮತ್ತು ಪದವಿಗಳ ವಿವಿಧ ವರ್ಷಗಳ ಅಂಕಪಟ್ಟಿಗಳನ್ನು ವಾಪಸ್ ಕೊಡಬೇಕು-ಹಾಸ್ಟೆಲ್ ಸೇರುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಬಾರದು - ಅಕ್ರಮ ಶುಲ್ಕ-ದಂಡ ವಸೂಲಿ ನಿಲ್ಲಬೇಕು - ಇತ್ಯಾದಿ.

ಬೆಂಗಳೂರು ವಿಶ್ವವಿದ್ಯಾಲಯದ ಸ್ಪಷ್ಟ ನಿರ್ದೇಶನ-ಸಚಿವರ ಸಮ್ಮುಖದಲ್ಲಿ ಏರ್ಪಟ್ಟ ಒಪ್ಪಂದದ ಆಧಾರದಲ್ಲಿ ಮಾರ್ಚ್ 18 ರಂದು ಮುಷ್ಕರವನ್ನು ವಾಪಸ್ ತೆಗೆದು ಕೊಳ್ಳಲಾಯಿತು.

ಖಾಸಗಿಯವರ ದುಷ್ಟಕೂಟದ ವಿರಾಟ್ ಸ್ವರೂಪ

ಸರಕಾರದ ನಿರ್ದೇಶನವನ್ನು ನಿರ್ಲಕ್ಷಿಸುವ ವಿಶ್ವ ವಿದ್ಯಾಲಯದ ಆಜ್ಞೆಯನ್ನೇ ಧಿಕ್ಕರಿಸುವ, ಖಾಸಗಿ ಶಿಕ್ಷಣ ಸಂಸ್ಥೆಗಳ ದುಷ್ಟ ಲಾಬಿಯ ವಿರಾಟ್ ಸ್ವರೂಪ, ಅದಕ್ಕೆ ಬೆಂಬಲವಾಗಿ ನಿಂತಿರುವ ನೌಕರಶಾಹಿ, ಇಂತಹ ದುಷ್ಟರ ರಕ್ಷಣೆಗೆ ನಿಂತಿರುವ ಪೋಲೀಸ್ ಪಡೆ, ತನ್ನ ಆಜ್ಞೆಯನ್ನು ಜಾರಿ ಮಾಡಿಸಲಾಗದ ವಿಶ್ವ ವಿದ್ಯಾಲಯದ ಅಸಹಾಯಕತೆ(!), ತೀಕ್ಷ್ಣ ಕ್ರಮ ಕೈಗೊಳ್ಳುವಲ್ಲಿ ಮೀನಾ-ಮೇಷ ಎಣಿಸುತ್ತಿರುವ ಸರಕಾರ, ಈ ಎಲ್ಲವುಗಳನ್ನು ಅರ್ಥ ಮಾಡಿಕೊಳ್ಳುವುದು ನಿಜಕ್ಕೂ ಕುತೂಹಲಕಾರಿಯಾಗಿದೆ.

ವಿದ್ಯಾರ್ಥಿಗಳ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪಿಕೊಳ್ಳುವ ಬದಲಾಗಿ ಆಡಳಿತ ಮಂಡಳಿ ಅಡ್ಡ ಹಾದಿ ಹಿಡಿದಿದೆ. ಹೋರಾಟದ ಹಂತದಲ್ಲಿ ಗೂಂಡಾಗಳನ್ನು ಕಳುಹಿಸಿ ವಿದ್ಯಾರ್ಥಿಗಳಿಗೆ ಚಾಕುತೋರಿಸಿ ಬೆದರಿಸುವುದು, ಮುಷ್ಕರ ಬಿಟ್ಟು ತರಗತಿಗೆ ಹಾಜರಾದವರಿಗೆ ಹೆಚ್ಚು ಅಂಕ ಕೊಡುವುದಾಗಿ ಹೇಳುವುದು, ವಿದ್ಯಾರ್ಥಿಗಳ ಪರೀಕ್ಷೆ ಅರ್ಜಿಯನ್ನು ವಿಶ್ವ ವಿದ್ಯಾಲಯಕ್ಕೆ ಕಳುಹಿಸುವುದಿಲ್ಲ ಎಂದು ಬೆದರಿಸುವುದು - ಇಂತಹವುಗಳಿಗೆ ಲೆಕ್ಕವಿಲ್ಲ.

ಈಗ ಮುಂಚೂಣಿಯಲ್ಲಿದ್ದ ವಿದ್ಯಾರ್ಥಿ ಮುಖಂಡರ ಮೇಲೆ ಕಾಲೇಜಿನ ಆಸ್ತಿಪಾಸ್ತಿಗೆ ಧಕ್ಕೆ ಮಾಡಿರುವುದಾಗಿ ಸುಳ್ಳು ದೂರು ನೀಡಲಾಗಿದೆ. ಅದೇ ಕಾರಣಕ್ಕಾಗಿ ಐದು ಜನ ವಿದ್ಯಾರ್ಥಿ ಮುಖಂಡರನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಲಾಗಿದೆ. ಮುಷ್ಕರವನ್ನು ಮುರಿಯುವ ಉದ್ದೇಶದಿಂದ ಮಾರ್ಚ್ 26 ರ ವರೆಗೆ ಕಾಲೇಜಿಗೆ ಅಕ್ರಮ ರಜೆಯನ್ನು ಘೋಷಿಸಲಾಗಿತ್ತು.

ಕಾಲೇಜಿನ ವಿದ್ಯಾರ್ಥಿಗಳೀಗ ಎಸ್‌ಎಫ್‌ಐ ಸದಸ್ಯರಾಗಿದ್ದಾರೆ. ಕಾಲೇಜು ಘಟಕವನ್ನು ರಚಿಸಲಾಗಿದೆ. ವಿದ್ಯಾರ್ಥಿಗಳಿಗೀಗ ನಮ್ಮ ವ್ಯವಸ್ಥೆಯ ಕ್ರೂರ ಮುಖಗಳು ಪರಿಚಯವಾಗುತ್ತಿದೆ. ಅವುಗಳ ಹಿಂದಿನ ರಾಜಕೀಯ ಶಕ್ತಿಗಳೂ ಪರಿಚಯವಾಗುತ್ತಿದೆ.

ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ.ಸುರೇಶ್ ನಾಗಪಾಲ್‌ರದ್ದು ದೊಡ್ಡ ಜಾಲ. ಹಿಂದೆ ಜನತಾದಳದಲ್ಲಿದ್ದು ಅಲ್ಲಿಂದ ಬಿಜೆಪಿಗೆ ನೆಗೆದು, ತಿರುಗಿ ಜನತಾದಳಕ್ಕೆ ನೆಗೆದು ಈಗ ಲೋಕಶಕ್ತಿಯ ಶಕ್ತಿಯಾಗಿರುವ ಡಾ|| ಜೀವರಾಜ ಆಳ್ವ ಆಡಳಿತ ಮಂಡಳಿಯ ಪಾಲುದಾರರು ಮತ್ತು ಈ ದುಷ್ಟ ಕೂಟದ ಹಿಂದಿನ ರಾಜಕೀಯ ಶಕ್ತಿ.

ಶಿಕ್ಷಣವನ್ನು 'ಮಿತಿಗಳೇ'ಇಲ್ಲದ ವ್ಯಾಪಾರವನ್ನಾಗಿಸ ಬಯಸುವ ಸ್ಥಾಪಿತ ಹಿತಾಸಕ್ತಿಗಳು, ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟಕ್ಕಿಳಿದಿರುವ ವಿದ್ಯಾರ್ಥಿ ಸಮುದಾಯದ ನಡುವೆ ಸಂಘರ್ಷ ಮುಂದುವರಿಯಿತು. ಹೋರಾಟವನ್ನು ಬೆಂಬಲಿಸಲು ಸಿಐಟಿಯು, ಕರ್ನಾಟಕ ಪ್ರಾಂತ

7ನೇ ಪುಟ ನೋಡಿ

ಸರಕಾರಿ ನೌಕರರೆಂದು ಪರಿಗಣಿಸಲು ಅಂಗನವಾಡಿ ನೌಕರರ ಆಗ್ರಹ

ಉತ್ತರ ಕನ್ನಡ: ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್(ಕೆಎಟಿ) ನೀಡಿರುವ ಆಜ್ಞೆಯಂತೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಸರಕಾರಿ ನೌಕರರೆಂದು ಪರಿಗಣಿಸಿ, ಸಂಬಳ ಸವಲತ್ತುಗಳನ್ನು ನಿಗದಿ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಆಗ್ರಹಿಸಿದ್ದಾರೆ. ಗ್ರಾಮಾಂತರ ಹಾಗೂ ಕೊಳಚೆ ಪ್ರದೇಶಗಳಲ್ಲಿನ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಿಕ್ಕಾಗಿ 6 ವರ್ಷಕ್ಕಿಂತ ಕಿರಿಯ ವಯಸ್ಸಿನ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ಕೊಡುವುದಕ್ಕಾಗಿ, ಆ ಪ್ರದೇಶದ ಗರ್ಭಿಣಿ ಬಾಣಂತಿ ಸ್ತ್ರೀಯರಿಗೆ ಸಮಯಕ್ಕೆ ಬೇಕಾದ ಚಿಕಿತ್ಸೆ ಮಾಡಿಸುವ ಉದ್ದೇಶಗಳಿಗಾಗಿ ಐಸಿಡಿಎಸ್ ಯೋಜನೆಯಡಿ ರಾಜ್ಯಾದ್ಯಂತ ಸುಮಾರು 80 ಸಾವಿರ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಮಾಜದ ಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ ಎಂದು ವರಲಕ್ಷ್ಮಿಯವರು ತಿಳಿಸಿದರು.

ಅವರು ಉತ್ತರ ಕನ್ನಡ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ತಾಲ್ಲೂಕು ಸಮ್ಮೇಳನ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಾ ಮೇಲಿನಂತೆ ತಿಳಿಸಿದರು. ಸಿಐಟಿಯು ಜಿಲ್ಲಾ ಸಮಿತಿ ಸಮ್ಮೇಳನದ ಮುತುವರ್ಜಿ ವಹಿಸಿತ್ತು.

ಅತಿ ಕಡು ಬಡತನದಿಂದ ಬಂದಂತ ಯುವತಿಯರು, ವಿಧವೆಯರು, ಸಮಾಜದ ದುರ್ಬಲ ವರ್ಗದವರು ಅಂಗನವಾಡಿಗಳಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ಸಿಗುವ ಗೌರವಧನ 250 ರಿಂದ 500 ರೂ. ಗಳು ಮಾತ್ರ. ಬಾಲ ವಿಕಾಸ ಯೋಜನೆಯೊಟ್ಟಿಗೆ ಆರೋಗ್ಯ, ಶೈಕ್ಷಣಿಕ, ಸಮಾಜ ಕಲ್ಯಾಣ ಇಲಾಖೆಯ ಕೆಲಸಗಳಾದ ಪಲ್ಸ್ ಪೋಲಿಯೋ, ಮಹಿಳಾ ಸಮೃದ್ಧಿ ಯೋಜನೆ, ಕುಟುಂಬ ಯೋಜನೆ, ಸಾಕ್ಷರತಾ ಸರ್ವೆ ಮಾಡುವುದು, ಅಲ್ಲದೇ ಪ್ರತಿನಿತ್ಯ 24 ರಿಜಿಸ್ಟರ್ ಬರೆಯುವುದು, ಕೇಂದ್ರ ಮತ್ತು ರಾಜ್ಯ ಸರಕಾರದ ಏನೇ ಕಾರ್ಯಕ್ರಮಗಳಾದರೂ ಸಭಿಕರಾಗಿ ಇವರೇ ಹೋಗಬೇಕು. ಈ ರೀತಿಯ ಅಂಗನವಾಡಿಯ ಸಮಸ್ಯೆಗಳನ್ನು ವಿಶ್ಲೇಷಿಸಿದ ವರಲಕ್ಷ್ಮಿಯವರು ನೌಕರರ ಮೇಲು ಹೆಚ್ಚುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು ತಡೆಗಟ್ಟಲು ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಅಂಗನವಾಡಿ ಕೇಂದ್ರಗಳ ಖಾಸಗೀಕರಣವನ್ನು ತೀವ್ರವಾಗಿ ವಿರೋಧಿಸಿದ ಅವರು ಸಂಘಟನಾತ್ಮಕ ಹೋರಾಟದ ಮಹತ್ವವನ್ನು ವಿವರಿಸಿದರು.

ಶಿರಸಿ: ಮಾರ್ಚ್ 28 ರಂದು ತಾಲ್ಲೂಕು ಅಂಗನವಾಡಿ ನೌಕರರ ಪ್ರಥಮ ಸಮ್ಮೇಳನ ಶಿರಸಿಯಲ್ಲಿ ಯಶಸ್ವಿಯಾಗಿ ನಡೆಯಿತು. 300 ರಷ್ಟು ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು)ದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಮ್ಮೇಳನದ ಉದ್ಘಾಟನಾ ಭಾಷಣ ಮಾಡಿದರು. ಅತಿಥಿಗಳಾಗಿ ಶಿರಸಿ ನಗರಸಭಾ ಅಧ್ಯಕ್ಷೆ ಅನುರಾಧ ಹೆರವಟ್ಟಾ, ಸಿಡಿಪಿಡಿ ಪ.ಲ.ಮಯ್ಯಾ, ಸುಬಾಷ್ ಕೊಪ್ಪೀಕರ, ನಾಗರತ್ನ ಪಡಿಯೂರ್ ಭಾಗವಹಿಸಿದ್ದರು. ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ನಾಯ್ಕ ವಹಿಸಿದ್ದರು. ಸಮ್ಮೇಳನವನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿಯ ಅಧ್ಯಕ್ಷರಾದ ಶಾಂತರಾಮ ನಾಯಕ್, ಎಸ್ಎಫ್ಐನ ಯುವರಾಜ ಕಂಬಾಳಿಮಠ್, ಚಿಂತನದ ಕಿರಣ್ ಭಟ್, ಕೆಇಬಿ ನೌಕರರ ಸಂಘದ ಮುಖಂಡ ನವೀನ್, ಎಲ್ಐಸಿ ನೌಕರರ ಯೂನಿಯನ್ನಿನ ಶೈಲಾ ಭಟ್, ವಿಠಲ್ ಭಂಡಾರಿ ಮುಂತಾದವರು ಮಾತನಾಡಿದರು. ಸ್ವಾಗತ ಮತ್ತು ಪ್ರಸ್ತಾವನೆಯನ್ನು ಸಿ.ಆರ್.ಶಾನಭಾಗ್ ನೆರವೇರಿಸಿದರು. ಪದ್ಮಾವತಿ ಭಟ್ ವಂದಿಸಿದರು. ಕೊನೆಯಲ್ಲಿ ಮೆರವಣಿಗೆ ಹಾಗೂ ಬಿಡಕಿ ಬೈಲಿನಲ್ಲಿ ಬಹಿರಂಗ ಸಭೆ ನಡೆಯಿತು.

ನೂತನ ಸಮಿತಿಗೆ ಅಧ್ಯಕ್ಷರಾಗಿ ಶ್ರೀ ಸಿ.ಆರ್.ಶಾನಭಾಗ್, ಅಧ್ಯಕ್ಷರಾಗಿ ಪದ್ಮಾವತಿ ಭಟ್, ಕಾರ್ಯದರ್ಶಿಯಾಗಿ ವಿಮಲಾ ಕೆ. ಹೆಗಡೆ, ಉಪಾಧ್ಯಕ್ಷರುಗಳಾಗಿ ರಾಜೇಶ್ವರಿ ತಾರೀಮನೆ, ಯಶೋಧ ಶಾಸ್ತ್ರಿ, ಹೇಮಾವತಿ ಭಟ್, ಸುಲೋಚನಾ ಭಟ್, ಸಹ ಕಾರ್ಯದರ್ಶಿಗಳಾಗಿ ಲೀಲಾವತಿ, ಅನಿತಾ ಕುಂದಾಪುರ, ವನಮಾಲ ಭಟ್, ಉಷಾ ಬಿ.ಸಿರ್ಸಿಕರ್ ಹಾಗೂ ಖಜಾಂಚಿಯಾಗಿ ಸುಶೀಲಾ ಎಲ್.ನಾಯ್ಕ ಆಯ್ಕೆಯಾದರು.

ಸಿದ್ದಾಪುರ: ಮಾರ್ಚ್ 29 ರಂದು ತಾಲ್ಲೂಕು ಅಂಗನವಾಡಿ ನೌಕರರ ಪ್ರಥಮ ಸಮ್ಮೇಳನ ಸಿದ್ದಾಪುರದ ಸಿ.ಆರ್. ಸಭಾಂಗಣದಲ್ಲಿ ನಡೆಯಿತು. 150 ರಷ್ಟು ನೌಕರರು ಭಾಗವಹಿಸಿದ್ದರು. ವರಲಕ್ಷ್ಮಿಯವರು ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಸದಸ್ಯ ಲಕ್ಷ್ಮಿನಾಯ್ಕ, ಡಿವೈಎಫ್ಐನ ಶಾಂತರಾಮ ನಾಯಕ, ವಿಠಲ ಭಂಡಾರಿ ಮಾತನಾಡಿದರು. ಟಿ.ಎಸ್.ನಾಯ್ಕ ಅಧ್ಯಕ್ಷತೆ ವಹಿಸಿದ್ದರು.

ನೂತನ ಸಮಿತಿಗೆ ಅಧ್ಯಕ್ಷರಾಗಿ ಸುಮಂಗಲ, ಕಾರ್ಯದರ್ಶಿಯಾಗಿ ಗೀತಾ.ಎಚ್.ಕೆ., ಉಪಾಧ್ಯಕ್ಷರುಗಳಾಗಿ ನೇತ್ರಾವತಿ ಗೌಡ, ಸವಿತಾ ತನ್ನಾಡ್ರಿ, ಕರಿಯಮ್ಮ ಸಹ ಕಾರ್ಯದರ್ಶಿಗಳಾಗಿ ಭಾರತಿ ಜಿ.ಗೌಡ, ಲಕ್ಷ್ಮಿಮಡಿವಾಳ,ಗೌರಿಮಡಿವಾಳ ಮತ್ತು ಖಜಾಂಚಿಯಾಗಿ ಜಯಾ ಪ್ರಭು ಆಯ್ಕೆಗೊಂಡರು.

ಭಟ್ಕಳ: ಅಂಗನವಾಡಿ ನೌಕರರ ತಾಲ್ಲೂಕು ಸಮ್ಮೇಳನವು ಶಿರಾಲಿಯಲ್ಲಿ ಮಾರ್ಚ್ 30 ರಂದು ನಡೆಯಿತು. 100 ಕ್ಕೂ ಮೇಲ್ಪಟ್ಟು ನೌಕರರು ಭಾಗವಹಿಸಿದ್ದರು. ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಜಿಲ್ಲಾ ಪಂಚಾಯತ್ ಸದಸ್ಯೆ ಮೀನಾಕ್ಷಿ ನಾಯ್ಕ, ಟಿ.ಎಸ್.ನಾಯ್ಕ, ತಿಲಕ್‌ಗೌಡ ಮುಂತಾದವರು ಉದ್ಘಾಟನಾ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು. ಸುಭಾಷ್ ಕೊಪ್ಪೀಕರ್ ಅಧ್ಯಕ್ಷತೆ ವಹಿಸಿದ್ದರು. ನಾಗರತ್ನ ಪಡಿಯೂರ್ ವಿಷಯ ಪ್ರಸ್ತಾವನೆ ಮಾಡಿದರು.

ನೂತನ ಸಮಿತಿಗೆ ಅಧ್ಯಕ್ಷರಾಗಿ ಮಲ್ಲಿಕಾ ಎಸ್.ಹೆಗಡೆ, ಕಾರ್ಯದರ್ಶಿಯಾಗಿ ನಾಗರತ್ನಾ ಪಡಿಯೂರ್, ಉಪಾಧ್ಯಕ್ಷರುಗಳಾಗಿ ಮೀರಾ ಶಿರಾಲಿ, ಪೂರ್ಣಿಮಾ ಪೈ, ಸಾವಿತ್ರಿ ಸಹ ಕಾರ್ಯದರ್ಶಿಯಾಗಿ ಲಕ್ಷ್ಮಿಎಂ.ನಾಯ್ಕ, ಶಾಂತಿ ಮೊಗೇರ್, ಮಂಜಮ್ಮ ಖಜಾಂಚಿಯಾಗಿ ಶಕುಂತಲಾ ಶೆಟ್ಟಿ ಆಯ್ಕೆಗೊಂಡರು.

ಹಳಿಯಾಳ: ತಾಲ್ಲೂಕು ಅಂಗನವಾಡಿ ಸಮಾವೇಶವು ಏಪ್ರಿಲ್ 1ರಂದು ದಾಂಡೇಲಿ ಸಿಐಟಿಯುವ ಕಚೇರಿಯಲ್ಲಿ ನಡೆಯಿತು. 100 ಕ್ಕೂ ಮೇಲ್ಪಟ್ಟು ಕಾರ್ಯಕರ್ತೆಯರು ಸಹಾಯಕಿಯರು ಭಾಗವಹಿಸಿದ್ದರು. ಅತಿಥಿಗಳಾಗಿ ಭಾಗವಹಿಸಿ ಎಸ್.ವರಲಕ್ಷ್ಮಿ ಟಿ.ಎಸ್.ನಾಯ್ಕ, ಶಾಂತರಾಮ ನಾಯಕ್ ಮಾತನಾಡಿದರು. ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಎಂ.ಬಿ.ನಾಯ್ಕ ವಹಿಸಿದ್ದರು. ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಎಸ್.ವಿ.ಸಾವಂತ್ ಶುಭ ಕೋರಿ ಮಾತನಾಡಿದರು. ಎಚ್.ಬಿ.ನಾಯಕ್ ಪ್ರಾಸ್ತವಿಕಮಾತನಾಡಿಸ್ವಾಗತಕೋರಿದರು.

ನೂತನ ಸಮಿತಿಗೆ ಗೌರವ ಅಧ್ಯಕ್ಷರಾಗಿ ಎಚ್.ಬಿ.ನಾಯಕ್, ಅಧ್ಯಕ್ಷರಾಗಿ ನೇತ್ರಾವತಿ ಅಂಕೋಲೆಕರ್, ಕಾರ್ಯದರ್ಶಿಯಾಗಿ ಸರಿತಾ ಪಾವಲೆ, ಉಪಾಧ್ಯಕ್ಷರುಗಳಾಗಿ ಇಂದಿರಾ ಎನ್.ಮಿರಾಶಿ, ಕಾಶಮ್ಮ ಈ. ಪಾಟೀಲ್, ಸಹ ಕಾರ್ಯದರ್ಶಿಗಳಾಗಿ ಸುಧಾ ಶಿರೋಡಕರ್, ಅನುಸೂಯ ಜೌವಾಣೆ ಮತ್ತು ಖಜಾಂಚಿಯಾಗಿ ಸುವರ್ಣ ಭಟ್, ಹಾಗೂ 8 ಜನ ಸಮಿತಿಯ ಸದಸ್ಯರುಗಳಾಗಿ ಆಯ್ಕೆಗೊಂಡರು.



ಡಿವೈಎಫ್ಐನಿಂದ ಪಂಜಿನ ಮೆರವಣಿಗೆ

ಕುಂದಾಪುರ: ಡಿವೈಎಫ್ಐನ ಕೇಂದ್ರ ಸಮಿತಿಯ ಕರೆಯ ಮೇರೆಗೆ ನಿರುದ್ಯೋಗ ವಿರೋಧಿ ದಿನಾಚರಣೆಯ ಸಲುವಾಗಿ ಮಾರ್ಚ್ 8ರಂದು ಕುಂದಾಪುರ ಡಿವೈಎಫ್ಐ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಯುವಜನರ ಪಂಜಿನ ಮೆರವಣಿಗೆ ಜರುಗಿತು. ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಲಿ, ಉದ್ಯೋಗ ಕೊಡಿ, ಇಲ್ಲವೇ ಕನಿಷ್ಟ 250 ರೂ. ನಿರುದ್ಯೋಗಭತ್ಯೆ ಕೊಡಿ, ಕೇಂದ್ರ ಸರಕಾರದ ಸಾಮಾನ್ಯಕನಿಷ್ಟ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಿ ಎಂಬಿತ್ಯಾದಿ ಘೋಷಣೆಗಳೊಂದಿಗೆ ಯುವಜನರು ನಗರದ ರಸ್ತೆಗಳಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಮೆರವಣಿಗೆಗೆ ಮುಂಚಿತವಾಗಿ ಶಾಸ್ತ್ರಿ ಸರ್ಕಲ್ ಬಳಿ ಸೇರಿದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಎಲ್ಐಸಿ ಉಡುಪಿ ವಿಭಾಗದ ಕಾರ್ಮಿಕ ಮುಖಂಡರಾದ ಕೆ.ವಿಶ್ವನಾಥರೈಯವರು ಸ್ವಾತಂತ್ರ್ಯ ನಂತರದ 50 ವರ್ಷಗಳಲ್ಲಿ ಕೇಂದ್ರ ಸರಕಾರವು ಅನುಸರಿಸಿದ ತಪ್ಪು ಆರ್ಥಿಕ ನೀತಿಗಳ ಪರಿಣಾಮವಾಗಿ ಹಲವು ಕೋಟಿಯಷ್ಟು ನಿರುದ್ಯೋಗಿಗಳ ಸೈನ್ಯವೇ ಬೆಳೆಯಲು ಕಾರಣವಾಗಿದೆ ಎಂದರು.

ತಾಲ್ಲೂಕು ಕಾರ್ಯದರ್ಶಿ ಚಂದ್ರಶೇಖರ.ವಿ.ಯವರು ಸ್ವಾಗತಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದರು. ತಾಲ್ಲೂಕು ಅಧ್ಯಕ್ಷರಾದ ಎಚ್.ನರಸಿಂಹರವರು ಧನ್ಯವಾದ ಅರ್ಪಿಸಿದರು.

ಅಕ್ರಮ ವಿದ್ಯುತ್ ಸಂಪರ್ಕ: ಸರಕಾರಿ ಆಜ್ಞೆಗೆ ವಿರೋಧ

ಕೋಲಾರ: ರೈತರ ಪಂಪ್‌ಸೆಟ್‌ಗಳ ವಿದ್ಯುತ್ ಸಕ್ರಮಕ್ಕೆ ಸಂಬಂಧಿಸಿ ಸರ್ವಪಕ್ಷಗಳ ತೀರ್ಮಾನದ ಆಧಾರದಲ್ಲಿ ಮುಖ್ಯಮಂತ್ರಿಗಳು ರಾಜ್ಯ ವಿಧಾನ ಸಭೆಯಲ್ಲಿ ಹೇಳಿಕೆಗೆ ವಿರುದ್ಧವಾಗಿ ಸರಕಾರ ಆಜ್ಞೆ ಹೊರಡಿಸಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ(ಎಐಕೆಎಸ್) ಕೋಲಾರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ ಮತ್ತು ಸದ್ಯ ಹೊರಡಿಸಿರುವ ಸರಕಾರಿ ಆಜ್ಞೆಯನ್ನು ವಾಪಸ್ಸು ಪಡೆದು ವಿಧಾನ ಸಭೆಯಲ್ಲಿ ಮೂಡಿಬಂದಿದ್ದ ತೀರ್ಮಾನದಂತೆ ಆಜ್ಞೆಯನ್ನು ಹೊರಡಿಸಬೇಕೆಂದು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸರಕಾರವನ್ನು ಆಗ್ರಹಿಸಿದೆ.

ವಿದ್ಯುತ್ತನ್ನು ಕೋರಿ ಅರ್ಜಿ ಸಲ್ಲಿಸಿ ಕಾರ್ಯಾದೇಶ ಇತ್ಯಾದಿ ನಿಯಮಗಳನ್ನು ಪೂರ್ಣಗೊಳಿಸಿ ಸರ್ವಿಸ್ ಸಿಗದೇ ವಿದ್ಯುತ್ ಸಂಪರ್ಕವನ್ನು ಪಡೆದವರಿಗೆ ದಂಡವಿಲ್ಲದೆ ಸಕ್ರಮಗೊಳಿಸಿ ಇಂತಹ ಯಾವುದೇ ನೀತಿ ನಿಯಮಗಳನ್ನು ಪಾಲಿಸದೆ ವಿದ್ಯುತ್ ಸಂಪರ್ಕಗಳನ್ನು ಅನಧಿಕೃತವಾಗಿ ಪಡೆದಿರುವವರಿಗೆ 2500-5000 ರೂ. ದಂಡದೊಂದಿಗೆ ಸಕ್ರಮ ಮಾಡಲಾಗುವುದೆಂದು ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿಕೆಯನ್ನು ನೀಡಿದ್ದರು. ಆದರೆ ಈಗ ಇದಕ್ಕೆ ವಿರುದ್ಧವಾಗಿ ಅರ್ಜಿ ಸಲ್ಲಿಕೆ, ಕಾರ್ಯಾದೇಶದಂತೆ ನಿಯಮಗಳ ಜೊತೆ ವಿದ್ಯುತ್ ಸಾಮಾಗ್ರಿಗಳನ್ನು ಪಡೆದಿರುವವರು ಮತ್ತು ಪಡೆಯದಿರುವವರು ಎಂಬ ಎರಡು ವರ್ಗಗಳನ್ನು ವಿಂಗಡಿಸಿ ಸಾಮಾಗ್ರಿ ಪಡೆದವರಿಗೆ ದಂಡವಿಲ್ಲ ಎನ್ನುವ ನೀತಿ ಸರಿಯಲ್ಲ. ಸರ್ವಿಸ್ ಮ್ಯನ್‌ನಿಂದ ವಿದ್ಯುತ್ ಸಂಪರ್ಕ ಪಡೆಯಲು ಯಾವುದೇ ಸಾಮಾಗ್ರಿ ಅವಶ್ಯಕತೆಯಿಲ್ಲ ಇಂತಹವರು ಸಹ ದಂಡವನ್ನು ಪಾವತಿಮಾಡಬೇಕೆನ್ನುವ ಅವೈಜ್ಞಾನಿಕ ನೀತಿಯನ್ನು ಕೈ ಬಿಟ್ಟು ಅನಧಿಕೃತ ಸಂಪರ್ಕಗಳ ಸಕ್ರಮಕ್ಕೆ ವಿಧಿಸಲಾಗುತ್ತಿರುವ 5000-10000 ರೂಗಳ ದಂಡದ ಮೊತ್ತವನ್ನು ಅರ್ಧಕ್ಕೆ ಇಳಿಸಬೇಕೆಂದು ಒತ್ತಾಯಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಏಪ್ರಿಲ್ 4

- ಕಳೆದ ವರ್ಷದಂತೆ ಈ ವರ್ಷವೂ ಸಾಮೂಹಿಕ ವರ್ಗಾವಣೆ ಇಲ್ಲ ಎಂದು ಸರಕಾರ ನಿರ್ಧರಿಸಿರುವುದಾಗಿ ಸಚಿವ ನಾಣಯ್ಯ.
- ಬನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿಗಳು ರದ್ದು ಮಾಡಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಆದೇಶ.

ಏಪ್ರಿಲ್ 5

- ರಾಜ್ಯದಲ್ಲೂ 'ಎಸ್ಮಾ' ಜ್ಯಾರಿಯಾಗಿ ಲಾರಿ ಮುಷ್ಕರ ನಿಷೇಧ.

ಏಪ್ರಿಲ್ 6

- "ಧರ್ಮಕಾರಣ" ಕೃತಿಯ ಮುಟ್ಟುಗೋಲಿಗೆ ಪ್ರತಿಭಟನೆಯಾಗಿ ವಿವಿಧ ಅಕಾಡೆಮಿಗಳ 17 ಸದಸ್ಯರ ರಾಜೀನಾಮೆ.
- 1982-83, 1983-84ನೇ ಸಾಲಿನ ಔಷಧಿ ಖರೀದಿ ಅವ್ಯವಹಾರದಲ್ಲಿ ಪಾಲ್ಗೊಂಡಿರುವ ಇಎಸ್ಐ ನಿರ್ದೇಶನಾಲಯದ ಅಧಿಕಾರಿಗಳ ಅಮಾನತು, ಇತರ ಸಿಬ್ಬಂದಿಗೆ ಶಿಕ್ಷೆಯಾಗಬೇಕೆಂದು ವಿಧಾನ ಮಂಡಲದ ವಿಷಯ ಸಮಿತಿಯ ಶಿಫಾರಸು.

ಏಪ್ರಿಲ್ 7

- ರಾಜ್ಯದಲ್ಲಿ ಅಗತ್ಯ ವಸ್ತು ಸಾಗಾಣಿಕೆಗೆ ಸೇನೆಯ ವಾಹನಗಳ ಬಳಕೆ.

ಏಪ್ರಿಲ್ 8

- ನವಂಬರ್ 1ರಿಂದ 7 ಹೊಸ ಜಿಲ್ಲೆಗಳು ಅಸ್ತಿತ್ವಕ್ಕೆ ಬರಲಿವೆಯೆಂದು ಮುಖ್ಯಮಂತ್ರಿಗಳ ಪ್ರಕಟಣೆ. ಇನ್ನೂ ಎರಡು ಜಿಲ್ಲೆಗಳನ್ನು ರಚಿಸಲು ಬದ್ಧ ಎಂದು ಸ್ಪಷ್ಟನೆ.

ಏಪ್ರಿಲ್ 9

- ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ಆದೇಶವನ್ನು ಜ್ಯಾರಿಗೆ ತರಲು ಯೋಜನೆಯೊಂದನ್ನು ರೂಪಿಸುವುದಾಗಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರಕಾರದ ಭರವಸೆ.
- ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ್ ಕಂಬಾರರಿಗೆ ಪ್ರಸಕ್ತ ಸಾಲಿನ ಮಾಸ್ತಿ ಪ್ರಶಸ್ತಿ.

ಏಪ್ರಿಲ್ 10

- ಕಾವೇರಿ ನಾಲ್ಕನೇ ಹಂತದ ಎರಡು, ಮೂರು ಮತ್ತು ನಂತರದ ಘಟ್ಟಗಳ ಕೆಲಸವನ್ನು ಮಲೇಶ್ಯಾದ ಬೈವಾಟರ್ ಸಂಸ್ಥೆಗೆ ವಹಿಸುವ ಬಗ್ಗೆ ಮಾತುಕತೆ ನಡೆದಿರುವುದಾಗಿ ಬೆಂಗಳೂರು ಅಭಿವೃದ್ಧಿ ಸಚಿವರು.
- ಕಲ್ಬುರ್ಗಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಗಳಲ್ಲಿ ಕಾಂಗ್ರೆಸ್ ನೆರವಿನೊಂದಿಗೆ ಲೋಕಶಕ್ತಿ ಕೈ ಮೇಲು.

ಧರ್ಮಕಾರಣ ರದ್ಧತಿ ಹಿಂತೆಗೆಯಲು ಸಮುದಾಯದ ಒತ್ತಾಯ

ಧಾರವಾಡ: ಡಾ|| ಪಿ.ವಿ.ನಾರಾಯಣ ಅವರ 'ಧರ್ಮಕಾರಣ' ಕಾದಂಬರಿಯನ್ನು ಕೆಲವು ಮತಾಂಧರ ಒತ್ತಡಕ್ಕೆ ಮಣಿದು ಕಾನೂನುಬಾಹಿರಗೊಳಿಸುವ ಕರ್ನಾಟಕ ಸರಕಾರದ ಪ್ರಸ್ತಾವನೆಯನ್ನು ಸಮುದಾಯ ಸಾಂಸ್ಕೃತಿಕ ಸಂಘಟನೆಯ ಹುಬ್ಬಳ್ಳಿ-ಧಾರವಾಡ ಘಟಕವು ತೀವ್ರವಾಗಿ ಪ್ರತಿಭಟಿಸಿದೆ. ಹಾಗೂ ಅಂತಹ ಪ್ರಸ್ತಾವನೆಯನ್ನು ನಿಶ್ಶರತ್ತಾಗಿ ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ ಒತ್ತಾಯಿಸಿದೆ.

ಕಲೆ, ಸಾಹಿತ್ಯ, ಸಂಸ್ಕೃತಿ ವಿಷಯಗಳಲ್ಲಿ ಆಯಾ ಕ್ಷೇತ್ರಗಳ ಅನುಭಾವಿಗಳು, ತಜ್ಞರು, ಸಂಶೋಧಕರು ಮತ್ತು ಸಂಬಂಧಪಟ್ಟ ಅಕಾಡೆಮಿಗಳು ವಸ್ತುನಿಷ್ಠ ವಿಮರ್ಶೆಗಳ ಮೂಲಕ ಮೌಲ್ಯಮಾಪನ ಮಾಡಬೇಕೆ ಹೊರತು ಸರಕಾರ ಹಸ್ತಕ್ಷೇಪ ಮಾಡುವುದು ಪ್ರಜಾಸತ್ತೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಂತೆ ಆಗುವುದು ಎಂದು ಸಮುದಾಯ ಅಭಿಪ್ರಾಯ ಪಟ್ಟಿದೆ. 'ಧರ್ಮಕಾರಣ'ದಂತಹ ಸಾಹಿತ್ಯ ಕೃತಿಗಳನ್ನು ಪಠ್ಯಪುಸ್ತಕಗಳಿಂದ ರದ್ದು ಮಾಡುವುದು, ಅವುಗಳಿಗೆ ನೀಡಿದ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು, ಮುಕ್ತವಾಗಿ ಮಾರಾಟ ಮಾಡುವುದನ್ನು ಹಾಗೂ ಅಧ್ಯಯನ ಮಾಡುವುದನ್ನು ರದ್ದುಗೊಳಿಸುವುದು ಇತ್ಯಾದಿ ಸರಕಾರದ ಕ್ರಮಗಳು, ಆಂತರಿಕ ತುರ್ತು ಪರಿಸ್ಥಿತಿಯ ಕರಾಳ ದಿನಗಳು ಮರುಕಳಿಸುವ ಭಯದ ವಾತಾವರಣ ಉಂಟು ಮಾಡುವ ಕುರಿತು ಸಮುದಾಯ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ.

ಇಂತಹ ವಿಷಯಗಳಲ್ಲಿ ಇನ್ನೂ ಮೌನವಾಗಿರುವ ಕಲಾವಿದರು, ಸಾಹಿತಿಗಳು, ಸಾಂಸ್ಕೃತಿಕ ತಜ್ಞರು, ಆಯಾ ಅಕಾಡೆಮಿಗಳ ಅಧ್ಯಕ್ಷರುಗಳು ಮತ್ತು ಸದಸ್ಯರುಗಳು ಈ ನಿರ್ಣಾಯಕ ಕಾಲಘಟ್ಟದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಉಳಿವಿಗಾಗಿ ತಮ್ಮ ಧ್ವನಿ ಸೇರಿಸಬೇಕಾಗಿ ಸಮುದಾಯ ಕರೆ ಕೊಟ್ಟಿದೆ.



ಬೆಂಗಳೂರಿನಲ್ಲಿ ಏ.6ರಂದು ಸಾಹಿತಿಗಳ, ಪ್ರಗತಿಪರರ ಪ್ರತಿಭಟನೆಯ ಒಂದು ದೃಶ್ಯ

ಉತ್ತರ ಕರ್ನಾಟಕ ರಾಜ್ಯ: ಭೂಮಾಲಿಕ ಗುಂಪಿನ ಬೇಡಿಕೆ

- ಮಾರುತಿ ಮಾನ್ಪಡೆ



ಪ್ರತ್ಯೇಕತಾವಾದಿ ಚಳುವಳಿಯ ಪಿಡುಗು ಕರ್ನಾಟಕಕ್ಕೂ ತಗಲಿದಂತಿದೆ. ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಈ ಸಂಬಂಧವಾಗಿ ಹಾಗೂ ತೊಗರಿ ಬೆಳೆಗಾರರು ಈಚೆಗೆ ನಡೆಸಿದ ಹೋರಾಟದ ಬಗ್ಗೆ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರೂ, ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರೂ ಆಗಿರುವ ಕಾಂ॥ ಮಾರುತಿ ಮಾನ್ಪಡೆ 'ಐಕ್ಯರಂಗ'ಕ್ಕೆ ನೀಡಿರುವ ಸಂದರ್ಶನದಲ್ಲಿ ಹಲವು ಮಾಹಿತಿಗಳನ್ನು ಬಿಚ್ಚಿಟ್ಟಿದ್ದಾರೆ. ಚಳುವಳಿಯ ಹಿಂದಿರುವ 'ಶಕ್ತಿ'ಗಳ ಮೇಲೆ ಬೆಳಕು ಚೆಲ್ಲಿದ್ದಾರೆ.....

'ಐಕ್ಯರಂಗ' ಸಂದರ್ಶನ - ವಿಶ್ವ

ತೊಗರಿ ಬೆಳೆಗಾರರ ಪರವಾಗಿ ಸಮಸ್ಯೆಗಳ ಬಗ್ಗೆ ಸ್ವಲ್ಪ ವಿವರಿಸ್ತೀರಾ?

● ತೊಗರಿ ಬೆಳೆಯುವ ರೈತರು ತುಂಬಾ ಶೋಷಣೆಗೆ ಒಳಗಾಗಿದ್ದಾರೆ. ಈ ವಿಭಾಗದ ರೈತರ ಅನ್ಯಾಯದ ವಿರುದ್ಧವಾಗಿ ದನಿಯೆತ್ತಿದ ಏಕೈಕ ಸಂಘಟನೆ ಕರ್ನಾಟಕ ಪ್ರಾಂತ ರೈತ ಸಂಘ.

ತೊಗರಿ ಬೆಳೆಗಾರರು ಮಾತ್ರವೇ ಅಲ್ಲದೆ ತೊಗರಿ ಬಳಕೆದಾರರೂ ಶೋಷಣೆಗೆ ಸಿಲುಕಿದ್ದಾರೆ.

ಒಂದು ಕ್ವಿಂಟಾಲ್ ತೊಗರಿ ಬೆಳೆಯಲು ಕನಿಷ್ಠ 1500 ರೂಪಾಯಿ ಖರ್ಚಾಗುತ್ತದೆ. ತೊಗರಿಯನ್ನು ಮಿಲ್‌ನಲ್ಲಿ ಬೇಳೆ ಮಾಡಲು ಕ್ವಿಂಟಾಲ್‌ಗೆ ಹೆಚ್ಚೆಂದರೆ ನೂರುರೂಪಾಯಿ ಬೇಕು. ಆದರೆ ತೊಗರಿ ಬೇಳೆಗೆ ಮಾರುಕಟ್ಟೆಯಲ್ಲಿ ಸುಗ್ಗಿ ಕಾಲದಲ್ಲಿ 24000 ರೂ. ಸುಗ್ಗಿ ಅಲ್ಲದ ಕಾಲದಲ್ಲಿ 3200 ರೂಪಾಯಿವರೆಗೂ ಇರುತ್ತದೆ. ಅಂದರೆ ತೊಗರಿ ಖರೀದಿಸಿ ಬೇಳೆ ಮಾಡಿ ಮಾರಾಟ ಮಾಡುವವರಿಗೆ ನೂರಕ್ಕೆ ನೂರರಷ್ಟು ಲಾಭ ಸಿಗುತ್ತದೆ. ಆದರೆ ತೊಗರಿಗೆ ಬೆಂಬಲ ಬೆಲೆ ಘೋಷಿಸಿರುವುದು ಕ್ವಿಂಟಾಲ್‌ಗೆ 840 ರೂಪಾಯಿ ಅಷ್ಟೆ. ಹೀಗಾಗಿ ರೈತ ತೀರಾ ಸಂಕಷ್ಟಕ್ಕೆ ಸಿಲುಕಿದ್ದು ಇದನ್ನು ತೊಡೆಯಬೇಕೆನ್ನುವುದು ನಮ್ಮ ಹೋರಾಟದ ಮುಖ್ಯ ಉದ್ದೇಶ.

ಸಮಸ್ಯೆಗೆ ಪರಿಹಾರವಾಗಿ ಯಾವ ನಿರ್ದಿಷ್ಟ ಬೇಡಿಕೆಯನ್ನು ಮುಂದಿಟ್ಟಿದ್ದೀರಿ?

● ಸರಕಾರಿ ಸಂಸ್ಥೆಗಳ ತೊಗರಿಯನ್ನು ರೈತರಿಂದ ಖರೀದಿಸಬೇಕೆನ್ನುವುದು ನಮ್ಮ ಬೇಡಿಕೆ. ಉತ್ಪಾದನೆಯಾದ 20 ಲಕ್ಷ ಕ್ವಿಂಟಾಲ್‌ನಲ್ಲಿ ಶೇಕಡ ಐದರಷ್ಟು ಖರೀದಿ ಮಾಡಿದರೂ ಒಂದು ಲಕ್ಷ ಟನ್ ಆಗುತ್ತದೆ. ಆದರೆ ಸರಕಾರ 5 ಸಾವಿರ ಕ್ವಿಂಟಾಲ್ ತೊಗರಿಯನ್ನು ಕೂಡಾ ಖರೀದಿಸಿಲ್ಲ. ಇದು ಸರಕಾರದ ಬೇಜವಾಬ್ದಾರಿತನಕ್ಕೆ ಸಾಕ್ಷಿ.

ಹೋರಾಟದ ಬಗ್ಗೆ ಸ್ವಲ್ಪ ಮಾಹಿತಿ ಕೊಡಿ.

● ತೊಗರಿ ಬೆಳೆಯುವ ರೈತರ ಸಮಸ್ಯೆ ಬಗ್ಗೆ ಪ್ರಾಂತ ರೈತ ಸಂಘ ನಾನಾ ಸ್ವರೂಪದ ಚಳುವಳಿಯನ್ನು ನಡೆಸಿತು. ಗುಲ್ಬರ್ಗ ಬಂದ್ ಹೋರಾಟದ ತೀಕ್ಷ್ಣ ಸ್ವರೂಪವಾಗಿತ್ತು. ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಘೆರಾವೊ ಕೂಡಾ ಹಾಕಲಾಗಿದೆ.

ಹೋರಾಟಕ್ಕೆ ಸಂದ ಫಲವೇನು?

● ಹೌದು, ಇದೊಂದು ಮುಖ್ಯವಾದ ಪ್ರಶ್ನೆ. ಇಷ್ಟೊಂದು ತೀಕ್ಷ್ಣ ಸ್ವರೂಪದ ಹೋರಾಟ ನಡೆಸಿದರೂ ಹೆಚ್ಚಿನ ಲಾಭ ಆಗಲಿಲ್ಲ. ಇದಕ್ಕೆ ಮುಖ್ಯ ಕಾರಣವೊಂದಿದೆ. ಅದೆಂದರೆ ನಾವು ಸಮಸ್ಯೆಯನ್ನು ವಿಳಂಬವಾಗಿ ಕೈಗೆತ್ತಿಕೊಂಡಿದ್ದು. ಜನವರಿಯಿಂದ ನಾವು ಚಳುವಳಿ ಆರಂಭಿಸಿದೆವು. ಸಕಾಲದಲ್ಲಿ ಹೋರಾಟವನ್ನು ಕೈಗೆತ್ತಿಕೊಳ್ಳಬೇಕೆಂಬುದು ಈ ಹೋರಾಟ ಕಲಿಸಿದ ಪಾಠವಾಗಿದೆ.

ಆದ್ದರಿಂದ, ಈ ವರ್ಷ ನವೆಂಬರ್‌ನಿಂದಲೇ ರೈತರನ್ನು ಸಂಘಟಿಸತೊಡಗುತ್ತೇವೆ. ಏನಿದ್ದರೂ ರೈತರ ಮಧ್ಯೆ ಹೋಗಲಂತೂ ತೊಗರಿ ಹೋರಾಟ ತುಂಬಾ ಸಹಾಯಕವಾಗಿದೆ. ಬಂದ್‌ಗೆ ಸಿಕ್ಕಿದ ಜನ ಬೆಂಬಲವಂತೂ ಅಭೂತಪೂರ್ವವಾದುದು. ಅಲ್ಲದೆ ಉಸ್ತುವಾರಿ ಮಂತ್ರಿ ಮಾಲಿಕಯ್ಯ ಗುತ್ತೇದಾರ್ ಅವರನ್ನು ಎದುರು ಹಾಕಿಕೊಂಡು ಹೋರಾಟ ನಡೆಸಿದ್ದು ಕಿಂಬಾವುಟದ ಹೆಗ್ಗಳಿಕೆಯಾಗಿದೆ. ಇದನ್ನು ಜನರು ಗುರುತಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಸಿಪಿಐ(ಎಂ) ಪ್ರಭಾವ ಹೇಗಿದೆ?

● ಕಳೆದ ಲೋಕಸಭೆ ಚುನಾವಣೆಯಲ್ಲಿ ಪಕ್ಷ ಬೀದರ್ ಕ್ಷೇತ್ರದಿಂದ ಸ್ಪರ್ಧಿಸಿದ್ದೇ ಸಿಪಿಐ(ಎಂ)ಗೆ ಸಿಕ್ಕಿದ ಒಂದು ಪ್ರಮುಖ ರಾಜಕೀಯ ಮಾನ್ಯತೆಯಾಗಿದೆ.

ಗುಲ್ಬರ್ಗ ಜಿಲ್ಲಾ ಪರಿಷತ್ತಿನಲ್ಲಿ ನಮ್ಮ ಪಕ್ಷದ ಒಬ್ಬರೇ ಸದಸ್ಯರಿದ್ದರೂ ಹಲವಾರು ಪ್ರಶ್ನೆಗಳಲ್ಲಿ ಮಧ್ಯಪ್ರವೇಶ ಮಾಡಲು ನಮಗೆ ಸಾಧ್ಯವಾಗಿದೆ.

ನಾನು 1980ರಲ್ಲಿ ಸಿಪಿಐ(ಎಂ)ಗೆ ಬಂದೆ. ನಾನು ಗಮನಿಸಿದ ಪ್ರಕಾರ ಉತ್ತರ ಕರ್ನಾಟಕದಲ್ಲಿ ನಮ್ಮ ಚಳುವಳಿ ಆವಾಗಿನದ್ದಕ್ಕಿಂತ ನಾಲ್ಕು ಪಟ್ಟು ಬೆಳೆದಿದೆ. ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಪ್ರಭಾವ ಬೆಳೆದಿದೆ.

ಗುಲ್ಬರ್ಗಾ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಬೆಳವಣಿಗೆ ಗಮನಾರ್ಹವಾದುದು. ಬೀದರ್ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪ ದುರ್ಬಲವಾಗಿದೆ. ಸಂಘಟನಾತ್ಮಕವಾಗಿ ಹೈದರಾಬಾದ್ ಕರ್ನಾಟಕ ಬೆಳವಣಿಗೆ ಪ್ರದೇಶ ಎಂದು ಪಕ್ಷವೇ ಗಮನಿಸಿದೆ. ಬೆಳೆಯಲು ಇರುವ ಅವಕಾಶವನ್ನು ಬಳಸಿಕೊಳ್ಳಲು ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಅಂದ ಹಾಗೆ ಈಗ ಎರಡು ಕರ್ನಾಟಕ ರಚನೆಯ ಬೇಡಿಕೆ ಪ್ರಸ್ತಾವವಾಗುತ್ತಿದೆ. ಬಿಸಿಯಾದ ವಾತಾವರಣ, ಉದ್ವೇಗ ಸೃಷ್ಟಿಯಾಗಿದೆ. ಇದನ್ನು ಪಕ್ಷ ಹೇಗೆ ಕಾಣುತ್ತದೆ?

● ಇದೊಂದು ಗಂಭೀರ ವಿಚಾರವಾಗಿದೆ. ಪ್ರತ್ಯೇಕ ರಾಜ್ಯ ಬೇಕೆಂಬ ಪ್ರತ್ಯೇಕತಾವಾದಿ ಚಳವಳಿ ಆತಂಕಕಾರಿ ವಿದ್ಯಮಾನವಾಗಿದೆ..

ಉತ್ತರ ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಂಘರ್ಷ ಸಮಿತಿ ಎಂಬ ಎರಡು ಸಂಘಟನೆಗಳು ಪ್ರತ್ಯೇಕ ರಾಜ್ಯದ ಚಳುವಳಿಯ ನೇತೃತ್ವ ವಹಿಸಿವೆ.

ಉತ್ತರ ಕರ್ನಾಟಕ ಪ್ರದೇಶ ತೀರಾ ಹಿಂದೆ ಉಳಿದಿದೆ. ಅಭಿವೃದ್ಧಿಯಾಗಿಲ್ಲ ಎಂಬುದನ್ನೇ ಆಧಾರವಾಗಿಟ್ಟುಕೊಂಡು ಈ ಪ್ರದೇಶ ಅಭಿವೃದ್ಧಿಯಾಗಬೇಕಾದರೆ ಪ್ರತ್ಯೇಕ ರಾಜ್ಯ ಆಗುವುದೇ ಮಾರ್ಗ ಎಂದು ಚಳುವಳಿಕಾರರು ವಾದಿಸುತ್ತಿದ್ದಾರೆ.

ಅದುವೇ ಪರಿಹಾರವೇ?

● ಅಲ್ಲ, ನಮ್ಮ ಪಕ್ಷ ಇದನ್ನು ಒಪ್ಪುವುದಿಲ್ಲ. ಪ್ರದೇಶ ಹಿಂದುಳಿದಿದೆ ಎಂಬುದರಲ್ಲಿ ಎರಡು ಮಾತಿರಲು ಸಾಧ್ಯವಿಲ್ಲ. ರಾಯಚೂರು ಶಾಖೋತ್ಪನ್ನ ಕೇಂದ್ರ ಬಿಟ್ಟರೆ ಈ ವಲಯದಲ್ಲಿ ಬೇರೆ ವಿದ್ಯುತ್ ಯೋಜನೆಗಳಿಲ್ಲ. ಕೃಷ್ಣ ನದಿಯ 110 ಟಿಎಂಸಿ ನೀರು ಬಳಸದಿರುವ ಪ್ರದೇಶ ಈ ಭಾಗದಲ್ಲೇ ಇದೆ. ಇವೆಲ್ಲ ಸಮಸ್ಯೆಗಳೇ ಹೌದು. ಹಾಗೆಂದ ಮಾತ್ರಕ್ಕೆ ಪ್ರತ್ಯೇಕ ರಾಜ್ಯ ಸಮಸ್ಯೆಗೆ ಪರಿಹಾರ ಆಗದು.

ಪ್ರತ್ಯೇಕತವಾದಿ ಚಳುವಳಿಯ ಹಿಂದಿನ ನಿಜವಾದ ಶಕ್ತಿಗಳು ಯಾವುದು ಎಂಬುದನ್ನು ಸ್ವಲ್ಪ ಹೇಳ್ತೀರಾ?

● ತುಂಬಾ ಚುಟುಕಾಗಿ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಜಮೀನ್ದಾರಿ ಹಿತಾಸಕ್ತಿ ಈ ಚಳುವಳಿಯ ಹಿಂದೆ ಇದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ(ಎಚ್‌ಕೆಡಿಬಿ) ಇದೆ. ಅದು 350 ಕೋಟಿ ರೂಪಾಯಿಗಳನ್ನು ಈವರೆಗೆ ಖರ್ಚು ಮಾಡಿದ್ದರೂ, ಪ್ರದೇಶದ ಅಭಿವೃದ್ಧಿಯಾಗಿಲ್ಲ. ಆ ಪೈಕಿ ಹೆಚ್ಚಿನ ಹಣ ರಸ್ತೆಗಳು ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ವೆಚ್ಚವಾಗಿದೆ. ಈ ಹಣದಲ್ಲಿ ಗಣನೀಯ ಪಾಲು ರಾಜಕೀಯ ನಾಯಕರು, ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳಿಗೆ(ಗುತ್ತಿಗೆದಾರರ) ಜೇಬು ಸೇರಿದೆ.

ಪ್ರದೇಶದ ಸೂಕ್ತ ಅಭಿವೃದ್ಧಿಯಾಗಲು ದೊಡ್ಡ ದೊಡ್ಡ ಜಮೀನುದಾರರು ಅಡ್ಡಿಯಾಗಿದ್ದರು, ಈಗಲೂ ಅಡ್ಡಿಯಾಗಿದ್ದಾರೆ.

ರಾಜಕೀಯ ಅಧಿಕಾರದ ಪ್ರಶ್ನೆಯೂ ಈ ಪ್ರತ್ಯೇಕತವಾದಿ ಆಂದೋಲನದ ಹಿಂದೆ ಇದೆ. ಈಗ ರಾಜಕೀಯ ಅಧಿಕಾರ ಒಂದು ವಿಭಾಗದಲ್ಲಿ ಕೇಂದ್ರೀಕೃತಕೊಂಡಿರುವುದರಿಂದ ವ್ಯಗ್ರವಾಗಿರುವ ಇನ್ನೊಂದು ವಿಭಾಗ ರಾಜಕೀಯ ಅಧಿಕಾರ ಹಿಡಿಯುವುದರ ಅಂಗವಾಗಿ ಈ ಚಳುವಳಿ ಆರಂಭಿಸಿದೆ. ಮಾಫಿಯಾಗಳು ಈ ಚಳುವಳಿಯ ಹಿಂದೆ ಇರುವುದು ಸ್ಪಷ್ಟವಾಗಿದೆ.

ಈ ಚಳುವಳಿಯ ಮುಂಚೂಣಿಯಲ್ಲಿರುವವರು ಭೂಸುಧಾರಣೆಗಾಗಿ ಆಗ್ರಹಪಡಿಸಲಿಲ್ಲ ಎನ್ನುವುದು ಅವರ ಹಿತಾಸಕ್ತಿ ಏನೆಂಬುದಕ್ಕೆ ಸ್ವಯಂ ಸ್ಪಷ್ಟನೆ ಆಗಿದೆ.

ಈ ಪ್ರತ್ಯೇಕತಾವಾದಿ ಚಳುವಳಿಗೆ ನಮ್ಮ ಪಕ್ಷದ ಪ್ರತಿಕ್ರಿಯೆ ಏನು?

● ಹಿಂದುಳಿದಿರುವಿಕೆಯ ನೆಪವನ್ನು ಮುಂದಿಟ್ಟುಕೊಂಡು ಜನರ ಭಾವನೆಗಳನ್ನು ಕೆರಳಿಸುವುದು ಚಳುವಳಿಯ ತಂತ್ರವಾಗಿದೆ. ಪ್ರತ್ಯೇಕ ರಾಜ್ಯ ಬೇಡಿಕೆ, ಅದಕ್ಕಾಗಿನ ಚಳುವಳಿಯನ್ನು ನಮ್ಮ ಪಕ್ಷ ಖಂಡತುಂಡವಾಗಿ ವಿರೋಧಿಸುತ್ತದೆ. ಚಳುವಳಿಗಾರರು ಕರೆದಿದ್ದ ಒಂದು ಸರ್ವಪಕ್ಷ ಸಭೆಗೆ ಸಿಪಿಐ(ಎಂ) ಅನ್ನು ಕೂಡಾ ಆಹ್ವಾನಿಸಿದ್ದರು. ಆದರೆ ನಾವು ಆ ಸಭೆಗೆ ಹೋಗಲಿಲ್ಲ. ಜನರ ನಡುವೆ ಹೋಗಲು ಸಾಧ್ಯವಾದೀತು ಎಂದು ಭಾವಿಸಿ ನಾವು ಅಂಥ ಸಭೆಗೆ ಹಾಜರಾದರೆ ಪ್ರತ್ಯೇಕತಾವಾದಿ ಚಳುವಳಿಯನ್ನು ಬೆಂಬಲಿಸಿದಂ ತಾಗುತ್ತದೆ. ಆದ್ದರಿಂದ ಪಾಲ್ಗೊಳ್ಳಲಿಲ್ಲ.

'ದೇಶಾಭಿಮಾನಿ' ಮಲೆಯಾಳಂನ ಒಂದು ದೈನಿಕ. ಮಾರ್ಚ್ 22ರಂದು ಕೊಟ್ಟಾಯಂನಿಂದ 5ನೇ ಆವೃತ್ತಿಯನ್ನು ಆರಂಭಿಸಿರುವ ದೈನಿಕ. ಆದರೆ ಅದು ಕೇವಲ ಸುದ್ದಿ ನೀಡುವ ಪತ್ರಿಕೆಯಾಗಿಲ್ಲ. ಅದೊಂದು ಚಳುವಳಿಯಾಗಿ ಬೆಳೆದಿದೆ. ಚಳುವಳಿಗಾರನಾಗಿ, ಹೋರಾಟಗಾರನಾಗಿ, ಮಾರ್ಗದರ್ಶಕನಾಗಿ, ಹಿತಚಿಂತಕನಾಗಿ, ಸಂಗಾತಿಯಾಗಿ ಕೇರಳದ ಜನತೆಯೊಂದಿಗೆ ಹೆಜ್ಜೆಗೆ ಹೆಜ್ಜೆ ಹಾಕಿದೆ.

ಜನಪರ ಹೋರಾಟದ ದನಿ 'ದೇಶಾಭಿಮಾನಿ'

ಕೇರಳ ರಾಜ್ಯದ ಪ್ರಗತಿಪರ, ಜನವಾದಿ ಆಂದೋಲನದ ಚರಿತ್ರೆಯಲ್ಲಿ ದೇಶಾಭಿ ಮಾನಿಯದ್ದು ಮಹತ್ತರ ಪಾತ್ರ. ಅಲ್ಲಿಯ ರಾಜಕೀಯ-ಸಾಂಸ್ಕೃತಿಕ-ಸಾಮಾಜಿಕ ಬೆಳವಣಿಗೆಗೆ ದೇಶಾಭಿಮಾನಿಯ ಕೊಡುಗೆ ಅವಿಸ್ಮರಣೀಯ. ಅಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದ ಈ ಪತ್ರಿಕೆ ಇಂದು ದೇಶೀಯ ಆಳರಸರ ಜನವಿರೋಧಿ ನೀತಿಗಳ ವಿರುದ್ಧ ಅಷ್ಟೇ ಹರಿತದಿಂದ ಹೋರಾಡುತ್ತಿದೆ.

ದೇಶಾಭಿಮಾನಿ ನಡೆದ ಹಾದಿ ಸುಖದ ಸುಪ್ಪತ್ತಿಗೆಯದಲ್ಲ. ಪಟ್ಟಭದ್ರ ಹಿತಾಸಕ್ತಿಗಳಿಗೆ ಇದರ ಹುಟ್ಟು ಸಹ್ಯವಾಗಿರಲಿಲ್ಲ. ಎಳೆಯುದರಲ್ಲೇ ವಿಷವುಣಿಸಿ ಕೊಲ್ಲಲು ಯತ್ನಿಸಿದ ಪೂತನಿಗಳೆಷ್ಟೋ! ಆದರೆ ಜನತೆ 'ದೇಶಾಭಿಮಾನಿ' ಅಭಿಮಾನದ ಅಮೃತವುಣಿಸಿತು. ಬೇಕಾದುದನ್ನೆಲ್ಲಾ ಉದಾರವಾಗಿ ನೀಡಿತು.

ದೇಶಾಭಿಮಾನಿ ಜನತೆಯ ದನಿಯಾಗಿ ಬೆಳೆಯಿತು. ಬಂಡವಾಳಶಾಹಿ ಪತ್ರಿಕೆಗಳ ರಂಗು ರಂಗಿನ ಸುದ್ದಿಗೆ ಬದಲಾಗಿ ವೈಚಾರಿಕತೆಯನ್ನು ನೀಡಿತು. ಇತರ ಪತ್ರಿಕೆಗಳು ಉಳ್ಳವರ ದನಿಯಾದರೆ, ದೇಶಾಭಿಮಾನಿ ದೀನ ದಲಿತರ, ಶೋಷಿತರ, ದುಡಿಯುವ ಜನರ ಬಾಯಿಯಾಯಿತು. ಆಶ್ಚರ್ಯಕರ ವೆಂಬಂತೆ ಬಂಡವಾಳಶಾಹಿಗರ ಉನ್ನತ ತಾಂತ್ರಿಕತೆಗೆ ಪ್ರತಿಯಾಗಿ ಅತ್ಯುತ್ಕೃಷ್ಟ ತಾಂತ್ರಿಕತೆ ಅಳವಡಿಸಿಕೊಂಡಿತು.

ದೇಶಾಭಿಮಾನಿಯ ಹೆಜ್ಜೆಗಳು

1942ರ ಸೆಪ್ಟೆಂಬರ್ 6ರಂದು ವಾರಪತ್ರಿಕೆಯಾಗಿ ಕಲ್ಲಿಕೋಟೆಯಲ್ಲಿ ಆರಂಭ. ಆರಂಭದಿಂದಲೇ ಶ್ರಮಜೀವಿ ವರ್ಗದ ಹೋರಾಟ ನಿರತ ಪತ್ರಿಕೆ. ಪತ್ರಿಕೆಯ ಮೇಲೆ ಬ್ರಿಟಿಷ್ ಸರಕಾರದ ಕೆಂಗಣ್ಣು, ವ್ಯಾಪಕ ತೆರಿಗೆ ಹೇರಿಕೆ. ಆದರೆ ಜನರಿಂದ ಪತ್ರಿಕೆಗೆ ರಕ್ಷಣೆ.

1946ರಲ್ಲಿ ದಿನಪತ್ರಿಕೆಯಾಗಿ ಮಾಡಬೇಕೆಂದಾಗ ಜನರಿಂದ ಅಭೂತಪೂರ್ವ ಪ್ರತಿಕ್ರಿಯೆ. ಕೊಡುಗೆಯ ಮಹಾಪೂರ. ಎಕೆಜಿ ನೇತೃತ್ವದಲ್ಲಿ ಧನ ಸಂಗ್ರಹ.

ಜನವರಿ 8, 1946ರಿಂದ ದಿನಪತ್ರಿಕೆಯಾಗಿ ದೇಶಾಭಿಮಾನಿ.

ಸ್ವತಂತ್ರ ಭಾರತದಲ್ಲಿ ದೇಶಾಭಿಮಾನಿಗೆ ನಿಷೇಧ. 1948ರಲ್ಲಿ ಮುದ್ರಣಾಲಯ ಮುಟ್ಟುಗೋಲು. 4 ವರ್ಷ ಪತ್ರಿಕೆಗೆ ನಿಷೇಧ.

ತುರ್ತು ಪರಿಸ್ಥಿತಿ ಕಾಲದಲ್ಲಿ ದೇಶಾಭಿಮಾನಿ ಮೇಲೆ ನಡೆದಷ್ಟು ಮರ್ದನ ಬೇರಾವ ಪತ್ರಿಕೆಯ ಮೇಲೂ ನಡೆಯಲಿಲ್ಲ.

ಈತನ್ಮಧ್ಯೆ ಪತ್ರಿಕೆಯ ಕೊಚ್ಚಿ ಆವೃತ್ತಿ. 1990ರಲ್ಲಿ ಪತ್ರಿಕೆಯ ಮೂರನೆಯ ಆವೃತ್ತಿ ತಿರುವನಂತಪುರದಿಂದ. ಜನತೆ 41 ಲಕ್ಷ ರೂ ಸಂಗ್ರಹಿಸಿಕೊಟ್ಟಿತು. ನಾಲ್ಕನೇ ಆವೃತ್ತಿ ಕಣ್ಣಾನೂರಿನಿಂದ 1993ರಲ್ಲಿ. ಒಂದೇ ದಿನದಲ್ಲಿ 42 ಲಕ್ಷರೂ ಸಂಗ್ರಹ. 30000 ಮಂದಿ ಅಜೀವ ಸದಸ್ಯರಾಗಿ 1 ಕೋಟಿ ರೂ. ಸಂಗ್ರಹ.

ಕೊಟ್ಟಾಯಂ ಆವೃತ್ತಿ:

ಮಾರ್ಚ್ 22, 1997 ಕೇರಳದ ಜನತೆಗೆ ಸಂಭ್ರಮದ ದಿನ. ಅಂದು ದೇಶಾಭಿಮಾನಿಯ 5ನೇ ಆವೃತ್ತಿ ಕೊಟ್ಟಾಯಂನಿಂದ ಆರಂಭ. ಬಂಡವಾಳಶಾಹಿಗಳಿಗೇ ಪತ್ರಿಕೆ ನಡೆಸುವುದು ಕಷ್ಟದ ಕೆಲಸವಾಗಿರುವಾಗ ಕಮ್ಯುನಿಸ್ಟ್ ಪತ್ರಿಕೆಯೊಂದು 5ನೇ ಆವೃತ್ತಿ ಕಂಡಿರುವುದು ದಾಖಲೆಯಲ್ಲದೆ ಮತ್ತೇನು.

ಕೊಟ್ಟಾಯಂ 'ಮಲಯಾಳಂ ಮನೋರಮಾ'ದ ಹುಟ್ಟೂರು. ಕಮ್ಯುನಿಸ್ಟ್ ವಿರೋಧಿಯೆಂದು ಹೆಸರಿರುವ ಮನೋರಮಾ ಕೊಟ್ಟಾಯಂ ತನ್ನ ಗುತ್ತಿಗೆಯೆಂದು ಬಗೆದಿತ್ತು. ಅದಕ್ಕೆ ಇದೀಗ ಆಘಾತವಾಗಿದೆ.

ಈ ಸಂಭ್ರಮದ ಸಮಾರಂಭಕ್ಕೆ ಇಎಂಎಸ್‌ರವರು ತಮ್ಮ ವಿಶ್ರಾಂತಿಯನ್ನು ಬದಿಗೊತ್ತಿ ಕೊಟ್ಟಾಯಂಗೆ ಧಾವಿಸಿದರು. ದೇಶಾಭಿಮಾನಿಯ ಸ್ಥಾಪಕರಲ್ಲೊಬ್ಬರಾದ ಅವರು ಇದೀಗ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದಾರೆ.

ಜನರೇ ಬೆಳೆಸಿದ ಪತ್ರಿಕೆ

ದೇಶಾಭಿಮಾನಿಯ ಬೆಳವಣಿಗೆಯಲ್ಲಿ ಕೇರಳ ಜನತೆಯ ತ್ಯಾಗ, ಬಲಿದಾನ, ಅಭಿಮಾನ, ವಾತ್ಸಲ್ಯದ ಕಥೆಗಳಿವೆ.

1946ರಲ್ಲಿ ದಿನಪತ್ರಿಕೆ ಆಗುವಾಗ ಕೇರಳ ಜನತೆ ಮನಸಾರೆ ಸ್ಪಂದಿಸಿದರು. ರಾಷ್ಟ್ರೀಯ ನಿಧಿಗೆ ಎಂಬಂತೆ ಹಣದ ಹೊಳೆ ಹರಿದು ಬಂತು. ಪಾಲೋರಾ ಮಾತಾ ಎಂಬಾಕೆಯ ಜೀವನದ ಏಕೈಕ ಆಧಾರ-ಒಂದು ಹಸು. ದೇಶಾಭಿಮಾನಿ ಸಹಾಯ ಯಾಚಿಸಿದಾಗ ಹಿಂದೆ ಮುಂದೆ ನೋಡದೆ ಹಸುವನ್ನೇ ಮಾರಿ ದೇಶಾಭಿಮಾನಿಗೆ ಕಾಣಿಕೆಯಿತ್ತಳು.

ಆ ಮಾತೆಯ ತ್ಯಾಗ ಇಎಂಎಸ್‌ರ ಹೃದಯ ಕಲಕಿತು. ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಮಾರಿ ರೂ. 75000ವನ್ನು ದೇಶಾಭಿಮಾನಿಗೆ ದಾನ ಮಾಡಿದರು.

ಕೊಟ್ಟಾಯಂನ ಆವೃತ್ತಿಗೆ ಒಂದೇ ದಿನದಲ್ಲಿ ನಿಗದಿತ ರೂ. 45 ಲಕ್ಷಕ್ಕೆ ಬದಲಾಗಿ ರೂ. 75 ಲಕ್ಷ ಸಂಗ್ರಹಿಸಿಕೊಟ್ಟಿತು ಕೇರಳದ ಜನತೆ. ☐

ಅಂತರಿಕ್ಷದಿಂದಲೇ ಬಂದ ಆಮದು ರಫ್ತು ನೀತಿ

ಮುಂದಿನ ಐದು ವರ್ಷಗಳವರೆಗೆ ಜಾರಿಯಲ್ಲಿರುವ ಆಮದು-ರಫ್ತು ನೀತಿಯ ಘೋಷಣೆ ಆಗಿದೆ. ಸಂಯುಕ್ತ ರಂಗ ಸರಕಾರಕ್ಕೆ ಕಾಂಗ್ರೆಸ್ ಪಕ್ಷ ಬೆಂಬಲ ಹಿಂತೆಗೆದುಕೊಂಡ ಮಾರನೇ ದಿನವೇ ಸಂಯುಕ್ತರಂಗ ವಾಣಿಜ್ಯಮಂತ್ರಿ ಬಿ.ಬಿ.ರಾಮಯ್ಯ ಈ ನೀತಿಯನ್ನು ಪ್ರಕಟಿಸಿದ್ದಾರೆ. ಅವರ ಸರಕಾರವೇ ಅಂತರಿಕ್ಷದಲ್ಲಿ ನೇತಾಡುತ್ತಿದ್ದರೂ ಈ ನೀತಿಯನ್ನು ಮಾತ್ರ ಅವರು ಪ್ರಕಟಿಸಿಬಿಟ್ಟಿದ್ದಾರೆ.

ಗ್ಯಾಟ್ ಒಪ್ಪಂದಕ್ಕೆ ಅನುಗುಣವಾಗಿರುವ ಈ ನೀತಿ ಜಾಗತೀಕರಣದ ಮುಂದುವರಿಕೆಯೇ ಆಗಿದೆ. ಕಾಂಗ್ರೆಸ್‌ನ ನೀತಿಯನ್ನೇ ಮುಂದುವರಿಸಿಕೊಂಡು ಬಂದಿರುವ ಸಂಯುಕ್ತ ರಂಗ ಸರಕಾರಕ್ಕೆ ತನ್ನ ಅಧಿಕಾರ ಅಲ್ಲಾಡುತ್ತಿದ್ದರೂ ಪರವಾಗಿಲ್ಲ ಈ ಆಳುವ ವರ್ಗದ ಪರ(ಮತ್ತು ಜನಸಾಮಾನ್ಯರ ವಿರುದ್ಧ)ವಾದ ನೀತಿಯನ್ನು ಪ್ರಕಟಿಸಲೇಬೇಕೆಂಬ ಒಳಾಗ್ರಹ. ಇವರ ವರ್ಗಪ್ರೇಮ ಹೇಗಿರುತ್ತದೆಂಬುದಕ್ಕೆ ಇದು ಸಾಕ್ಷಿ. ಇಂತಹ ನಡವಳಿಕೆಯನ್ನು ದೊಡ್ಡ ಗುಣವೆಂದು ದೇಶದ ಒಳಿತಿಗಾಗಿ ದುಡಿವ ತುಡಿತವೆಂದೂ ಹೇಳಿಕೊಂಡು ತಮ್ಮ ಬೆನ್ನನ್ನೇ ತಾವು ತಟ್ಟಿಕೊಳ್ಳುತ್ತಾರೆ ಇವರು.

ಈ ನೀತಿಯ ತಿರುಳೇನು? ಆಗಲೇ ಹೇಳಿದಂತೆ ಆಮದು-ರಫ್ತುಗಳ ಮೇಲೆ ಈಗ ಇರುವನಿರ್ಬಂಧಗಳನ್ನು ತೆಗೆದುಹಾಕಿ ಉದಾರೀಕರಿಸುವುದೇ ಈ ನೀತಿಯ ಉದ್ದೇಶ. ಇದು ದೇಶಕ್ಕೆ ನಿಜದಲ್ಲಿ ಹಾನಿಯನ್ನೇ ಮಾಡುವುದಾದರೂ ದೇಶಕ್ಕೆ ಅಭಿವೃದ್ಧಿ ತಂದುಕೊಡುತ್ತದೆಂದು ಅವರ ಪ್ರತಿಪಾದನೆ. ಈ ನೀತಿಯ ಮುಖ್ಯ ಅಂಶಗಳೇನು?

- ಮೌಲ್ಯಾಧಾರದ ಮೇಲೆ ಮೊದಲೇ ಲೈಸೆನ್ಸ್ ನೀಡುವ ವಿಧಾನವನ್ನು ಇನ್ನೂ ಸರಳೀಕರಿಸಲಾಗಿದೆ - 542 ನಿರ್ಬಂಧಿತ ವಸ್ತುಗಳ ಮೇಲಿನ ಆಮದು ನಿರ್ಬಂಧ ಉದಾರೀಕರಣ.
- ಕೃಷಿ, ಉನ್ನತ ತಂತ್ರಜ್ಞಾನ ಮತ್ತು ಸಣ್ಣ ಕೈಗಾರಿಕಾ ಉತ್ಪನ್ನಗಳಿಗೆ ವಿಶೇಷ ಸೌಲಭ್ಯಗಳು.
- ರಫ್ತಿಗಾಗಿ ಆಗುವ ಆಮದಿನ ಮೇಲಿನ ಸುಂಕ ಕಡಿತ.
- ಇಲೆಕ್ಟ್ರಾನಿಕ್ ಸರಕುಗಳ ಮೇಲೆ ವಿಶೇಷ ಸವಕಳಿ ನಿಯಮ...... ಇತ್ಯಾದಿ.

ಇವೆಲ್ಲವನ್ನು ಒಟ್ಟಾರೆಯಾಗಿ ನೋಡಿದರೆ ಇದು ದೇಶದ ಅಭಿವೃದ್ಧಿಗೆ ನೆರವಾಗುವ ಬದಲಿಗೆ ವಿದೇಶೀ ಕಂಪನಿಗಳಿಗೆ ಮತ್ತು ನಮ್ಮ ದೇಶದ ದೊಡ್ಡ ಕಂಪನಿಗಳಿಗೆ ಅನುಕೂಲ ಮಾಡಿಕೊಡುತ್ತದೆ ಎಂಬುದು ಸ್ಪಷ್ಟ. ಒಂದಲ್ಲ ಒಂದು ಹೆಸರಿನಲ್ಲಿ ಯಾವುದೇ ವಸ್ತುವನ್ನಾದರೂ ಆಮದು ಮಾಡಿಕೊಳ್ಳುವ ಅವಕಾಶವಿದ್ದರೆ ಅದು ದೇಶೀ ಉದ್ದಿಮೆಯನ್ನು ಹಾಳುಗೆಡವದೇ ಬಿಟ್ಟೀತೆ? ಅಲ್ಲದೆ ಕಳೆದೈದು ವರ್ಷಗಳ ಉದಾರೀಕರಣದ ಕ್ರಮಗಳು ಇಂದು ರಫ್ತಿನ ಪ್ರಮಾಣ ಅಪಾರವಾಗಿ ಹೆಚ್ಚುವಂತೆ ಮಾಡಬೇಕಾಗಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಬದಲಿಗೆ ಇನ್ನೂ ಹೆಚ್ಚೆಚ್ಚು ರಿಯಾಯಿತಿ ನೀಡಬೇಕೆಂಬ ಬೇಡಿಕೆ ಬರತೊಡಗಿದೆ. ಇದರರ್ಥ ರಫ್ತು ಮಾಡಲು ಬೇಕಾದ ಸಾಮರ್ಥ್ಯ ಬೆಳೆಸಿಕೊಳ್ಳದೇ ಇತರ ಏನೇನೊ ಸರ್ಕಸ್ಸುಗಳನ್ನು ಮಾಡುವ ಪ್ರಯತ್ನಗಳನ್ನು ಮಾಡುತ್ತಿದ್ದೇವೆ.

ಆದ್ದರಿಂದ ಆಮದು-ರಫ್ತಿನ ಸಮತೋಲವನ್ನು ನಮ್ಮ ಆರ್ಥಿಕ ಬೆಳೆಸಿಕೊಂಡು ಬರುವುದು ಸಾಧ್ಯವಾಗಿಲ್ಲ. ಹೀಗಿರುವಾಗ ಇಂತಹ ಉದಾರೀಕರಣ ನೀತಿಗಳು ದೇಶದ ಆರ್ಥಿಕವನ್ನೇ ಹಾಳುಗೆಡುವುತ್ತವೆ ಹೊರತು ಇನ್ನೇನಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕೆಲವೇ ಕೆಲವು ಬಂಡವಾಳಿಗರ ಲಾಭಕ್ಕಾಗಿ ಈ ನೀತಿ ಹೊರಬಂದಿದೆ. ಅದಕ್ಕೆ ಬೆಲೆ ತೆರುವವರು ದೇಶದಜನಸಾಮಾನ್ಯರು.

ಹೀಗಿರುವಾಗ ನೀತಿಗಳು ಅಂತರಿಕ್ಷದಿಂದಲಾದರೂ ಬಂದು ಬಿಡುತ್ತವೆ ಆಶ್ಚರ್ಯವೇನು? ಅಲ್ಲವೆ?

ಸುಭಿಕ್ಷದೊಂದಿಗೆ ಉಪವಾಸ

ಇದು ಭಾರತದ ಆರ್ಥಿಕ ಕಾಣುತ್ತಿರುವ ಪರಿಸ್ಥಿತಿ. ಇದನ್ನು ಹೇಳಿದ್ದು ವಿಶ್ವಸಂಸ್ಥೆ. ಏನು ಹಾಗೆಂದರೆ?

ಭಾರತದಲ್ಲಿ ಆರ್ಥಿಕ ಬೆಳವಣಿಗೆ ಆಗುತ್ತಿದೆ. ಆದರೆ ಉದ್ಯೋಗಗಳನ್ನು ಮಾತ್ರ ಕೇಳಬೇಡಿ. ಅಂದರೆ ಭಾರತದಲ್ಲಿ ಬೆಳವಣಿಗೆ ಆಗುತ್ತಿದೆ. ಉದ್ಯೋಗಗಳು ಮಾತ್ರ ಬೆಳೆಯುತ್ತಿಲ್ಲ. ಇದರ ಅರ್ಥ ಬಹಳ ಸರಳವಾದದ್ದು. ಬಂಡವಾಳಕ್ಕೆ ಪ್ರತಿಫಲ ಬರುತ್ತಿದೆ. ಬಂಡವಾಳದ ಸುತ್ತಲೂ ಹೆಚ್ಚೆಚ್ಚು ಬಂಡವಾಳ ಸೇರಿಕೊಳ್ಳುತ್ತಿದೆ ಆದರೆ ದೇಶದ ಬಹುತೇಕ ಜನತೆಗೆ ಈ ಬೆಳವಣಿಗೆಯ ಪ್ರಯೋಜನವೇ ಇಲ್ಲ.

ಬೂರ್ಜ್ವಾ ಅರ್ಥಶಾಸ್ತ್ರದಂತೆಯೇ ಉತ್ಪಾದನೆ ಮತ್ತು ಅದರ ವಿತರಣೆ ಆರ್ಥಿಕದ ಎರಡು ಬಹುಮುಖ್ಯ ಕಾರ್ಯಗಳು. ಉತ್ಪಾದನೆ ಆದರೆ ಅದನ್ನು ಹೇಗೆ ವಿತರಿಸಬೇಕು? ಉದ್ಯೋಗಗಳ ಮೂಲಕ ಉತ್ಪಾದನೆಯ ಹಂಚಿಕೆ ಆಗುತ್ತದೆ. ಯಾಕೆಂದರೆ ಉದ್ಯೋಗ ಜನರಿಗೆ ಕೊಳ್ಳುವ ಸಾಮರ್ಥ್ಯ ನೀಡುತ್ತದೆ.

ಉದ್ಯೋಗಗಳ ಬೆಳವಣಿಗೆ ಇಲ್ಲದೇ ಬೆಳವಣಿಗೆ ಅಂದರೆ ಅರ್ಥ ಉಳ್ಳವರತ್ತ ಇನ್ನೂ ಹೆಚ್ಚೆಚ್ಚು ಸಂಪತ್ತು ಹರಿದು ಬರುತ್ತಿದೆ ಎಂದರ್ಥ. ಉದ್ಯೋಗವಿಲ್ಲದವರಿಗೆ ಉಪಾವಸವೇ ಗತಿ.

ಇದೇ ನಮ್ಮ ಉದಾರೀಕರಣವಾದಿಗಳು ಬಯಸುವ ಬೆಳವಣಿಗೆ ಇರಬೇಕಲ್ಲವೇ?

ಹೆಚ್‌ಎಂಟಿಯ ಸಾಧನೆ

ಸಾರ್ವಜನಿಕ ವಲಯದ ಉದ್ದಿಮೆಗಳೆಂದರೆ ಅಸಾಮರ್ಥ್ಯದ ಕೊಂಪೆಗಳು, ಯಾವಾಗಲೂ ಹಾನಿ ಮಾಡುತ್ತವೆ, ಸಂಪನ್ಮೂಲಗಳ ದುರ್ಬಳಕೆ ಆಗುತ್ತದೆ ಎಂದೆಲ್ಲ ಆಪಾದನೆಗಳನ್ನು ಮಾಡಲಾಗುತ್ತದೆ. ಒಂದೊಂದು ಸಾರ್ವಜನಿಕ ವಲಯದ ಉದ್ದಿಮೆ ಹಾನಿ ಮಾಡಿದಾಗಲೂ 'ನೋಡಿ ನಾವು ಹೇಳಲಿಲ್ಲವೇ?" ಎಂದು ಭವಿಷ್ಯಕಾರರು ಪೋಸು ನೀಡುತ್ತಾರೆ. ನಮ್ಮ ಬೂರ್ಜ್ವಾ ಬುದ್ಧಿಜೀವಿಗಳು, ರಾಜಕಾರಣಿಗಳು. ಈ ಉದ್ದಿಮೆಗಳು ದೇಶಕ್ಕೆ ನೀಡಿರುವ ಕೊಡುಗೆಗಳೇನು, ಅವುಗಳು ಎಂತಹ ಪಾತ್ರವನ್ನು ಆರ್ಥಿಕದಲ್ಲಿ ಹೊಂದಿವೆ, ಯಾಕೆ ಹಾನಿ ಮಾಡುತ್ತವೆ ಎಂಬ ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರ ಹುಡುಕುವ ಕೆಲಸ ಅವರಿಗೆ ಅಪ್ರಿಯವಾದದ್ದು.

ದೇಶದ ಸಾರ್ವಜನಿಕ ವಲಯದ ಒಂದು ಮುಖ್ಯ ಉದ್ದಿಮೆಯಾದ ಹೆಚ್‌ಎಂಟಿ ಹಾನಿ ಮಾಡಿದಾಗ ಈ ಪಂಡಿತರುಗಳೆಲ್ಲ ಇಂತಹದ್ದೇ ಮಾತುಗಳನ್ನು ಆಡಿದ್ದರು.

ಕಳೆದ ಸಾಲುಗಳಲ್ಲಿ 55.89ಕೋಟಿ ರೂಪಾಯಿಗಳ ಹಾನಿ ಮಾಡಿದ್ದ ಹೆಚ್‌ಎಂಟಿ ಲಾಭಗಳಿಸಿ ಈ ಸಂಚಲಿತ ಹಾನಿಯನ್ನು 18.60 ಕೋಟಿ ರೂಪಾಯಿಗಳಿಗೆ ಇಳಿಸಿದೆ. ಇದು ಹೆಚ್‌ಎಂಟಿಯ ಒಂದು ದೊಡ್ಡ ಸಾಧನೆ. ಮುಂದಿನ ವರ್ಷದ ವೇಳೆಗೆ ಅದು ಹಾನಿಯನ್ನು ಪೂರ್ತಿಯಾಗಿ ತೊಡೆದು ಹಾಕುವ ಪರಿಸ್ಥಿತಿಯಲ್ಲಿದೆ. ಆಳುವ ವರ್ಗ ತನ್ನ ವರ್ಗದ ಲಾಭಕ್ಕಾಗಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಳಸಿಕೊಂಡು ನಂತರ ಅವುಗಳ ಮೇಲೆ ಗೂಬೆ ಕೂರಿಸುತ್ತವೆ. ಇಂತಹ ಪರಿಸ್ಥಿತಿಗಳ ನಡುವೆಯೂ ಒಂದು ಸಾರ್ವಜನಿಕ ವಲಯದ ಉದ್ಯಮ ಲಾಭ ತೋರಿಸುತ್ತದೆಂದರೆ ಅದು ಮಹಾನ್ ಸಾಧನೆ. ಅಂತಹ ಸಾಧನೆಗಳನ್ನು ಹೆಚ್‌ಎಂಟಿ ಮಾಡಿ ತೋರಿಸಿದೆ.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಎನ್‌ಜಿಇಎಫ್‌ಗೆ ಉರುಳು

ಕರ್ನಾಟಕ ಸರಕಾರದ ಸ್ವಾಮ್ಯದ ಎನ್‌ಜಿಇಎಫ್ ಉದ್ದಿಮೆಗೆ ಈಗ ಉರುಳು ಹಾಕಲಾಗುತ್ತಿದೆ. ಎನ್‌ಜಿಇಎಫ್ ಅನ್ನು ಜರ್ಮನಿಯ ಎಇಜಿಗೆ ಮಾರಲಾಗುತ್ತಿದೆ. ಎನ್‌ಜಿಇಎಫ್ ಕಳೆದ ಕೆಲವು ವರ್ಷಗಳಲ್ಲಿ ಒಟ್ಟು 41.27 ಕೋಟಿ ರೂಪಾಯಿಗಳನ್ನು ಹಾನಿ ಮಾಡಿದೆ.

ರೋಗಗ್ರಸ್ತ ಉದ್ದಿಮೆಯೆಂದು ಘೋಷಣೆಯಾದ ಮೇಲೆ ಈ ಉದ್ದಿಮೆಯನ್ನು ಪುನರುಜ್ಜೀವನಗೊಳಿಸಲು ಕರ್ನಾಟಕ ಸರಕಾರ ಹಣಕಾಸು ನೆರವು ನೀಡಬೇಕಾಗಿತ್ತು. ಆದರೆ ಸರಕಾರ ನೆರವು ನೀಡಲಿಲ್ಲ. ಈ ಸಾರಿಯ ಬಜೆಟ್‌ನಲ್ಲಿ ಬರೀ 4 ಕೋಟಿ ರೂಪಾಯಿಗಳನ್ನು ಸರಕಾರ ತೆಗೆದಿರಿಸಿದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.


ಜರ್ಮನಿಯ ಎಇಜಿಗೆ ತನ್ನ ಪಾಲನ್ನು ಮಾರಿದರೆ ಆ ಹಣದಿಂದ ಎನ್‌ಜಿಇಎಫ್‌ನ ಸಾಲಗಳನ್ನು ತೀರಿಸಲಾಗುತ್ತದಂತೆ.

ಕರ್ನಾಟಕ ಸರಕಾರದ ಭಾರಿ ಉದ್ದಿಮೆಗಳ ಸಚಿವ ಆರ್.ವಿ.ದೇಶಪಾಂಡೆ ಈ ಉದ್ದಿಮೆಯನ್ನು ಮಾರುವುದೊಂದೇ ಉಳಿದಿರುವ ದಾರಿಯೆಂದು ಹೇಳಿಬಿಟ್ಟಿದ್ದಾರೆ.

ಯಾರು ಈ ಉದ್ದಿಮೆಯನ್ನು ರೋಗಗ್ರಸ್ತಗೊಳಿಸಿದ್ದು? ಕರ್ನಾಟಕದ ಸರಕಾರಗಳೇ ಅಲ್ಲವೇ?

ಏಕೆ ಸರಿಪಡಿಕೆ ಚಳುವಳಿ?

ಸಿಪಿಐ(ಎಂ)ನ ೧೫ನೇ ಮಹಾಧಿವೇಶನ ಪಕ್ಷದೊಳಗೆ ಒಂದು ಸರಿಪಡಿಕೆ ಚಳುವಳಿ ನಡೆಸಲು ಕರೆ ನೀಡಿತ್ತು. ನಂತರ ಈ ಬಗ್ಗೆ ಕೇಂದ್ರ ಸಮಿತಿ ಒಂದು ದಸ್ತಾವೇಜು ತಯಾರಿಸಿ ಇದರ ಬಗ್ಗೆ ದೇಶಾದ್ಯಂತ ಪಕ್ಷದ ಎಲ್ಲಾ ಘಟಕಗಳಲ್ಲಿ ಚರ್ಚಿಸಲಾಗುತ್ತಿದೆ. ಈ ಚಳುವಳಿ ಏಕಾಗಿ? ಹಿರಿಯ ಸಿಪಿಐ(ಎಂ) ಮುಖಂಡ ಇ.ಎಂ.ಎಸ್. ನಂಬೂದರಿಪ್ಪಾಡ್ ಈ ಚಳುವಳಿಯ ಹಿಂದಿರುವ ತರ್ಕದ ಬಗ್ಗೆ ಹೇಳುತ್ತಾರೆ.



15ನೇ ಮಹಾಧಿವೇಶನ ಸರಿಪಡಿಕೆ ಚಳುವಳಿ ನಡೆಸಲು ಏಕೆ ಕರೆ ನೀಡಿತು? ಏಕೆಂದರೆ ಆ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿ ಒಂದು ತೀರ್ಮಾನಕ್ಕೆ ಬಂದಿತ್ತು-ಪಕ್ಷ ಗಮನಾರ್ಹ ಮುನ್ನಡೆ ಸಾಧಿಸಿದರೂ ಕೆಲವು ನಕಾರಾತ್ಮಕ ಅಂಶಗಳು ಕಂಡು ಬಂದಿವೆ. ಇದನ್ನು ಸರಿಪಡಿಸುವುದು ಅಗತ್ಯ ಎಂಬ ತೀರ್ಮಾನವದು.

ಉದಾಹರಣೆಗೆ ಪಕ್ಷದೊಳಗಿನ ಸಂಸದೀಯ ಸಮಯ ಸಾಧಕತೆಯ ಒತ್ತಡ ಉಂಟಾಗಿದೆ ಎಂಬ ಒಂದು ಅಂಶ. ಮಾರ್ಕ್ಸ್‌ವಾದಿ-ಲೆನಿನ್ ವಾದಿಗಳಿಗೆ ಸಂಸದೀಯ ಚಟುವಟಿಕೆಗಳು, ಸರಕಾರದ ಕಾರ್ಯನಿರ್ವಹಣೆಗಳು ಕೂಡಾ ಸಾಮೂಹಿಕ ಸಂಘಟನೆಗಳ ಹೋರಾಟಗಳಿಗೆ, ಚಳುವಳಿಗಳಿಗೆ ಪಕ್ಷದ ಸೈದ್ಧಾಂತಿಕ ಹೋರಾಟಕ್ಕೆ ಅಧೀನವಾಗಿರಬೇಕು. ಆದರೆ ಸಿಪಿಐ(ಎಂ)ನಲ್ಲಿ ಈಗ ಸಂಸದೀಯ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರವೃತ್ತಿ ಕಾಣಿಸುತ್ತಿದೆ.

ಇದೊಂದು ಗಂಭೀರವಾದ, ಆದರೆ, ಸಹಜವಾದ ಬೆಳವಣಿಗೆ. ಏಕೆಂದರೆ ಸಿಪಿಐ(ಎಂ) ಎರಡು ದಶಕಗಳ ಕಾಲ ಸತತವಾಗಿ ಪಶ್ಚಿಮ ಬಂಗಾಳದಲ್ಲಿ ಆಳ್ವಿಕೆಗೆ ನೇತೃತ್ವ ನೀಡುತ್ತಿದೆ. ತ್ರಿಪುರಾದಲ್ಲಿ 5 ವರ್ಷಗಳ ನಂತರ ಮತ್ತೆ ಅಧಿಕಾರದಲ್ಲಿದೆ. ಕೇರಳದಲ್ಲಿ ಅಧಿಕಾರಕ್ಕೆ ಬಂದು ಹೋಗುತ್ತಾ ಇದೆ. ಈಗ ಒಂದು ವರ್ಷದಲ್ಲಿ ಸುಮಾರಾಗಿ ಸ್ಥಿರವಾಗಿ ನೆಲೆಗೊಂಡಿದೆ. ಇವೆಲ್ಲದರಿಂದಾಗಿ ಪಕ್ಷದ, ಮುಖಂಡರ ಸದಸ್ಯರ ಗಮನ ಸಂಸದೀಯ ಚಟುವಟಿಕೆಗಳತ್ತ ಹೋಗಿದೆ. ರಾಜಕೀಯ ಹೋರಾಟಗಳು, ಬಂಡವಾಳಶಾಹಿ-ಭೂಮಾಲಕ ಆಳುವ ವರ್ಗಗಳೊಂದಿಗೆ ಸೈದ್ಧಾಂತಿಕ ಸಂಘರ್ಷದ ಹಿನ್ನೆಲೆಗೆ ಸರಿದಿವೆ. 15ನೇ ಮಹಾಧಿವೇಶನ ಬೊಟ್ಟು ಮಾಡಿದ್ದು ಈ ಅಪಾಯದತ್ತಲೇ.

ಎಂ.ಪಿ./ಎಂ.ಎಲ್.ಎ. ಸ್ಥಾನಗಳ ಮೇಲೇ ಕಣ್ಣು

ಈ ಸಂಸದೀಯ ಸಮಯಸಾಧಕತನ ಸಾಮೂಹಿಕ ಸಂಘಟನೆಗಳ ಕಾರ್ಯ ನಿರ್ವಹಣೆಯಲ್ಲಿ ಕೆಲವು ನಕಾರಾತ್ಮಕ ಅಂಶಗಳ ಬೆಳವಣಿಗೆಗೆ ಅವಕಾಶ ನೀಡಿದೆ. ಇಂತಹ ಒಂದು ಮುಖ್ಯ ದುಷ್ಟ ಪ್ರವೃತ್ತಿಯೆಂದರೆ ಕಾರ್ಮಿಕ ಸಂಘ ಮುಂತಾದ ಸಾಮೂಹಿಕ ಸಂಘಟನೆಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸದಿರುವುದು, ಅವನ್ನು ಪಕ್ಷದ ಬಾಲಂಗೋಚಿಗಳಂತೆ ಕಾಣುವುದು. ಈ ತಪ್ಪು ಪ್ರವೃತ್ತಿಯತ್ತ 1978ರಲ್ಲೇ ಸಾಲ್ಕಿಯಾ ಪ್ಲೀನಂ ಪಕ್ಷದ ಗಮನ ಸೆಳೆದಿತ್ತು. ಈ ಪ್ರವೃತ್ತಿಯಿಂದಾಗಿ ಪಕ್ಷಕ್ಕೆ ಸೇರದ ಸದಸ್ಯರು ಪಕ್ಷದ ಸದಸ್ಯರೊಂದಿಗೆ ಸಮಾನ ಸ್ಕಂಧರಾಗಿ ದುಡಿಯಲು ಅಡ್ಡಿಯುಂಟಾಗಿ ಐಕ್ಯ ಹೋರಾಟಗಳ ಯಶಸ್ಸನ್ನು ಕ್ರೋಢೀಕರಿಸುವಲ್ಲಿ ತೊಂದರೆಯಾಗುತ್ತಿದೆ.

15ನೇ ಮಹಾಧಿವೇಶನ ಗಮನಿಸಿದ ಇನ್ನೊಂದು ಸಂಗತಿಯೆಂದರೆ ಪಕ್ಷದ ಸದಸ್ಯರು ವಿವಿಧ ಜನಸಮೂಹಗಳ ನಡುವೆ ಕೆಲಸ ಮಾಡುವ ಕಣ್ಣೋಟಕ್ಕಿಂತ ಎಂ.ಪಿ.ಗಳೋ ಎಂಎಲ್‌ಎಗಳೋ ಆಗುವತ್ತಲೇ ಹೆಚ್ಚಿನ ಗಮನ ಕೊಡುವುದು. ಇಂತಹ ಸಂಸದೀಯ ಸಮಯಸಾಧಕತನದ ದುಷ್ಪರಿಣಾಮವಾಗಿ ಪಕ್ಷದಲ್ಲಿ ಗುಂಪುಗಾರಿಕೆ ಬೆಳೆಯಲು ಅವಕಾಶವಾಗಿದೆ. ಕೇರಳ ರಾಜ್ಯ ಸಮಿತಿಯಲ್ಲಿ ಇಂತಹ ಗುಂಪುಗಾರಿಕೆ ಪಕ್ಷದ ಕೆಲಸ ಕಾರ್ಯಗಳನ್ನು ತಟ್ಟಿದೆ ಎಂದೂ 15ನೇ ಮಹಾಧಿವೇಶನ ಗುರುತಿಸಬೇಕಾಯಿತು. ಆದರೆ 15ನೇ ಮಹಾಧಿವೇಶನದ ನಂತರ ಕೇರಳದಲ್ಲಿ ಪಕ್ಷದ ಸಂಘಟನೆ ಈ ದುಷ್ಟ ಪ್ರವೃತ್ತಿಯನ್ನು ಬುಡ ಸಹಿತ ಕಿತ್ತು ಹಾಕಲು ವ್ಯವಸ್ಥಿತ ಪ್ರಯತ್ನ ನಡೆಸಿದೆ. ಸ್ವತಃ ಪಕ್ಷದ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರೇ ಇದರ ನೇತೃತ್ವ ವಹಿಸಿದರು. ಪಕ್ಷದೊಳಗೆ ಗುಂಪುಗಾರಿಕೆಗೆ ಖಂಡಿತಾ ಅವಕಾಶವಿಲ್ಲ, ಅದನ್ನು ಬುಡಸಹಿತ ಕಿತ್ತು ಬಿಸಾಕಬೇಕು ಎಂದು ಅವರು ವಿವಿಧ ಸಭೆಗಳಲ್ಲಿ ಒತ್ತಿ ಹೇಳಿದರು. ಇದರ ಫಲವಾಗಿ ಕೇರಳದ ಪಕ್ಷದಲ್ಲಿ ಪರಿಸ್ಥಿತಿ ಸುಧಾರಿಸಿದೆ. ಈಗ ಬಂಡವಾಳಶಾಹಿ ಪತ್ರಿಕೆಗಳೂ "ಕೇರಳದಲ್ಲಿ ಸಿಪಿಐ(ಎಂ) ಗುಂಪುಗಾರಿಕೆ"ಯ ಬಗ್ಗ ಬರೆಯುವುದನ್ನು ಸುಮಾರಾಗಿ ನಿಲ್ಲಿಸಿಬಿಟ್ಟಿದ್ದಾರೆ.

ಮರು ಶಿಕ್ಷಣ-ಶಿಕ್ಷಣ

ಆದರೂ ಈ ಪ್ರವೃತ್ತಿ ಪೂರ್ಣವಾಗಿ ಹೋಗಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ಹಳೆ ಸದಸ್ಯರಿಗೆ ಮರು ಶಿಕ್ಷಣ ಮತ್ತು ಹೊಸ ಸದಸ್ಯರಿಗೆ ಶಿಕ್ಷಣ ನೀಡುವ ಅಗತ್ಯವಿದೆ. ಒಂದು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷ ಪಕ್ಷದೊಳಗೆ ಅಂದರೆ ಆಂತರಿಕ ಪ್ರಜಾಪ್ರಭುತ್ವವನ್ನು ಪೋಷಿಸುತ್ತದೆ. ಆದರೆ ಈ ಆಂತರಿಕ ಪ್ರಜಾಪ್ರಭುತ್ವ ಗುಂಪುಗಾರಿಕೆಯಾಗಿ ಅವನತಿ ಹೊಂದಲು ಅವಕಾಶ ನೀಡುವುದಿಲ್ಲ ಎಂಬುದನ್ನು ಹೇಳಬೇಕಾಗಿದೆ. ಪಕ್ಷದ ಕೇಂದ್ರದ ನೇತೃತ್ವದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇರುವ ಪ್ರಜಾಸತ್ತಾತ್ಮಕ ಕೇಂದ್ರವಾದದ ಸಾರ. ಗುಂಪುಗಳನ್ನು ಕಟ್ಟಿಕೊಳ್ಳುವುದು ಈ ತತ್ವಕ್ಕೆ ಅನುಗುಣವಾದದ್ದಲ್ಲ ಎಂದು ಪಕ್ಷದ ಸಂವಿಧಾನ ಸ್ಪಷ್ಟಪಡಿಸಿದೆ.

ದೇಶದಲ್ಲಿ ಬಂಡವಾಳಶಾಹಿ ಪಕ್ಷಗಳೆಲ್ಲಾ ಗುಂಪುಗಾರಿಕೆಗಳಿಂದ ತತ್ತರಿಸುವಂತಹ ವಾತಾವರಣವಿರುವಾಗ ಅಂತಹ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿರುವ ಕಾರ್ಮಿಕ ವರ್ಗದ ಪಕ್ಷಗಳ ಒಳಗೂ ಇದು ನುಸುಳುವ ಸಾಧ್ಯತೆ ಬಹಳವಿರುತ್ತದೆ. ಅದೇ ರೀತಿ ಸಂಸದೀಯ ಸಮಯಸಾಧಕತನ ಕೂಡಾ.

ಆದರೆ ಇದೇನೂ ಬಿಡಿಸಲಾಗದ ಭೂತವೇನಲ್ಲ, ಸತತ ವಿಮರ್ಶೆ ಮತ್ತು ಆತ್ಮ ವಿಮರ್ಶೆಯಿಂದ ಇದು ಸಾಧ್ಯ. ಕಮ್ಯುನಿಸ್ಟ್ ಪಕ್ಷದ ಪ್ರತಿಯೊಬ್ಬ ಸದಸ್ಯರಿಗೆ ತನ್ನ ಘಟಕದೊಳಗೆ-ಬೇರೆಲ್ಲೂ ಅಲ್ಲ-ಯಾವುದೇ ಧೋರಣೆಯನ್ನು ಅಥವಾ ಕೇಂದ್ರ ಸಮಿತಿ, ಪೊಲಿಟ್‌ಬ್ಯೂರೋವರೆಗೆ ಯಾವುದೇ ಮೇಲಣ ಸಮಿತಿಯ, ವ್ಯಕ್ತಿಗಳ ಆಚರಣೆಗಳನ್ನು ವಿಮರ್ಶಿಸುವ ಹಕ್ಕು ಇದೆ. ಯಾವುದೇ ಘಟಕ ಅಥವಾ ವ್ಯಕ್ತಿ ತಪ್ಪು ಮಾಡುತ್ತಿದ್ದರೆ ಯಾವುದೇ ಸ್ಥಾನಮಾನದ ಭೇದ ಭಾವವಿಲ್ಲದೆ ಅವರನ್ನು ಸರಿಪಡಿಸಲು ಇದೊಂದು ವಿಶ್ವಸನೀಯ ಅಸ್ತ್ರ.

ಹೀಗೆ ರಾಜಕೀಯ ಧೋರಣೆಗಳ ಮತ್ತು ಕಾರ್ಯಕ್ರಮದ, ಹಾಗೂ ಅದರ ಆಚರಣೆಯ ವಿಮರ್ಶೆ ಮತ್ತು ಸ್ವಯಂ ವಿಮರ್ಶೆ ಸಿಪಿಐ(ಎಂ)ನ 15ನೇ ಮಹಾಧಿವೇಶನ ಕರೆ ನೀಡಿದ, ಈಗ ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋ ಜಾರಿಗೆ ತರುತ್ತಿರುವ ಸರಿಪಡಿಕೆ ಚಳುವಳಿಯ ಸಾರಾಂಶ.

ದೇಶದೊಳಗೆ



ಒರಿಸ್ಸಾ: ಬರದ ಬವಣೆ-ಸಿಡಿದೆದ್ದ ಜನತೆ

ಒರಿಸ್ಸಾದ ಕೆಲವು ಭಾಗಗಳ ಜನರನ್ನು ಕಿತ್ತು ತಿನ್ನುತ್ತಿರುವ ಬರಗಾಲದ ವಿರುದ್ಧ ರಾಜ್ಯದ ಜನರು ಪ್ರತಿಭಟನೆಯ ಹಾದಿ ಹಿಡಿದಿದ್ದಾರೆ. ಒರಿಸ್ಸಾ ರಾಜ್ಯದಾದ್ಯಂತ ಹಾಗೂ ರಾಷ್ಟ್ರ ರಾಜಧಾನಿ ದೆಹಲಿಯಲ್ಲೂ ಈಚೆಗೆ ಈ ಪ್ರತಿಭಟನೆಯ ದನಿ ಪ್ರತಿಧ್ವನಿಸಿತು.

ಬರಗಾಲದ ಪರಿಸ್ಥಿತಿ ಹಾಗೂ ವಿದ್ಯುತ್ ಶುಲ್ಕದಲ್ಲಿನ ಏರಿಕೆಯನ್ನು ಪ್ರತಿಭಟಿಸಿ ಪ್ರತಿಪಕ್ಷಗಳ ಕರೆಯ ಮೇರೆಗೆ ಏಪ್ರಿಲ್ ಒಂದರಂದು ಒರಿಸ್ಸಾದಲ್ಲಿ 12 ಗಂಟೆಗಳ ಬಂದ್ ನಡೆಯಿತು. ಪ್ರಮುಖ ಪ್ರತಿಪಕ್ಷಗಳಾದ ಜನತಾದಳ, ಸಿಪಿಐ(ಎಂ) ಮತ್ತು ಸಿಪಿಐ ಬಂದ್‌ಗೆ ಕರೆ ಕೊಟ್ಟಿದ್ದವು. ಎಸ್‌ಯುಸಿಐ, ಸಿಪಿಐ(ಎಂಎಲ್) ಕೂಡಾ ಇದಕ್ಕೆ ಬೆಂಬಲ ನೀಡಿದ್ದವು.

ಬರ ನಿಯಂತ್ರಿಸಲು ರಾಜ್ಯದ ಆಳುವ ಕಾಂಗ್ರೆಸ್(ಐ) ಸರಕಾರದ ವೈಫಲ್ಯಕ್ಕೆ ವಿರೋಧವನ್ನು ದಾಖಲಿಸುವುದು ಬಂದ್‌ನ ಮುಖ್ಯ ಉದ್ದೇಶವಾಗಿತ್ತು.

ಬಂದ್ ಬೆಂಬಲಿಸಿ ರಾಜ್ಯದ ನಾನಾ ಕಡೆ ಪ್ರದರ್ಶನಗಳನ್ನು ನಡೆಸಿದ ವಿವಿಧ ಪ್ರತಿಪಕ್ಷಗಳ ಸುಮಾರು 1700 ಕಾರ್ಯಕರ್ತರು ಮತ್ತು ಮುಖಂಡರನ್ನು ಪೋಲೀಸರು ಬಂಧಿಸಿದರು. ಬಂದ್‌ನಿಂದಾಗಿ ರೈಲುಗಳ ಸಂಚಾರ ಅಸ್ತವ್ಯಸ್ತಗೊಂಡಿತು. ಬಂದ್ ಬೆಂಬಲಿಗರು ರೈಲು ಹಳಿಗಳ ಮೇಲೆ ಧರಣಿ ನಡೆಸಿದರು.

ಪಾರ್ಲಿಮೆಂಟ್ ಚಲೋ

ಬಡತನದ ದವಡೆಗೆ ಸಿಲುಕಿರುವ ಒರಿಸ್ಸಾ ರಾಜ್ಯದ ಜನತೆಗೆ ಪರಿಹಾರ ಒದಗಿಸುವಂತೆ ಆಗ್ರಹಪಡಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾವಿರಾರು ಜನರು ನವದೆಹಲಿಯಲ್ಲಿ ಏಪ್ರಿಲ್ ಒಂದರಂದು 'ಸಂಸತ್ ಚಲೋ' ಕಾರ್ಯಕ್ರಮ ನಡೆಸಿದರು.

'ಅಪಾರ ಪ್ರಾಕೃತಿಕ ಸಂಪತ್ತಿನ ಮಧ್ಯೆಯೂ ಬಡತನ ಹಾಗೂ ದಾರಿದ್ರ್ಯದಲ್ಲಿ ತೊಳಲಾಡುತ್ತಿರುವ ಒರಿಸ್ಸಾಕ್ಕೆ ನೆರವಾಗುವಂಥ ಪರ್ಯಾಯ ಯೋಜನೆಯನ್ನು ರೂಪಿಸಬೇಕು ಎಂಬುದು ದೂರದ ರಾಜ್ಯದಿಂದ ಬಂದ ಜನರ ಒಕ್ಕೊರಲ ಬೇಡಿಕೆಯಾಗಿತ್ತು.

ಜನರು ಹಸಿವಿನಿಂದ ಸಾಯುತ್ತಿರುವುದು, ಮಕ್ಕಳನ್ನು ಮಾರಾಟ ಮಾಡುತ್ತಿರುವುದು ಹಾಗೂ ಭಾರೀ ಪ್ರಮಾಣದಲ್ಲಿ ಜನರು ವಲಸೆ ಹೋಗುತ್ತಿರುವುದು ರಾಜ್ಯ ಎದುರಿಸುತ್ತಿರುವ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ ಎಂದು ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದ ಮುಖಂಡರು ಹೇಳಿದರು.

ಜಂತರ್ ಮಂತರ್‌ನಿಂದ ಮೆರವಣಿಗೆ ಹೊರಟ ಜನರನ್ನು ಸಂಸತ್ ರಸ್ತೆಯ ಪೋಲೀಸ್ ಠಾಣೆ ಮುಂದೆ ತಡೆಯಲಾಯಿತು. ಅಲ್ಲೇ ಅದು ಸಾರ್ವಜನಿಕ ಸಭೆಯಾಗಿ ಪರಿವರ್ತನೆಯಾಯಿತು.

ಸಿಪಿಐ(ಎಂ)ನ ಒರಿಸ್ಸಾ ರಾಜ್ಯ ಘಟಕ ಸಂಸತ್ ಚಲೋ ಚಳುವಳಿಯನ್ನು ಸಂಘಟಿಸಿತ್ತು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮತ್ತು ರಾಜ್ಯಸಮಿತಿ ಕಾರ್ಯದರ್ಶಿ ಜನಾರ್ದನಪತಿ ಮಾತನಾಡಿದರು.

ಆನಂತರ ಪಕ್ಷದ ಮುಖಂಡರ ಒಂದು ನಿಯೋಗ ಕೇಂದ್ರ ಯೋಜನಾ ಖಾತೆ ಸಹಾಯಕ ಮಂತ್ರಿ ಯೋಗೇಂದ್ರ ಅಲಘ್ ಅವರನ್ನು ಭೇಟಿ ಮಾಡಿ ವಿವರವಾದ ಮನವಿ ಪತ್ರವೊಂದನ್ನು ಅರ್ಪಿಸಿತು.

'ಸಮೃದ್ಧಿಯ ನಡುವೆ ಬಡತನಕ್ಕೆ' ಒರಿಸ್ಸಾ ಒಂದು ಉತ್ತಮ ಉದಾಹರಣೆಯಾಗಿದೆ ಎಂದು ಮನವಿ ಪತ್ರದಲ್ಲಿ ಪಕ್ಷ ಹೇಳಿದೆ.

ರಾಜ್ಯದಲ್ಲಿ ಅಪಾರ ಪ್ರಾಕೃತಿಕ ಸಂಪನ್ಮೂಲವಿದೆ, ಅನೇಕ ನದಿಗಳಿವೆ, ಉದ್ದದ ಕರಾವಳಿ ಪ್ರದೇಶವಿದೆ ಮತ್ತ ದೇಶದಲ್ಲೇ ಹೆಚ್ಚಿನ ಕಾಡು ಪ್ರದೇಶ ಈ ರಾಜ್ಯದಲ್ಲಿದೆ ಎನ್ನುವದರತ್ತ ಪತ್ರ ಗಮನ ಸೆಳೆದಿದೆ.

ವಿಪರ್ಯಾಸದ ಸ್ಥಿತಿ

ಆದಾಗ್ಯೂ ರಾಜ್ಯದ ಶೇಕಡಾ 77ರಷ್ಟು ಜನರು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದಾರೆ. ಶೇಕಡಾ 50ಕ್ಕೂ ಹೆಚ್ಚಿನ ಜನರು ಅನಕ್ಷರಸ್ಥರು. ಬಹುತೇಕ ಜನರು ಕನಿಷ್ಠ ಆರೋಗ್ಯ ಸೇವೆಗಳಿಂದ ವಂಚಿತರಾಗಿದ್ದಾರೆ.

ರಾಜ್ಯದ ಕೃಷಿಯೋಗ್ಯ ಜಮೀನಿನ ಪೈಕಿ ಶೇಕಡಾ 65ಕ್ಕಿಂತ ಹೆಚ್ಚು ಪ್ರಮಾಣದ ಜಮೀನಿಗೆ ನೀರಾವರಿ ಸೌಲಭ್ಯವಿಲ್ಲ. ಕೈಗಾರಿಕೆ ಅಭಿವೃದ್ಧಿಗೆ ಮೂಲ ಸೌಕರ್ಯಗಳೇ ಇಲ್ಲ ಎಂದು ಮನವಿ ಪತ್ರ ವಿವರಿಸಿದೆ.

ಪಾರಾದೀಪ್, ಗೋಪಾಲಪುರ ಮತ್ತು ಧವ್ರಾ ಸಹಿತ ಹಲವು ಬಂದರುಗಳ ಅಭಿವೃದ್ಧಿ, ವಿದ್ಯುಚ್ಛಕ್ತಿ ಕೇಂದ್ರಗಳ ಸ್ಥಾಪನೆ, ಹೆದ್ದಾರಿ, ರೈಲು ಮಾರ್ಗಗಳ ನಿರ್ಮಾಣ ಮುಂತಾದ ಬೇಡಿಕೆಗಳನ್ನು ಮಂಡಿಸಲಾಗಿದೆ.

ಬಿಹಾರದಲ್ಲಿ ವಿದ್ಯಾರ್ಥಿ ನಾಯಕನ ಹತ್ಯೆ

ಬಿಹಾರದ ಸಿವಾನ್ ಎಂಬಲ್ಲಿ ಮಾರ್ಚ್ 31ರಂದು ವಿದ್ಯಾರ್ಥಿ ಮುಖಂಡ ನೊಬ್ಬನನ್ನು ಜನತಾದಳ ಬೆಂಬಲಿಗರೆನ್ನಲಾದ ಕೆಲವರು ಗುಂಡಿಟ್ಟು ಕೊಂದು ಹಾಕಿದರು. ಸಿಪಿಐ(ಎಂಎಲ್)ಗೆ ಸೇರಿದ ಚಂದ್ರಶೇಖರ್ ಪ್ರಸಾದ್ ಅವರೇ ಗುಂಡೇಟಿಗೆ ಬಲಿಯಾದ ವಿದ್ಯಾರ್ಥಿ ಮುಖಂಡ. ಚಂದ್ರಶೇಖರ ನವದೆಹಲಿಯ ಪ್ರಸಿದ್ಧ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ. ಅವರು ಜೆಎನ್‌ಯುನ ಪಿಎಚ್‌ಡಿ ವಿದ್ಯಾರ್ಥಿ ಆಗಿದ್ದರು.

ಸಿಪಿಐ(ಎಂಎಲ್) ಕಾರ್ಯಕರ್ತರಾದ ಚಂದ್ರಶೇಖರ ಮತ್ತು ಶ್ಯಾಮನಂದನ್ ಯಾದವ್‌ರನ್ನು ಜನತಾದಳ ಸಂಸತ್ ಸದಸ್ಯ ಷಹಾಬುದ್ದೀನ್‌ರ ಬೆಂಬಲಿಗ ಗುಂಡಾಗಳು ಗುಂಡಿಟ್ಟು ಕೊಂದರು. ಚಂದ್ರಶೇಖರ್ ಈ ಎಡ ಸಾಹಸವಾದಿ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಎಐಎಸ್‌ಎನ ಮುಖಂಡರಾಗಿದ್ದರು.

ವ್ಯಾಪಕ ಪ್ರತಿಭಟನೆ

ಚಂದ್ರಶೇಖರ್ ಹತ್ಯೆ ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಜನತಾದಳ ಸರಕಾರದ ಆಡಳಿತದಡಿ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಹದಗೆಡುತ್ತಿರುವುದರ ಸಂಕೇತ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಹತ್ಯೆಗೆ ಬಿಹಾರ ಮಾತ್ರವಲ್ಲದೆ ರಾಜ್ಯದ ರಾಜಧಾನಿಯಲ್ಲೂ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ. ಹತ್ಯೆಗಳನ್ನು ಪ್ರತಿಭಟಿಸಿ ಏಪ್ರಿಲ್1ರಂದು ಸಿಪಿಐ(ಎಂಎಲ್) ಬಿಹಾರದಾದ್ಯಂತ ಕರಾಳ ದಿನವನ್ನು ಆಚರಿಸಿತು.

ಆದಿನ ಪಾಟ್ನಾದಲ್ಲಿ ನಡೆದ ಮೆರವಣಿಗೆಯೊಂದರಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಸಹಿತ ಸಾವಿರಾರು ಜನರು ಪಾಲ್ಗೊಂಡಿದ್ದರು.

ಸ್ವಯಂ ಬಂಧನ

ಚಂದ್ರಶೇಖರ್ ಹತ್ಯೆಯನ್ನು ಪ್ರತಿಭಟಿಸಿ ಜವಾಹರಲಾಲ್‌ನೆಹರೂ ವಿಶ್ವವಿದ್ಯಾಲಯದ ಸುಮಾರು 300 ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ನೌಕರರು ಏಪ್ರಿಲ್ 1ರಂದು ದೆಹಲಿಯಲ್ಲಿ ಬಂಧನಕ್ಕೆ ಒಳಗಾದರು.

ಪ್ರತಿಭಟನಕಾರರು ಲಾಲೂ ಪ್ರಸಾದ್ ಯಾದವ್ ಸರಕಾರ ಮತ್ತು ಬಿಹಾರ ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಘೋಷಣೆಗಳನ್ನು ಕೂಗಿದರು. ಹತ್ಯೆಯನ್ನು ಪ್ರತಿಭಟಿಸಿ ಮಾರ್ಚ್ 31ರ ರಾತ್ರಿ ದೆಹಲಿಯಲ್ಲಿನ ಬಿಹಾರ ಭವನದ ಬಳಿ ಪ್ರದರ್ಶನ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆಗೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುವಂತೆಯೂ ಜೆಎನ್‌ಯು ವಿದ್ಯಾರ್ಥಿ-ಶಿಕ್ಷಕ-ನೌಕರ ಸಮುದಾಯ ಆಗ್ರಹಿಸಿತು.

ಜೆಎನ್‌ಯು ಪ್ರದರ್ಶನಕಾರರು ಕೇಂದ್ರ ಗೃಹ ಸಚಿವರಿಗೆ ಮನವಿ ಪತ್ರವೊಂದನ್ನು ಸಲ್ಲಿಸಿ ಲಾಲೂ ಸರಕಾರವನ್ನು ತಕ್ಷಣ ವಜಾ ಮಾಡುವಂತೆ ಒತ್ತಾಯಿಸಿದರು.

ಪ್ರೊ.ರಜನಿ ಕೊಠಾರಿ, ಪ್ರೊ. ಮನೋರಂಜನ್ ಮೊಹಂತಿ, ಪತ್ರಕರ್ತರಾದ ಸುಮಿತ್‌ಚಕ್ರವರ್ತಿ, ಎಐಡಿಡಬ್ಲ್ಯುಎ ನಾಯಕಿ ಬೃಂದಾಕಾರಟ್, ಸಿಪಿಐ, ಸಿಪಿಐ(ಎಂ) ಪ್ರತಿನಿಧಿಗಳು ದೆಹಲಿ ಮತ್ತು ಜಾಮಿಯಾ ಮಿಲ್ಲಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಅನೇಕ ಸಾಮಾಜಿಕ ಮತ್ತು ಮಾನವ ಹಕ್ಕು ಸಂಘಟನೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು.

ದಾವಣಗೆರೆಯಲ್ಲೊಂದು ಪ್ರಯೋಗ

ಯುವಕ-ಯುವತಿಯರಿಗೆ ತರಬೇತಿ ತರಗತಿಗಳು

ಕೆ.ಮಹಾಂತೇಶ



ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ), ಚಿತ್ರದುರ್ಗ ಜಿಲ್ಲಾ ಸಂಘಟನಾ ಸಮಿತಿ ಹಾಗೂ ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್ಐ) ದಾವಣಗೆರೆ ನಗರ ಸಮಿತಿಗಳು ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಎಸ್‌ಡಿಸಿ-ಎಫ್‌ಡಿಸಿ ಹುದ್ದೆಗಳ ಪರೀಕ್ಷೆಗೆ ಸಂಬಂಧಿಸಿ ಡಿಸೆಂಬರ್ ೧೬ರಿಂದ ಫೆಬ್ರವರಿ ೩ರವರೆಗೆ ಉಚಿತ ತರಗತಿಗಳನ್ನು ಸಂಘಟಿಸಿದ್ದವು. ಈ ಉಚಿತ ತರಗತಿಗಳು ಯುವಕ-ಯುವತಿಯರನ್ನು ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾತ್ರ ತಯಾರು ಮಾಡದೆ ನಿರುದ್ಯೋಗದಂತಹ ಭೂತಾಕಾರದ ಸಮಸ್ಯೆಯ ವಿರುದ್ಧವೂ ಹೋರಾಡುವಂತಹ ಛಲವನ್ನೂ ಮೂಡಿಸಿದವು. ಈ ಕುರಿತು ಒಂದು ವರದಿ.

ಬಹುಶಃ ಆ ದಿನಗಳಲ್ಲಿ ಸಂಜೆಯ ಸಮಯದಲ್ಲಿ ಓಡಾಡುವ ಜನತೆಗೆಲ್ಲಾ ಆಶ್ಚರ್ಯ! ಏನಿದು? ಯಾಕಿಷ್ಟು ಯುವಕ-ಯುವತಿಯರು ಅದೂ ನೂರಾರು ಸಂಖ್ಯೆಯಲ್ಲಿ! ಯಾವುದಾದರೂ ಕಾರ್ಯಕ್ರಮ ವೇ? ಎಂಬ ಪ್ರಶ್ನೆ ಮತ್ತೊಂದು ಕಡೆ. ಯಾರಿವರೆಲ್ಲಾ-ಎಲ್ಲಿಗೆ ಹೋಗುತ್ತಿದ್ದಾರೆ. ಅಥವಾ ಎಲ್ಲಿಂದ ಬರುತ್ತಿದ್ದಾರೆ. ಅದೂ ಈ ಇಳಿಸಂಜೆಯ ಹೊತ್ತಲ್ಲಿ? ಎಂತಹವರಿಗೂ ಕುತೂಹಲ, ಆಶ್ಚರ್ಯ. ಯಾರನ್ನಾದರೂ ತಡೆದು ಒಂದು ಮಾತು ಕೇಳುವ ಬಯಕೆ.. ಅವರಿಗೆ ಆ ಸಮಯಕ್ಕೆ ಆಗಿರಲೇಬೇಕು.

ಈ ದೃಶ್ಯವನ್ನು ದಾವಣಗೆರೆ ಜನತೆ ಸುಮಾರು ಒಂದು ತಿಂಗಳು 20 ದಿನಗಳ ಕಾಲ ಕಣ್ಣಾರೆ ಕಂಡಿದ್ದು ಎಸ್‌ಎಫ್ಐ-ಡಿವೈಎಫ್ಐ ಸಂಘಟನೆಗಳು ಸಂಘಟಿಸಿದ ಎಸ್‌ಡಿಸಿ-ಎಫ್‌ಡಿಸಿ ಪರೀಕ್ಷೆಗಳ 'ಉಚಿತ ತರಗತಿ'ಗಳಿಗೆ ಹಾಜರಾಗುತ್ತಿದ್ದ ಯುವಜನರನ್ನು ನೋಡಿ. ಈಗಾಗಲೇ ತಿಳಿದಿರುವಂತೆ ಎರಡು ಸಾವಿರ ಸಹಾಯಕರ ಹುದ್ದೆ ಗಳಿಗೆ ಕೆಪಿಎಸ್‌ಸಿ ನಡೆಸುವ ಪರೀಕ್ಷೆಗಳಿಗೆ ರಾಜ್ಯಾದ್ಯಂತ ಸುಮಾರು ಏಳು ಲಕ್ಷ ಯುವಜನರು ಅರ್ಜಿ ಸಲ್ಲಿಸಿದ್ದಾರೆ. ಇದರ ಮಹತ್ವವನ್ನು ಮನಗಂಡ ದಾವಣಗೆರೆ ಎಸ್‌ಎಫ್ಐ-ಡಿವೈಎಫ್ಐ ಕಾರ್ಯಕರ್ತರು ಈ ಪರೀಕ್ಷೆಗೆ ಅನುಭವಿ ಶಿಕ್ಷಕರನ್ನು ಆಹ್ವಾನಿಸಿ 'ಉಚಿತ ಬೋಧನ ತರಗತಿ'ಗಳನ್ನು ನಿರ್ಧಾರ ಮಾಡಿ, ಪತ್ರಿಕಾ ಹೇಳಿಕೆ ನೀಡಿ ಹೆಸರು ನೊಂದಾಯಿಸಲು ಪ್ರಕಟಣೆಯಲ್ಲಿ ಕೋರಿದರು.

ಟ್ರಾಫಿಕ್ ಬಂದ್: ತರಗತಿಯ ಆರಂಭ ದಿನದಂದು ಕಾರ್ಯಕರ್ತರು ಸ್ಥಳಕ್ಕೆ ಬಂದಾಗ ಎಂಥಾ ಆಶ್ಚರ್ಯ! ನಾವು ಹೆಸರು ನೊಂದಾವಣೆಗೆ ಸೂಚಿಸಿದ್ದ ಸ್ಥಳದಲ್ಲಿ ಕೇವಲ 40 ರಿಂದ 50 ಜನರ ಹೆಸರು ಮಾತ್ರ ನೊಂದಾಯಿಸಿದ್ದರೆ? ಇಲ್ಲ ನೂರಾರು ಯುವಕ-ಯುವತಿಯರು ಸಂಜೆ 5-30ಕ್ಕೆ ಜಮಾವಣೆಗೊಂಡಿದ್ದರು. ಶಾಲೆಯ ಸಿಬ್ಬಂದಿಗೆಲ್ಲಾ ಆಶ್ಚರ್ಯ. ಏನಿದು ಯಾತಕ್ಕಾಗಿ ಇವರೆಲ್ಲಾ ಸೇರಿದ್ದಾರೆ ಎನ್ನುವುದೇ ತಿಳಿಯಲಿಲ್ಲ. ಅಲ್ಲದೇ ಆ ಶಾಲೆಯ ಬಾಲಕಿಯರ ಸಂಖ್ಯೆಯೇ ಸುಮಾರು 2 ಸಾವಿರ. ಈ ತರಬೇತಿಗಾಗಿ ಬಂದಿದ್ದ ಯುವಜನರೇ ಸುಮಾರು 500ರಷ್ಟಿದ್ದರಿಂದ ಆ ಶಾಲೆಯ ಬಾಲಕಿಯರು ಅದೇ ವೇಳೆಗೆ ಹೊರಬಂದಾಗ ಆ ಶಾಲೆಯ ಮುಂಭಾಗದ ರಸ್ತೆಯಲ್ಲೇ ಎಲ್ಲಾ ಯುವಕ ಯುವತಿಯರು ಹಾಗೂ ಶಾಲೆಯ ಬಾಲಕಿಯರೇ ತುಂಬಿದ್ದರಿಂದ ಸಂಪೂರ್ಣ ವಾಹನ ಸಂಚಾರವೇ ಸ್ಥಗಿತಗೊಂಡು ಕೊನೆಗೆ ಇದನ್ನು ನಿಯಂತ್ರಿಸಲು ಪೋಲೀಸರೇ ಬರಬೇಕಾಯಿತು.

ಸಂಘಟಕರ ನಿರೀಕ್ಷೆಗೂ ಮೀರಿ ಅಭ್ಯರ್ಥಿಗಳು ಬಂದಿದ್ದರಿಂದ ಅದನ್ನು ನಿಯಂತ್ರಿಸಲು ನಮಗೆ ಕಷ್ಟವಾಯಿತು. ಜೊತೆಗೆ ಸ್ಥಳಾವಕಾಶದ ಸಮಸ್ಯೆಯೂ ಎದುರಾಯಿತು. ಆದರೂ ಪ್ರಯತ್ನಿಸಿ ಕೊನೆಗೂ ನಮ್ಮ ನೊಂದಾವಣೆಯನ್ನು ಸ್ಥಳಾವಕಾಶದಿಂದ 450ಕ್ಕೆ ಮಾತ್ರ ಸೀಮಿತಗೊಳಿಸಿ ಉಳಿದವರನ್ನು ವಾಪಸ್ ಕಳಿಸತೊಡಗಿದೆವು. ಹೆಸರು ನೊಂದಾಯಿಸಿಕೊಂಡು ಬ್ಯಾಡ್ಜ್ ವಿತರಣೆ ಮಾಡುವಾಗ ಉಂಟಾಗುತ್ತಿದ್ದ ನೂಕುನುಗ್ಗಲನ್ನು ನಿಯಂತ್ರಣ ಮಾಡುವುದೇ ಕಷ್ಟವಾಗಿತ್ತು. ಆದರೂ ಒಂದೂವರೆ ತಿಂಗಳ ಈ ಶಿಬಿರಕ್ಕೆ ಯಾರೆಷ್ಟು ಹೇಳಿದರೂ ಕೇಳದೆ ನಿರಂತರ ಹೊಸ ಸೇರ್ಪಡೆಗಳು ಆಗುತ್ತಲೇ ಇದ್ದವು.

ಟ್ಯುಟೋರಿಯಲ್‌ಗಳೆಲ್ಲ ಬಂದ್

ಎಸ್‌ಡಿಸಿ-ಎಫ್‌ಡಿಸಿ ಪರೀಕ್ಷೆಗಳಿಗೆ ಕೆಪಿಎಸ್‌ಸಿ ಅರ್ಜಿಗಳನ್ನು ಕರೆದ ಬೆನ್ನ ಹಿಂದೆಯೇ 'ಅನುಭವೀ ಶಿಕ್ಷಕರಿಂದ ತರಬೇತಿ ನೀಡಲಾಗುತ್ತದೆ' 'ಕೇವಲ ಕೆಲವೇ ಪ್ರವೇಶಗಳಿವೆ' ಎಂಬಿತ್ಯಾದಿ ಜಾಹೀರಾತುಗಳನ್ನು ಪತ್ರಿಕೆ, ಕರಪತ್ರಗಳ ಮೂಲಕ ನೀಡಿ ನಿರುದ್ಯೋಗಿಗಳಿಂದ ಐದನೂರರಿಂದ ಸಾವಿರಾರು ರೂಪಾಯಿಗಳನ್ನು ವಸೂಲು ಮಾಡಲು ಪ್ರಾರಂಭಿಸಿದ್ದ ಹಾಗೂ ಇನ್ನೂ ಪ್ರಾರಂಭಿಸಲು ಹವಣಿಸುತ್ತಿದ್ದ ಎಲ್ಲಾ ಖಾಸಗೀ ಟ್ಯೂಷನ್ ಅಂಗಡಿಗಳು ನಮ್ಮ ಉಚಿತ ತರಗತಿಗಳ ಆರಂಭದಿಂದಾಗಿ ನೆಲ ಕಚ್ಚಿದವು. ಈ ಅಂಶವನ್ನು ಸ್ವತಃ ಶಿಬಿರಾರ್ಥಿಗಳೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಅಲ್ಲದೇ ಎಷ್ಟೇ ಹಣ ನೀಡಿದರೂ ಎಸ್‌ಎಫ್ಐ-ಡಿವೈಎಫ್ಐನವರು ನಡೆಸುವ ರೀತಿಯ ತರಗತಿಗಳನ್ನು ಯಾರೂ ನಡೆಸಲು ಸಾಧ್ಯವಿಲ್ಲ ಎನ್ನುತ್ತಿದ್ದರು. ನಮ್ಮ ತರಗತಿಗಳಿಗೆ ಶಿಕ್ಷಕರಾಗಿ ಬರುತ್ತಿದ್ದ ಉಪನ್ಯಾಸಕರ ತರಬೇತಿ ವಿಧಾನ ಹೇಗಿತ್ತೆಂದರೆ ತರಗತಿಗಳಲ್ಲಿ ಶಿಬಿರಾರ್ಥಿಗಳು ಗಂಟೆಗಟ್ಟಲೆ ಗೋಡೆ ಗೊರಗಿ, ಹೊರಗಿನ ಕಿಟಕಿಗಳಲ್ಲಿ ನಿಂತು, ಬಾಗಿಲ ಪಕ್ಕದಲ್ಲಿ ನಿಂತು ಅತ್ಯಂತ ಉತ್ಸಾಹದಿಂದ ಪಾಠವನ್ನು ಕೇಳುತ್ತಿದ್ದರು. ಈ ತರಗತಿಗಳ ಪ್ರಭಾವ ಎಷ್ಟಿತ್ತೆಂದರೆ ದಿನಪೂರ್ತಿ ಕಷ್ಟಪಟ್ಟು ದುಡಿವ ಕಷ್ಟಜೀವಿ ಯುವಜನತೆ ಕೂಡಾ ಆ ವೇಳೆಗೆ ಟೈಂ ಅಡ್ಜಸ್ಟ್ ಮಾಡಿ ಕೊಂಡು ಬರುತ್ತಿದ್ದರು. ಅಷ್ಟೇ ಅಲ್ಲ ಕೆಲವು ಆಟೋ ಚಾಲಕರೂ ಕೂಡ ತರಗತಿ ನಡೆಯುವ ಸಮಯಕ್ಕೆ 'ಆಟೋ ಸಮೇತ ಬಂದು ಬಾಡಿಗೆ ಮಾಡುವುದಕ್ಕೆ ವಿದಾಯ ನೀಡಿ ಹೊರಗಡೆ ನಿಂತು ಶಿಕ್ಷಕರು ನೀಡುವ ನೋಟ್ಸ್‌ಗಳನ್ನು ಬರೆದುಕೊಳ್ಳುತ್ತಿದ್ದರು.

ಅತ್ಯುತ್ತಮ ತರಬೇತಿ: ಸ್ಥಳಾವಕಾಶದ ಕೊರತೆ ಇದ್ದರೂ ನೂರಾರು ಸಂಖ್ಯೆಯ ಶಿಬಿರಾರ್ಥಿಗಳಿಗೆ ಸ್ಥಳಾವಕಾಶ ಮಾಡಲಾಯಿತು. ಪ್ರತಿನಿತ್ಯ ಮೂರು ತರಗತಿಗಳು, ಸಂಜೆ 5 ರಿಂದ 9 ಘಂಟೆಯವರೆಗೂ ನಡೆಯುತ್ತಿದ್ದವು. ಈ ತರಗತಿಗಳಲ್ಲಿ 'ಸಾಮಾನ್ಯ ಕನ್ನಡ' ಹಾಗೂ 'ಸಾಮಾನ್ಯ ಜ್ಞಾನ'ಕ್ಕೆ ಸಂಬಂಧಿಸಿದ ಪಾಠಗಳು ನಡೆಯುತ್ತಿದ್ದವು. ಅನುಭವೀ ಉಪನ್ಯಾಸಕರು ನಮಗೆ ದೊರೆತಿದ್ದರಿಂದಲೂ ಮತ್ತು ಅವರು ಹೊಂದಿದ್ದ ಆಳವಾದ ಜ್ಞಾನದಿಂದಾಗಿ ಯುವಕ-ಯುವತಿಯರು ಅತ್ಯುತ್ಸಾಹದಿಂದ ತರಗತಿಗಳಿಗೆ ಹಾಜರಾಗುತ್ತಿದ್ದರು. 'ಸಾಮಾನ್ಯ ಕನ್ನಡ'ದ ಉಪನ್ಯಾಸಕರಾಗಿ ಸಿ.ಎಂ.ಮಹದೇವ ರಾವ್, ಶ್ರೀಮತಿ ಸೌಭಾಗ್ಯ, ಸಾಮಾನ್ಯ ಜ್ಞಾನದ ಉಪನ್ಯಾಸಕರಾಗಿ ಆದುಂಡಿ ರವಿ, ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ಮುಂತಾದವರು ತರಬೇತಿ ನೀಡಿದರು. ಇದೂವರೆಗೂ ಕೇವಲ ಬೆಂಗಳೂರಿನಂತಹ ಮಹಾನಗರಗಳಲ್ಲಿ ಕೆಲವೇ ಸೀಮಿತ ಜನರಿಗೆ ಮಾತ್ರ ದೊರಕುತ್ತಿದ್ದ ಈ ರೀತಿಯ ಉಚಿತ ತರಬೇತಿ ಶಿಬಿರಗಳು ಮತ್ತು ಅದರಲ್ಲಿ ಬೆರಳೆಣಿಕೆಯ ಪ್ರತಿಭೆಗಳು ಮಾತ್ರ ಇಂತಹ ಅವಕಾಶವನ್ನು ಬಳಸಿಕೊಳ್ಳುವ ಪರಿಪಾಠ ಇತ್ತು. ಬಹುಶಃ ಇಂತಹ ತರಗತಿಗಳು ಎಲ್ಲ ಕಡೆ ನಡೆದಲ್ಲಿ ಮತ್ತು ಇಂತಹುದೇ ಉಪಯುಕ್ತ ಮಾಹಿತಿಗಳು ದೊರೆತಲ್ಲಿ- ಗ್ರಾಮೀಣ ಪ್ರದೇಶದ ಯುವಜನತೆ ಕೂಡ ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಂಡು ಸ್ಪರ್ಧೆ ನಡೆಸಬಹುದೆಂಬ ಭಾವನೆ ತರಬೇತಿ ಪಡೆದ ಯುವಜನರಲ್ಲಿತ್ತು.

ಪೂರ್ವಭಾವಿ ಪರೀಕ್ಷೆ: ತರಗತಿಗಳು ಮುಕ್ತಾಯದ ಹಂತವನ್ನು ಸಮೀಪಿಸುತ್ತಿದ್ದಂತೆಯೇ ಸಹಜವಾಗಿ ಶಿಬಿರಾರ್ಥಿಗಳಲ್ಲಿ ಈ ಪರೀಕ್ಷೆಗಳು ಯಾವಾಗ ನಡೆಯುವವು? ಎಂಬ ಪ್ರಶ್ನೆಗಳು ಕಾಡತೊಡಗಿದವು. ಅಲ್ಲದೆ, ತಕ್ಷಣ ಪರೀಕ್ಷೆಗಳು ನಡೆಯದಿದ್ದರೆ ನಾವಿಲ್ಲಿ ತಿಳಿದುಕೊಂಡಿರುವ ಜ್ಞಾನವೂ ವ್ಯರ್ಥವಾಗುವುದೆಂಬ ಅಳುಕು ಅಭ್ಯರ್ಥಿಗಳಲ್ಲಿತ್ತು. ಆದ್ದರಿಂದಲೇ ಕೆಪಿಎಸ್‌ಸಿ ಯಾವಾಗ ಪರೀಕ್ಷೆ

ಪುಟ 7ಕ್ಕೆ

ಸ್ವಂತ ಸಮಸ್ಯೆಯಿಂದ ಸಂಘಟನೆಯತ್ತ

೨೦೦ ಹುದ್ದೆಗಳಿಗೆ ೭ ಲಕ್ಷ ಅರ್ಜಿಗಳು. ಸಹಜವಾಗಿಯೇ ಪ್ರಜ್ಞಾಶೀಲ ಮನಸ್ಸು ಗಳನ್ನು ಕೆರಳಿಸುವ ಪ್ರಶ್ನೆಯೇ. ಪ್ರತಿನಿತ್ಯ ನೂರಾರು ಯುವಜನರು ಉಚಿತ ತರಗತಿ ಗಳನ್ನು ಸಂಘಟಿಸುತ್ತಿದ್ದ ಎಸ್‌ಎಫ್ಐ - ಡಿವೈಎಫ್ಐ ಕಾರ್ಯಕರ್ತರ ಸಂಪರ್ಕಕ್ಕೆ ಬರುತ್ತಿದ್ದರಿಂದ ಸಹಜವಾಗಿಯೇ ಈ ಪ್ರಶ್ನೆಯ ಬಗ್ಗೆಯೂ ಚರ್ಚೆಯಾಗುತ್ತಿತ್ತು. ಉಚಿತ ತರಗತಿಗಳು ತಾತ್ಕಾಲಿಕ ಪರಿಹಾರವೂ ಅಲ್ಲ ಎಂಬುದೂ ಹಲವರ ಅರಿವಿಗೂ ಬಂದಿರಬಹುದು. ಜೊತೆಗೆ ಸಾಮಾಜಿಕ ಕಳಕಳಿ, ಹೋರಾಟದ ಮನೋಭಾವ ಎಸ್‌ಎಫ್ಐ, ಡಿವೈಎಫ್ಐ ಸಂಘಟನೆಗಳ ಗುರಿ, ಧ್ಯೇಯ ಇತ್ಯಾದಿ ಗಳ ಬಗ್ಗೆಯೂ ಚರ್ಚೆ ನಡೆಯಲಾರಂಭಿಸಿತು. ಕೊನೆಗೆ ಈ ಬಗ್ಗೆಯೇ ಎರಡು ದಿನಗಳ ಕಾರ್ಯಕ್ರಮವೂ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾವಗೀತೆ, ಚರ್ಚಾ ಗೀತೆ, ಚರ್ಚಾಸ್ಪರ್ಧೆ, ಆಶುಭಾಷಣ ಸ್ಪರ್ಧೆ ಇತ್ಯಾದಿಗಳೂ ನಡೆದವು. ಕೊನೆಗೆ ತರಗತಿಗೆ ಹಾಜರಾಗುತ್ತಿದ್ದ ಯುವಕ-ಯುವತಿಯರ ಎರಡು ಪ್ರತ್ಯೇಕ ಡಿವೈಎಫ್ಐ ಸಮಿತಿಗಳು ರಚನೆಗೊಂಡವು.

ಎಂ.ಡಿ.ಸುನಂದಾ ಯುವತಿಯ ವಿಭಾಗದ ಅಧ್ಯಕ್ಷರಾಗಿ, ವಿ.ಶಾರದ ಕಾರ್ಯದರ್ಶಿಯಾಗಿ ಆಯ್ಕೆಯಾದರೆ, ಎನ್.ಶಿವಶಂಕರ್ ಯುವಕರ ಸಮಿತಿಯ ಅಧ್ಯಕ್ಷರಾಗಿ ಹಾಗೂ ಜಗದೀಶ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಯುವತಿಯರ ಸಮಿತಿಯಲ್ಲಿ ಒಟ್ಟು ೮ ಪದಾಧಿಕಾರಿಗಳು ಹಾಗೂ ೭ ಕಾರ್ಯಕಾರಿ ಸಮಿತಿ ಸದಸ್ಯರು, ಯುವಕರ ಸಮಿತಿಯಲ್ಲಿ ೯ ಪದಾಧಿಕಾರಿಗಳು ಹಾಗೂ ೭ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಗೊಂಡರು.

ಉತ್ಥಾನ [masthead]

ಪಾಕಿಸ್ತಾನದ ಅಧ್ಯಕ್ಷರ ಅಧಿಕಾರ ಮೊಟಕು ಮಾಡುವ ಸಂವಿಧಾನ ತಿದ್ದುಪಡಿ

ಪಾಕಿಸ್ತಾನದ ಇನ್ನೂ ಬೇರು ಬಿಡದ ಎಳೆಯ ಪ್ರಜಾಪ್ರಭುತ್ವಕ್ಕೆ ಕಂಟಕಕಾರಿಯಾಗಿದ್ದ, ಅಧ್ಯಕ್ಷರಿಗೆ ವಿಪರೀತ ಅಧಿಕಾರ ನೀಡಿದ್ದ ಕುಖ್ಯಾತ ಎಂಟನೇ ತಿದ್ದುಪಡಿಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಮೂಲಕ ಆರೋಗ್ಯಕರ ಬೆಳವಣಿಗೆಯಾಗಿದೆ. ಆ ದೇಶದ ಹೊಸ ಸರಕಾರ ನವಾಜ್ ಷರೀಫ್‌ರ ನಾಯಕತ್ವದಲ್ಲಿ ಈ ಬಗ್ಗೆ 'ರಾಷ್ಟ್ರೀಯ ಸಹಮತಿ' ಪಡೆಯಲು ಸಾಧ್ಯವಾಗಿದೆ. ಸರಕಾರದ ಈ ತಿದ್ದುಪಡಿಗೆ ಪ್ರಮುಖ ವಿರೋಧ ಪಕ್ಷ ಬೆನಜಿರ್ ಭುಟ್ಟೋರ ನಾಯಕತ್ವದ ಪಿಪಿಪಿ ಸೇರಿದಂತೆ ಎಲ್ಲಾ ಪಕ್ಷಗಳ ಬೆಂಬಲ ಸಿಕ್ಕಿತ್ತು. ನವಾಜ್ ಷರೀಫ್ ಅಧ್ಯಕ್ಷ ಲೆಗಾರಿಯವರನ್ನು ಈ ಬಗ್ಗೆ ಭೇಟಿ ಮಾಡಿ ಅವರ ಜತೆಯೂ ಈ ಬಗ್ಗೆ ಚರ್ಚಿಸಿ ಬೆಂಬಲ ಪಡೆದಿದ್ದರು ಎನ್ನಲಾಗಿದೆ.

1985ರಲ್ಲಿ ಜನರಲ್ ಜಿಯಾ ಉಲ್ ಹಕ್ ಅಧ್ಯಕ್ಷರಾಗಿದ್ದಾಗ ಜಾರಿಗೆ ಬಂದ ಈಗಿನ ಸಂವಿಧಾನದಲ್ಲಿರುವ ಎಂಟನೇ ತಿದ್ದುಪಡಿ ಪ್ರಕಾರ, ಪ್ರಧಾನಮಂತ್ರಿ ಪಾರ್ಲಿಮೆಂಟು, ರಾಜ್ಯದ ಮುಖ್ಯಮಂತ್ರಿ, ವಿಧಾನಸಭೆಗಳನ್ನು ಬರ್ಖಾಸ್ತು ಮಾಡುವ ವ್ಯಾಪಕ ಅಧಿಕಾರ ಅಧ್ಯಕ್ಷರಿಗಿದೆ. ಅಲ್ಲದೆ ರಾಜ್ಯದ ಗವರ್ನರುಗಳು, ದೇಶದ ಸೈನ್ಯದ ಮಹಾದಂಡನಾಯಕರುಗಳನ್ನು ನೇಮಿಸುವ ಅಧಿಕಾರವೂ ಅಧ್ಯಕ್ಷರದ್ದು. ಈ ಎಲ್ಲದರಲ್ಲಿ ದೇಶದ ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲಕ್ಕಾಗಲಿ, ಪಾರ್ಲಿಮೆಂಟಿಗಾಗಲಿ ಯಾವ ಹಕ್ಕೂ ಇಲ್ಲ.

ಈ ಸಂವಿಧಾನದ ಕ್ರಮದ ಪದೇ ಪದೇ ದುರ್ಬಳಕೆಯಾಗಿದೆ. 1985ರಿಂದ ಈಚೆಗೆ ಅಧ್ಯಕ್ಷರು ಈ ಕ್ರಮ ಬಳಸಿ ನಾಲ್ಕುಬಾರಿ ಚುನಾಯಿತ ಸರಕಾರಗಳನ್ನು ಅದರ ಅವಧಿ ಮುಗಿಯುವ ಮೊದಲೇ ಬರ್ಖಾಸ್ತು ಮಾಡಿದ್ದಾರೆ. ಪ್ರಧಾನಿಗಳಾದ ಜುನೇಜೋ, ಬೆನಜಿರ್ ಭುಟ್ಟೋರವರನ್ನು ಎರಡು ಬಾರಿ ಈಗಿನ ಪ್ರಧಾನಂತ್ರಿ ನವಾಜ್ ಶರೀಫ್ ಸರಕಾರವನ್ನು ಈ ಹಿಂದೆ ಆಗಿನ ಅಧ್ಯಕ್ಷರುಗಳು ಬರ್ಖಾಸ್ತು ಮಾಡಿದ್ದರು. ಈ ಕ್ರಮದ ದುರ್ಬಳಕೆ ಪಾಕಿಸ್ತಾನದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಬೇರು ಬಿಡಲು ದೊಡ್ಡ ಕಂಟಕವಾಗಿತ್ತು. ಇದರಿಂದಾಗಿ ಪಾಕಿಸ್ತಾನವನ್ನು ಆಳುವ 'ತ್ರಿವಳಿ'-ಅಧ್ಯಕ್ಷರು, ಸೈನ್ಯದ ಮಹಾದಂಡನಾಯಕರು ಹಾಗೂ ಸರಕಾರಗಳಲ್ಲಿ ಇಬ್ಬರು ಸೇರಿದರೆ ಮೂರನೇ ಭಾಗವನ್ನು ಆಳದಂತೆ ಮಾಡಬಹುದಾಗಿತ್ತು. ಸಾಮಾನ್ಯವಾಗಿ ಅಧ್ಯಕ್ಷರು ಹಾಗೂ ಸೇನಾ ಜನರಲ್‌ಗಳು ಜನರ ಆಯ್ಕೆಯ ಸರಕಾರವನ್ನು ಆಳದಂತೆ ಮಾಡುತ್ತಿದ್ದರು. ಈ ಬದಲಾವಣೆಯ ಮೂಲಕ ಸೈನ್ಯ ಸಹಾ ಜನಪ್ರಿಯ ಸರಕಾರದ ನಿಯಂತ್ರಣಕ್ಕೆ ಬರುವಂತಾಗಿತ್ತು. ಸೇನಾ ಜನರಲ್‌ಗಳ ನೇಮಕ, ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳ ನೇಮಕ/ವಿಸರ್ಜನೆ, ಗವರ್ನರುಗಳ ನೇಮಕ ಹೀಗೆ ಎಲ್ಲದರಲ್ಲೂ ಅಧ್ಯಕ್ಷರು ಪ್ರಧಾನಮಂತ್ರಿಯ ಸಲಹೆಯಂತೆ ನಡೆಯಬೇಕು ಎಂದಾಗಿದೆ.

ಲೋಕಸಂಚಾರ



ಶರತ್‌ಚಂದ್ರ

ಶ್ರೀಲಂಕಾದಲ್ಲಿ ಹೊಸ ಶಾಂತಿ ಮಾತುಕತೆಗಳು?

ಶ್ರೀಲಂಕಾದ ಆಳುವ ಪೀಪಲ್ಸ್ ಅಲಿಯೆನ್ಸ್(ಜನತಾ ಒಕ್ಕೂಟ) ಹಾಗೂ ವಿರೋಧ ಪಕ್ಷ ಯುಎನ್‌ಪಿ ನಡುವೆ ಜನಾಂಗೀಯ ಸಮಸ್ಯೆಗೆ ಪರಿಹಾರ ಹುಡುಕಲು ಜಂಟಿಯಾಗಿ ಪ್ರಯತ್ನಿಸುವ ಬಗ್ಗೆ ಒಪ್ಪಂದವಾಗಿದೆ. ಈ ಒಪ್ಪಂದದ ಪ್ರಕಾರ ಮುಂದೆ ಜಂಟಿ ಪ್ರಯತ್ನದಿಂದ ಆಗಬಹುದಾದ ಒಪ್ಪಂದವನ್ನು ಎರಡೂ ಪಕ್ಷಗಳು ಮನ್ನಿಸುವುದು. ಈ ಒಪ್ಪಂದಕ್ಕೆ ಬರಲು, ಬ್ರಿಟಿಶ್ ವಿದೇಶಾಂಗ ಖಾತೆಯ ದಕ್ಷಿಣ ಏಶ್ಯಾದ ಸಹಾಯಕ ಕಾರ್ಯದರ್ಶಿ ಮಧ್ಯಸ್ಥಿಕೆ ವಹಿಸಿದ್ದರು ಎನ್ನಲಾಗಿದೆ.

ಇದರರ್ಥ ತತ್‌ಕ್ಷಣ ಮಾತುಕತೆಗಳು ಆರಂಭವಾಗುವುದು ಎಂದಲ್ಲ, ಆದರೆ ಹೊಸ ಶಾಂತಿ ಮಾತುಕತೆಗಳಿಗೆ, ಜನಾಂಗೀಯ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಆರಂಭವಾಗುವುದು ಎಂಬ ಆಶಾಭಾವನೆಗೆ ಎಡೆಕೊಟ್ಟಿದೆ. ಈವರೆಗೆ ಆಳುವ ವಿರೋಧ ಪಕ್ಷಗಳ ನಡುವೆ ರಾಜಕೀಯ ಮೇಲಾಟ ಜನಾಂಗೀಯ ಸಮಸ್ಯೆ ಪರಿಹಾರದ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಆ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿತ್ತು. ಆದರೆ ಜನಾಂಗೀಯ ಸಮಸ್ಯೆ ಪರಿಹಾರ ಮಾಡಲು ಎಂದರೆ ಎಲ್‌ಟಿಟಿಇ ಜತೆ ಶಾಂತಿ ಮಾತುಕತೆ ಆರಂಭಿಸುವುದಲ್ಲ ಎಂದು ಸರಕಾರ ಸ್ಪಷ್ಟಪಡಿಸಿದೆ. ಅಲ್ಲದೆ ಸರಕಾರದ ಈಗಿನ ನೀತಿಯುತ ಮೂರು ಷರತ್ತುಗಳಲ್ಲಿ ಸಡಿಲಿಕೆ ಇಲ್ಲ ಎಂದಿದೆ.

ಆದರೂ ಶಾಂತಿ ಮಾತುಕತೆ ಆರಂಭವಾಗುವುದು, ಜನಾಂಗೀಯ ಸಮಸ್ಯೆ ಪರಿಹಾರದ ಬಗ್ಗೆ ಪ್ರಮಾಣಿಕ ಪ್ರಯತ್ನ ನಡೆಯುವುದು ಎಂಬ ಬಗ್ಗೆ ಆಶಾಭಾವನೆ ಮೂಡಿದೆ. ಎಲ್‌ಟಿಟಿಇ ಹಲವು ತಿಂಗಳ ಭೀಷಣ ಹೋರಾಟದ ನಂತರ, ಮಾತುಕತೆಯ 'ಮೂಡ್'ನಲ್ಲಿದೆ. ಕೆಲವು ಮಿಲಿಟರಿ ಸೋಲುಗಳು, ಇಳಿಯುತ್ತಿರುವ ಬೆಂಬಲ ಹಾಗೂ ಅಂತರ್‌ರಾಷ್ಟ್ರೀಯ ಏಕಾಕಿತನ ಎಲ್‌ಟಿಟಿಇಯ ನಾಯಕ ಪ್ರಭಾಕರನ್‌ರನ್ನು ಮಾತುಕತೆಯ ದಾರಿಯತ್ತ ತೆಗೆದುಕೊಂಡು ಹೋಗಿದೆ. ಆದರೆ ಇದು ಎಷ್ಟರಮಟ್ಟಿಗೆ ಫಲವಾಗುತ್ತದೆ ಎಂದು ಕಾದು ನೋಡಬೇಕಾಗಿದೆ.

ಇಸ್ರೇಲಿ ಹಠಮಾರಿತನಕ್ಕೆ ಅರಬ್ ಲೀಗ್ ತೀವ್ರ ಪ್ರತಿಕ್ರಿಯೆ

ಪ್ಯಾಲೆಸ್ತೇನ್ ಪ್ರದೇಶಗಳಲ್ಲಿ ಜ್ಯೂ ಕಾಲೋನಿಗಳನ್ನು ಕಟ್ಟುವ ಇಸ್ರೇಲಿ ಆಕ್ರಮಣಕಾರಿ ನೀತಿಗೆ ಅರಬ್ ಲೀಗ್ ತೀವ್ರವಾಗಿ ಪ್ರತಿಕ್ರಿಯಿಸಿದೆ. ಅನೈಕ್ಯತೆಗೆ, ನಿಷ್ಕ್ರಿಯತೆಗೆ ಕುಖ್ಯಾತವಾದ ಅರಬ್ ಲೀಗ್ ಕೊನೆಗೂ ಸ್ಪಷ್ಟ ನಿರ್ಣಾಯಕ ಕ್ರಮಗಳನ್ನು ಕೈಗೊಂಡಿದೆ. ಇತ್ತೀಚೆಗೆ ನಡೆದ ಅರಬ್ ಲೀಗ್‌ನ ವಿದೇಶ ಮಂತ್ರಿಗಳ ಸಭೆಯಲ್ಲಿ ನಾಲ್ಕು ಅಂಶಗಳ ಗಡುಸಾದ ನಿರ್ಣಯ, ಇಸ್ರೇಲಿ ಸರಕಾರ ಅರಬ್ ಸರಕಾರಗಳ ಹಾಗೂ ಜನತೆಯ ಕೋಪದ ಬಗ್ಗೆ ತಪ್ಪು ಅಂದಾಜು ಮಾಡಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಅರಬ್ ಲೀಗ್‌ನ ನಿರ್ಣಯದ ಮೊದಲ ಅಂಶದ ಪ್ರಕಾರ ಎಲ್ಲಾ ಅರಬ್ ದೇಶಗಳು ಇಸ್ರೇಲ್ ಜತೆ 'ಸಂಬಂಧ ಸಾಮಾನ್ಯೀಕರಿಸುವ' ಪ್ರಕ್ರಿಯೆಯನ್ನು ತತ್‌ಕ್ಷಣ ನಿಲ್ಲಿಸಬೇಕು.

ಎರಡನೆಯ ಅಂಶದ ಪ್ರಕಾರ ಎಲ್ಲಾ ದೇಶಗಳು ಇಸ್ರೇಲಿನಲ್ಲಿ ರಾಯಭಾರ ಕಚೇರಿಗಳನ್ನು ಮುಚ್ಚಬೇಕು, ಅರಬ್ ದೇಶಗಳಲ್ಲಿ ಇಸ್ರೇಲಿ ರಾಯಭಾರ ಕಚೇರಿಯನ್ನು ಮುಚ್ಚಬೇಕು.

ಮೂರನೆಯ ಅಂಶದ ಪ್ರಕಾರ ಇಸ್ರೇಲಿನ ಮೇಲೆ ಆರ್ಥಿಕ ದಿಗ್ಬಂಧನ ಹೇರಬೇಕು.

ನಾಲ್ಕನೆಯ ಅಂಶದ ಪ್ರಕಾರ ಇಸ್ರೇಲ್ ಜತೆ ನೀರು ಹಂಚಿಕೆ, ನಿರಾಶ್ರಿತರು ಮತ್ತು ಪರಿಸರ ವಿಷಯಗಳಲ್ಲಿ ಬಹುಪಕ್ಷೀಯ ಮಾತುಕತೆಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಬೇಕು.

ಈ ಎಲ್ಲಾ ನಿರ್ಣಯಗಳನ್ನು ಎಷ್ಟರ ಮಟ್ಟಿಗೆ ಸದಸ್ಯ ದೇಶಗಳು ಪಾಲಿಸುತ್ತವೆ ಎಂದು ಕಾದು ನೋಡಬೇಕು. ಆದರೆ ಈ ಬಾರಿ ಅರಬ್ ಸರಕಾರ ಅರಬ್ ಜನತೆಯಲ್ಲಿ ಇಸ್ರೇಲ್ ಹಠಮಾರಿತನವು ಆಕ್ರಾಮಕ ಹಾಗೂ ಅರಬರನ್ನು ಅವಮಾನಿಸುವ ಬಗ್ಗೆ ಇರುವ ತೀವ್ರ ಆಕ್ರೋಶಕ್ಕೆ ಹೆದರಿಯಾದರೂ ಈ ನಿರ್ಣಯಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತವೆ.

ಈ ನಿರ್ಣಯಗಳು ನೇರವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಪರಿಣಾಮ ಬೀರದೆ ಇರಬಹುದು. ಆದರೆ ಅರಬ್-ಇಸ್ರೇಲಿನ ನಡುವೆ ಶಾಂತಿ, ಸಂಬಂಧ ಸಾಮಾನ್ಯೀಕರಣ ಪ್ರಕ್ರಿಯೆ ಆರಂಭವಾಗಿದೆ ಎಂಬ ಭರವಸೆಯಲ್ಲಿ, ಇಸ್ರೇಲ್ ಜತೆ ತೀವ್ರ ವಾಣಿಜ್ಯ, ರಾಯಭಾರ ಸಂಬಂಧ ಆರಂಭಿಸುವ ಭಾರತ, ಚೀನಾ ಮುಂತಾದ ಮೂರನೆಯ ಜಗತ್ತಿನ ದೇಶಗಳು, ಈ ಅರಬ್ ಪ್ರತಿಕ್ರಿಯೆಯನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಹೀಗೆ ಪರೋಕ್ಷವಾಗಿಯಾದರೂ ತೀವ್ರ ಆರ್ಥಿಕ, ರಾಜಕೀಯ ಪರಿಣಾಮ ಆಗಬಹುದು. ಇಸ್ರೇಲ್ ಈ ನಿರ್ಧಾರದಿಂದಾಗಿ, ಹಿಂದಿನಂತೆ ಪುನಃ ಅಂತರ್‌ರಾಷ್ಟ್ರೀಯ ಏಕಾಕಿಯಾಗಿದೆ.

ರಶ್ಯಾ-ಬೆಲಾರಸ್ ಒಪ್ಪಂದ

ರಶ್ಯ ಮತ್ತು ಬೆಲಾರಸ್‌ಗಳು, ಒಂದೇ ದೇಶವಾಗಿ ಐಕ್ಯಗೊಳಿಸದಿದ್ದರೂ, ಹಲವಾರು ವಿಷಯಗಳಲ್ಲಿ ಹೆಚ್ಚು ಕಡಿಮೆ ಒಂದೇ ಒಕ್ಕೂಟದಂತೆ ಆಗುವ ಈ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಹತ್ತು ಅಂಶಗಳ ಈ ಒಪ್ಪಂದದ ಪ್ರಕಾರ ಅತ್ಯುನ್ನತ ಹಂತದಲ್ಲಿ ಒಂದು ಸುಪ್ರೀಂ ಕೌನ್ಸಿಲ್ ಸ್ಥಾಪಿಸಿ, ಎರಡು ದೇಶಗಳ ನೀತಿಗಳನ್ನು ಸಮನ್ವಯಗೊಳಿಸಲು ಉದ್ದೇಶಿಸಿವೆ. ಎರಡು ದೇಶಗಳ ವಿದ್ಯುತ್ ಹಾಗೂ ಇತರ ಇಂಧನಗಳು ಮತ್ತು ಸಾಗಾಣಿಕೆ ವ್ಯವಸ್ಥೆಗಳನ್ನು ಸಮಗ್ರೀಕರಿಸಲೂ ಯೋಜಿಸಲಾಗಿದೆ. ಜಂಟೀ ಆರ್ಥಿಕ ಹಾಗೂ ಮಿಲಿಟರಿ ವ್ಯವಸ್ಥೆಗಳನ್ನು ಜಾರಿಗೆ ತರಲಾಗುವುದು. ಒಂದೇ ನಾಣ್ಯವನ್ನು ಜಾರಿಗೆ ತರುವುದನ್ನು ಯೋಜಿಸಲಾಗಿದೆ.

ಈ ಒಪ್ಪಂದಕ್ಕೆ ಎರಡೂ ದೇಶಗಳಲ್ಲಿ ಬಲಪಂಥೀಯ ಶಕ್ತಿಗಳು ವಿರೋಧಿಸಿ ದವು. ರಶ್ಯದ ಕೆಲವು ಮಾರುಕಟ್ಟೆವಾದಿಗಳು ಈ ಒಪ್ಪಂದದಿಂದ ರಶ್ಯಾದ ಖಾಸಗೀಕರಣ ಮತ್ತು ಇತರ 'ಆರ್ಥಿಕ ಸುಧಾರಣೆ'ಗಳು ಇನ್ನಷ್ಟು ನಿಧಾನವಾಗುತ್ತವೆ. ಬೆಲಾರಸ್‌ನಲ್ಲಿ ಈ ಒಪ್ಪಂದಕ್ಕೆ ಕೆಲವು ಉಗ್ರ ರಾಷ್ಟ್ರೀಯವಾದಿಗಳಿಂದ ವಿರೋಧ ಬಂದಿದೆ. ಆದರೆ ಜನಸಾಮಾನ್ಯರಲ್ಲಿ ಈ ಒಪ್ಪಂದಕ್ಕೆ ಭಾರಿ ಬೆಂಬಲವಿದೆ. ಎರಡು ದೇಶಗಳಲ್ಲಿ ಕಮ್ಯುನಿಸ್ಟರು ಈ ಒಪ್ಪಂದವನ್ನು ಬೆಂಬಲಿಸಿ ಸ್ವಾಗತಿಸಿದ್ದಾರೆ.

ಸಮಾಜವಾದಿ ವ್ಯವಸ್ಥೆಯನ್ನು ಕಿತ್ತೊಗೆದದ್ದಲ್ಲದೆ, ಸೋವಿಯತ್ ಒಕ್ಕೂಟದ ಘಟಕ ಗಣರಾಜ್ಯಗಳ ನಡುವಣ ನಿಕಟ ರಾಜಕೀಯ, ಆರ್ಥಿಕ, ಸಾಮಾಜಿಕ ಬಾಂಧವ್ಯಗಳನ್ನು ಗಿತ್ತೊಗೆದದ್ದು ಜನತೆಯ ಈ ಎಲ್ಲಾ ದೇಶಗಳ ದುಸ್ಥಿತಿಗೆ ಮುಖ್ಯ ಕಾರಣ ಎಂದು ಎರಡು ದೇಶಗಳ ಜನತೆಯ ಅರಿವಿಗೆ ಬಂದಿದೆ. ಆದ್ದರಿಂದ ಹಂತ ಹಂತವಾಗಿ ಎಲ್ಲಾ ಮಾಜಿ ಸೋವಿಯತ್ ಗಣರಾಜ್ಯಗಳ ಕನಿಷ್ಠ ಆರ್ಥಿಕ, ರಾಜಕೀಯ, ಸಾಮಾಜಿಕ ಸಂಬಂಧಗಳನ್ನು ಸ್ಥಾಪಿಸುವುದು ರಾಜಕೀಯವಾಗಿ ಜನಪ್ರಿಯ ಕ್ರಮ. ಆದ್ದರಿಂದ ಈ ಎಲ್ಲಾ ದೇಶಗಳಲ್ಲಿ ಎಲ್ಲಾ ತರಹದ ರಾಜಕಾರಣಿಗಳು(ದೇಶದ ಜನರ ಬಗ್ಗೆ ಕಾಳಜಿ ಇಲ್ಲದವರೂ ಸೇರಿದಂತೆ) ಈ 'ಐಕ್ಯತೆ'ಯ ಘೋಷಣೆಗಳನ್ನು ಹಾಕಲಾರಂಭಿಸಿವೆ. ಬೇರೆ ಯಾವ ರಾಜಕೀಯ ಶಕ್ತಿ ಸ್ಪಷ್ಟವಾಗಿ ಹೇಳದೆ ಆಗಾಗ ಘೋಷಣೆಗಳನ್ನು ಸಂದರ್ಭಸಾಧಕ ತಂತ್ರದಂತೆ ಬಳಸುತ್ತಿವೆ. ಉದಾಹರಣೆಗೆ ರೂವಾರಿ ಯೆಲ್ಸಿನ್ ಸಹ ಈ ಒಪ್ಪಂದಕ್ಕೆ ವಿರೋಧವನ್ನು ನಿರ್ಲಕ್ಷಗೊಳಿಸಿ, ಸಹಿ ಹಾಕಿದ್ದಾರೆ. ಕಮ್ಯುನಿಸ್ಟರು ಮಾತ್ರ ಎಲ್ಲಾ ಗಣರಾಜ್ಯಗಳ ನಡುವೆ ಸಂಬಂಧಗಳನ್ನು ಬಲಿಷ್ಟಗೊಳಿಸಿ ಸೋವಿಯತ್ ಒಕ್ಕೂಟವನ್ನು ಪುನಃ ಸ್ಥಾಪಿಸುವುದು ತನ್ನ ರಾಜಕೀಯ ಉದ್ದೇಶ ಎಂದು ಘೋಷಿಸಿದೆ.

ರಶ್ಯ-ಬೆಲಾರಸ್ ಸೋವಿಯತ್ ಗಣರಾಜ್ಯಗಳಲ್ಲಿ ಅತಿ ಹೆಚ್ಚು ಹಾಗೂ ಪ್ರಮುಖ ಗಣರಾಜ್ಯಗಳಾದ್ದರಿಂದ 'ಐಕ್ಯತೆ'ಗೆ ಈ ದೇಶಗಳಲ್ಲಿ ಇದಕ್ಕೆ ಅತ್ಯಂತ ಹೆಚ್ಚಿನ ಬೆಂಬಲವಿದೆ. ರಶ್ಯಾ-ಬೆಲಾರಸ್ ಒಪ್ಪಂದ ಸೋವಿಯತ್ ಒಕ್ಕೂಟದ ಪುನಃಸ್ಥಾಪನೆಯ ಒಂದು ಪ್ರಮುಖ ಹೆಜ್ಜೆ ಎನ್ನಬಹುದು. ನಾಟೋ ಕೂಟ ಪೂರ್ವದತ್ತ ಕೈ ಚಾಚುತ್ತಿರುವುದರಿಂದ ಈ ಪ್ರಕ್ರಿಯೆ ಬಲಗೊಳ್ಳಲಿದೆ ಮುಂದಿನ ದಿನಗಳಲ್ಲಿ.

ದಾವಣಗೆರೆಯಲ್ಲೊಂದು ಪ್ರಯೋಗ

ಪುಟ 6ರಿಂದ

ನಡೆಸುವುದೋ ನಮಗಂತೂ ಗೊತ್ತಿಲ್ಲ, ಆದರೆ ನಾವು ಒಂದು ಕಿರು ಪರೀಕ್ಷೆಯನ್ನು ನಡೆಸಬೇಕೆಂದು ತೀರ್ಮಾನಿಸಿದೆವು. ಅದರಂತೆ 50 ಅಂಕಗಳಿಗೆ 1 ಗಂಟೆ ಅವಧಿಯ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿ ಪರೀಕ್ಷೆಯನ್ನು ನಡೆಸಿಯೇ ಬಿಟ್ಟೆವು. ಅದಲ್ಲದೆ, ಅತ್ಯುತ್ತಮ ಅಂಕಗಳನ್ನು ಗಳಿಸಿದ ಐದು ಮಂದಿಗೆ ಮುಕ್ತಾಯ ಸಮಾರಂಭದಲ್ಲಿ ಬಹುಮಾನ ಸಹಾ ನೀಡಲಾಯಿತು. ಪರೀಕ್ಷೆಯನ್ನು ನಮ್ಮ ಕಾರ್ಯಕರ್ತರು ನಡೆಸಿದ ರೀತಿ ಕೂಡ ವಿಶಿಷ್ಟವಾಗಿತ್ತು. ಮಾತ್ರವಲ್ಲ ಹಾಜರಾದ ಎಲ್ಲಾ ಅಭ್ಯರ್ಥಿ ಗಳಿಗೂ ಹೊಸ ಅನುಭವವನ್ನು ನೀಡಿತು.

ಸಮಾರೋಪ ಸಮಾರಂಭ: ಫೆಬ್ರವರಿ 3 ರಂದು ಸಂಜೆ ಸರಳ ಸಮಾರಂಭವೊಂದು ರೋಟರಿ ಭವನದಲ್ಲಿ ಜರುಗಿತು. ಕಿಕ್ಕಿರಿದು ಜನರಿಂದ ತುಂಬಿ ಹೋಗಿತ್ತು. ಕೆಲವೆ ದಿನಗಳು ತರಬೇತಿ ಪಡೆದ ಯುವಜನರೂ ಕೂಡ ಮುಕ್ತಾಯ ಸಮಾರಂಭವೆಂದು ಗೊತ್ತಾಗಿ ಸಾಕಷ್ಟು ಸಂಖ್ಯೆಯಲ್ಲಿ ಹಾಜರಿದ್ದರು. ಸಾಂಸ್ಕೃತಿಕ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, ಶಿಕ್ಷಕರಿಗೆ ನೆನಪಿನ ಕಾಣಿಕೆ ಸಮಾರಂಭದ ಅದೇ ಸಂದರ್ಭದಲ್ಲಿ ಜರುಗಿತು. ಮುಖ್ಯ ಅತಿಥಿ ಗಳಾಗಿ ದಾವಣಗೆರೆ ಉಪ ವಿಭಾಗಾಧಿಕಾರಿ ಶಿವಬಸವಯ್ಯ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ನಗರವಾಣಿ ದಿನಪತ್ರಿಕೆಯ ಸಹ ಸಂಪಾದಕ ಬಿ.ಎನ್.ಮಲ್ಲೇಶ್ ಭಾಗವಹಿಸಿದ್ದರು. ಅಲ್ಲದೆ ಸಮಾರಂಭದಲ್ಲಿ ಉಪನ್ಯಾಸಕರು ಹಾಗೂ ಶಿಬಿರಾರ್ಥಿಗಳು ತಮ್ಮ ಅನುಭವಗಳ ಬುತ್ತಿಯನ್ನು ಬಿಚ್ಚಿದರು. ಸಂಘಟನೆಯ ಪರವಾಗಿ ನೀಡಿದ ನೆನಪಿನ ಕಾಣಿಕೆಗಳ ಜೊತೆಗೆ ಯುವತಿಯರು ಪ್ರತ್ಯೇಕವಾಗಿ ಹಣ ಸಂಗ್ರಹಿಸಿ ಅವರೂ ಕೂಡಾ ಉಪನ್ಯಾಸಕರಿಗೆ ನೆನಪಿನ ಕಾಣಿಕೆ ನೀಡಿ. ತಮ್ಮ ಪಾಲಿನ ಕೃತಜ್ಞತೆಯನ್ನು ಅರ್ಪಿಸಿದರು. ಇಷ್ಟೆಲ್ಲಾ ವೈಶಿಷ್ಟ್ಯಪೂರ್ಣವಾಗಿ ಒಂದೂವರೆ ತಿಂಗಳಿಂದಲೂ ನಡೆದ ಈ ಶಿಬಿರದ ಹಿಂದೆ ಹಲವು ಬಿಡುವಿಲ್ಲದ ಕೈಗಳು ಕೆಲಸ ಮಾಡಿದವು. ಎಸ್‌ಎಫ್‌ಐ ದಾವಣಗೆರೆ ನಗರ ಸಮಿತಿ ಅಧ್ಯಕ್ಷ ಡಿ.ಶ್ರೀನಿವಾಸ್, ಶ್ರೀನಿವಾಸ, ಜೆ.ಲತಾ, ಪಿ.ಮಂಜುನಾಥ ಕಾಡಜ್ಜಿ, ದೇವರಾಜ್, ವಿರೇಶ್, ರಾಮಚಂದ್ರ, ಸುದರ್ಶನ ಮತ್ತು ಡಿವೈಎಫ್‌ಐ ದಾವಣಗೆರೆ ತಾಲ್ಲೂಕು ಅಧ್ಯಕ್ಷ ಬ್ರಹ್ಮದೇವ ಹರಳಿಗಿ ಈ ತರಗತಿ

ಸಮಾರೋಪ ಸಮಾರಂಭದ ವೇದಿಕೆ ಮೇಲೆ.



ಕಾನೂನಿನ ಅರಿವಿಗೆ ಕರೆ

ದಕ್ಷಿಣ ಕನ್ನಡ: ಮಹಿಳೆಯರು ಇಂದು ಶಾಸನ ಸಭೆಗಳಲ್ಲಿ ಶೇ 33 ಮೀಸಲಾತಿ ಪಡೆಯಬೇಕೆಂಬ ಹಾಗೂ ಪ್ರಗತಿ ಪರರು ಮಹಿಳೆಯರಿಗೆ ಶೇ 33 ಮೀಸಲಾತಿಯನ್ನು ನೀಡಬೇಕೆಂಬ ಚರ್ಚೆ ನಡೆಯುತ್ತಿರುವಾಗ ಹಾಗೂ ಶೀಘ್ರದಲ್ಲೇ ಈ ಶಾಸನ ಜಾರಿ ಯಾಗುವ ಸಂಭವ ಇರುವಾಗಲೇ, ಇದಕ್ಕೆ ಪೂರಕವಾಗಿ ದ.ಕನ್ನಡ ಜಿಲ್ಲೆಯ ಜನವಾದಿ ಮಹಿಳಾ ಸಂಘಟನೆಯ ಜಪ್ಪಿನ ಮೊಗರು ವಲಯ ಸಮಿತಿಯು ಇತ್ತೀಚೆಗೆ ಮಹಿಳೆ ಯರಿಗೆ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಹೆಣ್ಣು ಭ್ರೂಣಾವಸ್ಥೆಯಲ್ಲಿರುವಾಗಿನಿಂದ ಮತದಾನದ ವರೆಗೆ ಆಕೆಯ ರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರೂಪಿಸಲಾಗಿದೆ. ಆದರೆ ಸಾಮಾನ್ಯ ಜನರಲ್ಲಿ ಹಾಗೂ ಮಹಿಳೆಯರಲ್ಲಿ ಈ ಕಾನೂನುಗಳ ಬಗ್ಗೆ ಅರಿವಿಲ್ಲದಿರುವುದರಿಂದ ಮಹಿಳೆಯರ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ ಎಂದ ನಗರದ ವಕೀಲರಾದ ಆಶಾ ನಾಯಕ್ 'ಮಹಿಳೆ ಮತ್ತು ಕಾನೂನು' ಕುರಿತು ಮಾತನಾಡುತ್ತಾ ಮಹಿಳೆಯರ ಸ್ಥಿತಿ ಸುಧಾರಿಸಲು ಅವರಿಗೆ ಕಾನೂನು ಮಾಹಿತಿ ಅಗತ್ಯ ಎಂದರು.

ಯುವತಿಯರು ವರದಕ್ಷಿಣೆ ಸಮಸ್ಯೆಯನ್ನು ಕೊನೆಗಾಣಿಸಲು 'ವರದಕ್ಷಿಣೆ ತೆಗೆದುಕೊಂಡ ಮದುವೆಗಳನ್ನು ಬಹಿಷ್ಕರಿಸಿ ವರದಕ್ಷಿಣೆ ನೀಡದೆ ಮದುವೆಯಾಗುವುದಾಗಿ ಪಣತೊಡಿ ಎಂದು ಹೇಳಿದರು.

ಹೆಣ್ಣು ಭ್ರೂಣ ಹತ್ಯೆ ನಿಷೇಧ ಕಾನೂನು, ಬಾಲ್ಯವಿವಾಹ, ವಿಚ್ಛೇದನ ಕಾನೂನು, ದ್ವಿಪತ್ನಿತ್ವ ನಿಷೇಧ ಕಾನೂನು, ಜೀವನಾಂಶ ಕಾನೂನು ಮುಂತಾದ ಅನೇಕ ಕಾನೂನುಗಳ ಬಗ್ಗೆ ಹಾಗೂ ಉಚಿತ ಕಾನೂನು ನೆರವಿನ ಬಗ್ಗೆ ಮಾಹಿತಿಯನ್ನು ಆಶಾ ನಾಯಕ್ ನೀಡಿದರು.

ಇಂಥ ಮಾಹಿತಿಯನ್ನು ಮಹಿಳೆಯರು ನೆರೆಹೊರೆಯವರಿಗೂ ತಿಳಿಸಬೇಕೆಂದು ಸುಮ್ಮ ಎಸ್. ಹೇಳಿದರು. ಜಯಂತಿ ಬಿ.ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ....

ಪುಟ 2 ರಿಂದ

ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಡಿವೈಎಫ್‌ಐ ಇತ್ಯಾದಿ ಸಂಘಟನೆಗಳ ನ್ನೊಳಗೊಂಡ ಸೌಹಾರ್ದತಾ ಸಮಿತಿಯನ್ನು ರಚಿಸಲಾಯಿತು. ಎಸ್‌ಎಫ್‌ಐ ನ ರಾಜ್ಯ ಸಮಿತಿ ಸದಸ್ಯೆ-ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯರೂ ಆಗಿರುವ ಕೆ.ಎಸ್.ಲಕ್ಷ್ಮಿಯವರು ಸಂಚಾಲಕಿಯಾಗಿರುವ ಈ ಸಮಿತಿಯು ವಿದ್ಯಾರ್ಥಿಗಳ ಹೋರಾಟವನ್ನು ಬೆಂಬಲಿಸಿ ಕಾರ್ಯಕ್ರಮ ರೂಪಿಸಿತು. ಬೆಂಗಳೂರು ವಿವಿ ಸೆನೆಟ್ ಸಭೆಯಲ್ಲಿ ಈಗಾಗಲೇ ಪ್ರಶ್ನೆಯನ್ನು ಲಕ್ಷ್ಮಿಯವರು ಎತ್ತಿದ್ದು ಈ ಬಗ್ಗೆ ಗಂಭೀರ ಚರ್ಚೆಯಾಗಿದೆ. ಏಪ್ರಿಲ್ 9 ರ ಸಿಂಡಿಕೇಟ್ ಸಭೆಯಲ್ಲಿ ಈ ಸಮಸ್ಯೆಯ ಕುರಿತು ಖಚಿತ ತೀರ್ಮಾನ ಕೈಗೊಳ್ಳಬೇಕೆಂದು ಕೇಳಲಾಯಿತು.

ಏಪ್ರಿಲ್ 5 ರಂದು ಕಾಲೇಜಿನ ಆಡಳಿತ ಮಂಡಳಿಯ ದುಷ್ಟ ಆಚರಣೆಗಳ ವಿರುದ್ಧ ಬಹಿರಂಗ ಸಭೆ ನಡೆಯಿತು. ಇದರಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ಮುಖಂಡರಲ್ಲದೆ ಸಿಐಟಿಯು, ರೈತಸಂಘ, ಜನವಾದಿ ಮಹಿಳಾ ಸಂಘಟನೆಯ ಮುಖಂಡರೂ ಭಾಗವಹಿಸಿ ನ್ಯಾಯಬದ್ಧ ಹೋರಾಟದಲ್ಲಿ ತೊಡಗಿದ್ದ ವಿದ್ಯಾರ್ಥಿಗಳಿಗೆ [illegible] ಬೆಂಬಲ ವ್ಯಕ್ತಪಡಿಸಿದರು.

ಏಪ್ರಿಲ್ 7 ರಂದು ಆರೋಗ್ಯ [illegible] ಕಚೇರಿಯ ಪಿಕೆಟಿಂಗ್ ನಡೆಸಲಾಯಿತು. ಏಪ್ರಿಲ್ 9 ರಂದು ನಡೆದ ಸಭೆಯಲ್ಲಿ ಕೊನೆಗೂ ಕಾಲೇಜಿನ ಆಡಳಿತ ಮಂಡಳಿ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳಿಗೆ ತಲೆಬಾಗಬೇಕಾಗಿ ಬಂತು.

ಭಾರತದಲ್ಲಿ ನಾಲ್ಕೂವರೆ ಕೋಟಿ ಬಾಲ ಕಾರ್ಮಿಕರು!

ಬಾಲ ಕಾರ್ಮಿಕರನ್ನು ಕುರಿತಾದ ನವದೆಹಲಿಯಲ್ಲಿ ನಡೆದ ಮೂರು ದಿನಗಳ ರಾಷ್ಟ್ರೀಯ ಸಮಾವೇಶ ಒಂದು ಬೇಡಿಕೆಗಳ ಪಟ್ಟಿಯನ್ನು ಅಂಗೀಕರಿಸಿ ಯಾವುದೇ ಮಗುವಿನಿಂದ 14 ವರ್ಷ ವಯಸ್ಸಿನವರೆಗೆ ಕೂಲಿಕಾರನಾಗಿ ಕೆಲಸ ಮಾಡಿಸಬಾರದು ಎಂದು ಆಗ್ರಹಪಡಿಸಿದೆ. "ಎಲ್ಲಾ ಮಕ್ಕಳಿಗೆ ಪುಕ್ಕಟೆ, ಕಡ್ಡಾಯ, ಸುಸಂಬದ್ಧ ಹಾಗೂ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ"ವನ್ನು ಒದಗಿಸಬೇಕು, ಇದಕ್ಕಾಗಿ ಸರಕಾರ ಕಾನೂನುಗಳನ್ನು ಮಾಡಬೇಕು ಎಂದು ಮಾರ್ಚ್ 30ರಿಂದ ಏಪ್ರಿಲ್ 1ರವರೆಗೆ ನಡೆದ ಈ ಸಮಾವೇಶ ಒತ್ತಾಯಿಸಿದೆ.

ಭಾರತದಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸುಮಾರು 700 ಗುಂಪುಗಳು ಸೇರಿಕೊಂಡು ರಚಿಸಿಕೊಂಡ "ಬಾಲ ದುಡಿಮೆಯ ವಿರುದ್ಧ ಪ್ರಚಾರಾಂದೋಲನ" (CACL) ಈ ಸಮಾವೇಶವನ್ನು ಏರ್ಪಡಿಸಿತ್ತು, ವಿವಿಧ ವಲಯಗಳಲ್ಲಿ ಕೆಲಸ ಮಾಡುವ 1000 ದಷ್ಟು ಬಾಲಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದರು.

ಈ ಸಮಾವೇಶದ ಒಂದು ವಿಶೇಷತೆ ಯೆಂದರೆ ಮಾರ್ಚ್ 31ರಂದು ಒಂದು ನ್ಯಾಯಪೀಠದ ಎದುರು ನಡೆದ ಸಾರ್ವಜನಿಕ ವಿಚಾರಣೆ, ಇಟ್ಟಿಗೆ ಗೂಡು, ಬನಾರಸ್ ಸೀರೆ ನೇಯ್ಗೆ, ಧಾನ್ಯ ಮಾರ್ಕೆಟ್, ಕೃಷಿ ಜೀತ, ಕಟ್ಟಡ ಕೆಲಸ, ರೇಶ್ಮೆ ನೇಯ್ಗೆ, ಬಾಲ ವೇಶ್ಯೆ, ಹೋಟೆಲ್, ಬೀಡಿ, ಬೆಂಕಿ ಪೆಟ್ಟಿಗೆ ಹಾಗೂ ಹೊಸ್ಯೆರಿ ಈ ಹನ್ನೊಂದು ಉದ್ದಿಮೆಗಳ ಬಾಲ ಕಾರ್ಮಿಕರ ಸಾಕ್ಷ್ಯಗಳನ್ನು ನ್ಯಾಯಪೀಠ ಆಲಿಸಿತು.

ಪ್ರೊ. ಮುಚ್ಕುಂದ್ ದುಬೆ, ನ್ಯಾಯಮೂರ್ತಿ, ರಾಜಿಂದರ್ ಸಾಚರ್, ನ್ಯಾಯಮೂರ್ತಿ ಲೈಲಾ ಸೇಠ್, ಡಿ.ಎಸ್.ಶಂಕರನ್, ಪ್ರೊ.ಯಶಪಾಲ್, ಎನ್.ರಾಂ, ಇಂದಿರಾಜೈಸಿಂಗ್ ಮತ್ತು ಆರ್.ವೆಂಕಟರಮಣ ನ್ಯಾಯಪೀಠದಲ್ಲಿದ್ದರು.

ತನ್ನ ಮುಂದೆ ಸಲ್ಲಿಸಿದ ಅಂಕಿ-ಅಂಶಗಳ ಆಧಾರದ ಮೇಲೆ ನ್ಯಾಯಪೀಠ "ಭಾರತ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಬಾಲ ಕಾರ್ಮಿಕರನ್ನು ಹೊಂದಿದ ದೇಶ" ಎಂಬ ತೀರ್ಮಾನಕ್ಕೆ ಬಂದಿತು. ಅತ್ಯಂತ ಎಳೆ ವಯಸ್ಸಿನಿಂದಲೇ ದುಡಿಯಲಾರಂಭಿಸುವ ಭಾರತದ ಬಾಲ ಕಾರ್ಮಿಕರ ಸಂಖ್ಯೆ ನಾಲ್ಕೂವರೆ ಕೋಟಿ. ಸರಾಸರಿ ದಿನಕ್ಕೆ 10-12 ಗಂಟೆ ದುಡಿವ ಇವರ ಸರಾಸರಿ ಕೂಲಿ ತಿಂಗಳಿಗೆ 250 ರೂ. ಹಲವು ಸಂದರ್ಭಗಳಲ್ಲಿ ಅವರು ಬಿಟ್ಟಿಯಾಗಿಯೇ ದುಡಿಯಬೇಕಾಗಿದೆ ಎಂಬುದು ಕಂಡು ಬಂತು.

ಭಾರತದ ದುಡಿಮೆಗಾರರಲ್ಲಿ ಬಾಲಕಾರ್ಮಿಕರದ್ದು ಅಲ್ಪ ಪಾತ್ರವೇನೂ ಅಲ್ಲ, ಗ್ರಾಮೀಣ ನಗರ, ಸಂಘಟಿತ-ಅಸಂಘಟಿತ, ಪಾರಂಪರಿಕ-ಹೊಸ ಕ್ಷೇತ್ರ ಎಲ್ಲೆಡೆಯೂ ಬಾಲ ದುಡಿಮೆ ವ್ಯಾಪಕವಾಗಿದೆ ಎಂದು ಗಮನಿಸಿದ ನ್ಯಾಯಪೀಠ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಾಲಕಾರ್ಮಿಕರನ್ನು ದುಡಿಸಿಕೊಳ್ಳಲು ಪ್ರಥಮ ಕಾರಣವೆಂದರೆ ನಮ್ಮ ವ್ಯವಸ್ಥೆ ಪುಕ್ಕಟೆ ಕಡ್ಡಾಯ ಶಾಲಾ ಶಿಕ್ಷಣವನ್ನು ಒದಗಿಸುವಲ್ಲಿ ವಿಫಲವಾಗಿರುವುದು ಎಂದು ಅಭಿಪ್ರಾಯಪಟ್ಟರು. ಇದು ವಿಶ್ವಾದ್ಯಂತ ಮಾನ್ಯತೆ ಪಡೆದ ಮೂಲಭೂತ ಹಕ್ಕು .... ಭಾರತದಲ್ಲಿ ಸರಕಾರ ಪ್ರಾಥಮಿಕ ಹಂತದವರೆಗೂ ಕೂಡಾ ಪುಕ್ಕಟೆ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವಲ್ಲಿ ವಿಫಲವಾಗಿರುವುದರಿಂದಲೇ ಒಂದು ಬಳಸಿಕೊಳ್ಳಲಾರದಷ್ಟು ಬೃಹತ್ತಾದ ಶ್ರಮಶಕ್ತಿ ಸೃಷ್ಟಿಯಾಗಿದೆ" ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

"ಸಾಮೂಹಿಕ ಬಡತನ ಮತ್ತು ಅನ್ಯಾಯದ ಒಂದು ವಾತಾವರಣದಲ್ಲಿ ಮಕ್ಕಳು ಬಲಿಯಾಗುವ ಅವಕಾಶ ಹೆಚ್ಚು. ಏಕೆಂದರೆ ಅವರು ಹೇಗೆ ಬೇಕಾದರೂ ಮಣಿಸಲು ಸಾಧ್ಯವಾಗುವ ಒಂದು ಶ್ರಮ ಶಕ್ತಿ ಕಾರ್ಮಿಕ ಕಾನೂನುಗಳಿಂದ ತಪ್ಪಿಸಿಕೊಳ್ಳಲು ಅವನನ್ನು ಮರೆ ಮಾಚುವುದು ಸುಲಭ. ಅವರ ಚುರುಕು ಬೆರಳುಗಳ ಚಮತ್ಕಾರವನ್ನು ಪ್ರಸಾರ ಮಾಡುವ ಹುಸಿ ಸಿದ್ಧಾಂತ ಇದಕ್ಕೆ ಇನ್ನಷ್ಟು ನೆರವು ನೀಡುತ್ತದೆ. ಅಲ್ಲದೆ ಅವರು ಅಗ್ಗದ ಹಾಗೂ ಸುಲಭವಾಗಿ ಹತೋಟಿಗೆ ಬರಬಲ್ಲ ಶ್ರಮ ಶಕ್ತಿ, ಈ ಮೂಲಕ ವಯಸ್ಕ ಕಾರ್ಮಿಕರ ಸಂಬಳವನ್ನು, ಉದ್ಯೋಗಾವಕಾಶಗಳನ್ನು ಸಂಕುಚಿತಗೊಳಿಸುವ ಸಾಧ್ಯತೆ ಹಾಗೂ ಆ ಮೂಲಕ ಪೈಶಾಚಿಕ ಲಾಭ ಗಿಟ್ಟಿಸುವ ಅವಕಾಶ ಇವೆಲ್ಲದರಿಂದಾಗಿ ಬಾಲ ದುಡಿಮೆ ವ್ಯಾಪಕವಾಗಿದೆ" ಎಂದ ನ್ಯಾಯಪೀಠ ಹೆಣ್ಣು ಮಗುವಂತೂ ಸಮಾಜದಲ್ಲಿ ಮತ್ತು ಕೆಲಸದ ಜಾಗದಲ್ಲಿ ಹೇಗೆ ಮಾತುಕತೆ, ಪಕ್ಷಪಾತ ಮತ್ತು ವಂಚನೆಯನ್ನು ಎದುರಿಸಬೇಕಾಗುತ್ತದೆ, ಈ ಬಗ್ಗೆ ವಿಶೇಷ ಗಮನ ನೀಡಬೇಕು ಎಂದಿದೆ.

ನ್ಯಾಯಪೀಠ ಹಲವು ನಿರ್ದಿಷ್ಟ ಶಿಫಾರಸುಗಳನ್ನು ಮಾಡಿತು. ಬಾಲ ದುಡಿಮೆಯ ಮೇಲೆ ಸಂಪೂರ್ಣ ನಿಷೇಧ, 14ನೇ ವಯಸ್ಸಿನವರೆಗೆ ಕಡ್ಡಾಯ, ಪುಕ್ಕಟೆ ಶಿಕ್ಷಣ ಇವು ಅದರ ಪ್ರಮುಖ ಶಿಫಾರಸುಗಳು. 14 ವರ್ಷದವರೆಗಿನ ಮಕ್ಕಳನ್ನು ಮನೆ ಗೆಲಸದಲ್ಲೂ, ಕುಟುಂಬದ ವೃತ್ತಿಯ ಉದ್ಯೋಗದಲ್ಲೂ ಕೂಡಾ ದುಡಿಸಿಕೊಳ್ಳುವುದನ್ನು ನಿಷೇಧಿಸಲು 1986ರ ಬಾಲದುಡಿಮೆ ಕಾನೂನಿನಲ್ಲಿ ತಿದ್ದುಪಡಿ ತರಬೇಕು ಎಂದು ಅವರು ಸೂಚಿಸಿದ್ದಾರೆ. ಇಲ್ಲಿ 'ಅಪಾಯಕಾರಿ' ಮತ್ತು 'ಅಪಾಯಕಾರಿಯಲ್ಲ' ಉದ್ಯೋಗಗಳು ಎಂಬ ವ್ಯತ್ಯಾಸ ಮಕ್ಕಳ ದುಡಿಮೆಯ ಮಟ್ಟಿಗೆ ಅರ್ಥಹೀನ. ಏಕೆಂದರೆ ಎಲ್ಲಾ ಉದ್ಯೋಗಗಳೂ ಮಕ್ಕಳಿಗೆ ಅಪಾಯಕಾರಿ ಎಂದು ಅವರು ಸಾರಿದರು.

ನಿರ್ದಿಷ್ಟ ಸೂಚನೆಗಳಲ್ಲದೆ "ಒಂದು ವಿಶಾಲ ಸಮಗ್ರ ನಿಲುವಿನ" ಅಗತ್ಯವನ್ನು ಅವರು ಒತ್ತಿ ಹೇಳಿದರು. ಆರೋಗ್ಯ ಪೋಷಕಾಂಶ, ಮಕ್ಕಳ ಪಾಲನೆ, ಉದ್ಯೋಗ, ವಸತಿ, ಕನಿಷ್ಟ ಕೂಲಿಯ ಜ್ಯಾರಿ ಮತ್ತು ಭೂ ಸುಧಾರಣೆ ಇವನ್ನೆಲ್ಲಾ ಸಮಗ್ರವಾಗಿ ಒಳಗೊಂಡ ಒಂದು ನಿಲುವು ಅಗತ್ಯ ಎಂಬುದು ಅವರ ಮುಖ್ಯ ಒತ್ತಾಗಿತ್ತು.

ಸರಕಾರದ ಪ್ರತಿನಿಧಿಗಳು, ಕಾನೂನು ತಯಾರಕರು ಹಾಗೂ ನಾಗರೀಕರ ಮುಂದೆ ತಮ್ಮ ಸಮಸ್ಯೆಗಳನ್ನು ಪ್ರಶ್ನೆಗಳನ್ನು ಮುಂದಿಡಲು ಬಾಲ ಕಾರ್ಮಿಕರಿಗೆ ಒಂದು ವೇದಿಕೆ ಒದಗಿಸುವ ಈ ಸಮಾವೇಶ ಮಕ್ಕಳಿಗೆ ಸೃಜನಾತ್ಮಕ ಗುಂಪು ಚಟುವಟಿಕೆಗಳನ್ನು ಏರ್ಪಡಿಸಿತ್ತು. ದಿಲ್ಲಿಯ ಬಹಾದ್ದೂರ್ ಶಾ ಜಫರ್ ಮಾರ್ಗದಲ್ಲಿ ಏಪ್ರಿಲ್ 1ರಂದು ಬಾಲ ಕಾರ್ಮಿಕರ ಮಾನವ ಸರಪಳಿ ಕಾರ್ಯಕ್ರಮವೂ ನಡೆಯಿತು. (ಐಎನ್ಎಸ್)



ಸಫ್ದರ್ ಹಾಶ್ಮಿ – ಎಂಟು ವರ್ಷಗಳ ಹಿಂದೆ ದಿಲ್ಲಿಯ ಸಮೀಪ ಹೋರಾಟ ನಿರತ ಕಾರ್ಮಿಕರಿಗೆ ಬೆಂಬಲವಾಗಿ ಬೀದಿ ನಾಟಕ ನಡೆಸುತ್ತಿದ್ದಾಗ ಮಾಲಿಕರ ಗೂಂಡಾಗಳ ಆಕ್ರಮಣಕ್ಕೆ ಬಲಿಯಾದ ಪ್ರಸಿದ್ಧ ನಾಟಕಕಾರ. ಈಗ ಏಪ್ರಿಲ್ ತಿಂಗಳಲ್ಲಿ ಅವರ ಜನ್ಮ ದಿನವನ್ನು 'ಬೀದಿ ನಾಟಕ ದಿನ'ವನ್ನಾಗಿ ಪ್ರತಿ ವರ್ಷ ಆಚರಿಸಲಾಗುತ್ತಿದೆ. ಕೇರಳದಲ್ಲಿ ಏಪ್ರಿಲ್ 11-15ರವರೆಗೆ ಇವರ ನೆನಪಲ್ಲಿ ಈ ವರ್ಷ ವಿಶೇಷ ನಾಟಕೋತ್ಸವ ನಡೆಯುತ್ತಿದೆ.

ಆರ್ಥಿಕ ಸ್ವಾವಲಂಬನೆಯಿಂದ ರಾಜಕೀಯದಲ್ಲಿ ಮಹಿಳೆ ಮುಂಬರಲು ಸಾಧ್ಯ

– ಸಾರಾ ಅಬೂಬಕ್ಕರ್

ಮಂಗಳೂರು: ಸಮಾಜದಲ್ಲಿ ಮಹಿಳೆಗೆ ಪುರುಷರಷ್ಟೇ ಸಮಾನ ಸ್ಥಾನ ನೀಡಿ ಶಿಕ್ಷಣ ಕೊಟ್ಟು ಆಕೆಯನ್ನು ಆರ್ಥಿಕ ಸ್ವಾವಲಂಬಿಯಾಗುವಂತೆ ರೂಪಿಸಿದಾಗಲೇ ಮಹಿಳೆ ರಾಜಕೀಯ ಕ್ಷೇತ್ರದಲ್ಲಿ ಮುಂಬರಲು ಸಾಧ್ಯ ಎಂದು ಖ್ಯಾತ ಲೇಖಕಿ ಸಾರಾ ಅಬೂಬಕ್ಕರ್ ಅಭಿಪ್ರಾಯಪಟ್ಟರು.

ನಗರದ ಸ್ಟೇಟ್ ಬ್ಯಾಂಕ್ ಬಳಿ ಸಮಾನ ಮನಸ್ಕ ಸಂಘಟನೆಗಳು ಕಾರ್ಯಾಚರಿಸುವ 'ವಿಕಾಸ' ಕಚೇರಿಯ 'ನಿರಂತರ' ಗೋಡೆ ಪತ್ರಿಕೆಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಸಮಾನ ಶಿಕ್ಷಣ, ಆರ್ಥಿಕ ಸ್ವಾವಲಂಬನೆಯ ಬಗ್ಗೆ ಮಹಿಳೆ ಪ್ರಥಮ ಆದ್ಯತೆ ವಹಿಸಬೇಕಾಗಿದೆ. ಹೆಣ್ಣಿಗೆ ಮದುವೆಯೇ ಅಂತಿಮ ಗುರಿಯಾಗಬಾರದು. ಮದುವೆಗೆ ಎರಡನೇ ಸ್ಥಾನ ಕಲ್ಪಿಸಬೇಕು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇದು ಸಾಧ್ಯವಾಗಿದೆ ಎಂದು ಹೇಳಿದರು.

ವರದಕ್ಷಿಣೆ ವಿರುದ್ಧ ಸರಕಾರ ಕಾನೂನು ರೂಪಿಸಿದ್ದರೂ ಆ ಕಾನೂನಿನಲ್ಲಿ ಸಾಕಷ್ಟು ನ್ಯೂನತೆಗಳಿವೆ. ಈ ಕಾರಣದಿಂದಾಗಿ ಇಂದು ವರದಕ್ಷಿಣೆ ಬೃಹತ್ ಸಾರ್ವಜನಿಕ ಪಿಡುಗಾಗಿ ತಲೆಯೆತ್ತಿದೆ. ವರದಕ್ಷಿಣೆ ಪದ್ಧತಿ ನಿರ್ಮೂಲನಕ್ಕೆ ಅಂತರ ಜಾತಿವಿವಾಹವು ದಾರಿಯಾಗಬಲ್ಲದು ಎಂದು ಸಾರಾ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಪರಿಸರವಾದವು ಜನರನ್ನು ತಪ್ಪು ಹಾದಿಗೆಳೆಯುವ ರೀತಿಯಲ್ಲಿ ಸಾಗುತ್ತಿದೆ. ಪರಿಸರವಾದಿಗಳು ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಯು ಬೇಡ ಎಂಬ ರೀತಿಯಲ್ಲಿ ಅಭಿಪ್ರಾಯ ರೂಪಿಸುತ್ತಿದ್ದಾರೆ. ಇದರ ಹಿಂದೆ ಯಾವುದೇ ಬೃಹತ್ ಪಿತೂರಿಯಿರಬಹುದಾದ ಸಂಶಯ ಇದೆ. ಈ ಪಿತೂರಿಯನ್ನು ಬಯಲಿಗೆಳೆಯಬೇಕೆಂದರು.

ತನ್ನ ಸಾಹಿತ್ಯ ಅನುಭವ ವಿವರಿಸಿದ ಸಾರಾ, ಕೇವಲ ಓದುವ ಆಸಕ್ತಿ ಇದ್ದವರೆಲ್ಲ ಬರಹಗಾರರಾಗುವುದಿಲ್ಲ. ಬರೆಯುವುದು ಕೂಡಾ ಒಂದು ಕಲೆ. ಕಲಾ ವಾಸನೆ ಇದ್ದಾಗ ಮಾತ್ರ ಕೃತಿ ರಚಿಸಲು ಸಾಧ್ಯ. ಸುತ್ತಮುತ್ತಲು ಪರಿಸರದಲ್ಲಿ ನಡೆದು ಹೋದ ಹಲವು ಘಟನೆಗಳು ನನ್ನ ಬರಹಗಳ ವಸ್ತುವಾಗಿದೆ ಎಂದರು.

ಸಂವಾದದಲ್ಲಿ ಡಾ।ರಾಜೇಂದ್ರ ಉಡುಪ, ನಾಗೇಶ್ ಕುಮಾರ್, ತಾರಾನಾಥ್ ಕಾಫಿಕಾಡ್, ಯಾದವಶೆಟ್ಟಿ, ಬಾಲಕೃಷ್ಣ ಅಡೆಂಜ, ಪ್ರಸನ್ನ, ಇಸ್ಮಾಯಿಲ್, ಪ್ರಭಾಕರ್, ಸೂರ್ಯನಾರಾಯಣ, ಸುನಿಲ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.

"ಎಲ್ಲರೂ ನೋಡಿ ಜನುಮದ ಜೋಡಿ"

ಎಂದು ರಾಯಚೂರಿನಲ್ಲಿ ವಿದ್ಯಾರ್ಥಿ, ರೈತ ಕಾರ್ಯಕರ್ತರು ಗೋಡೆ ಬರಹ ಮಾಡಿದ್ದಾರಂತೆ.. ಏಕೆ ಈ ವಿಶೇಷ ಆಸಕ್ತಿ? ಓದಿ ನೋಡಿ.

ಇತ್ತೀಚಿನ ದಿನಗಳಲ್ಲಿ ಭಾರೀ ಯಶಸ್ಸು ಗಳಿಸಿರುವ 'ಜನುಮದ ಜೋಡಿ' ಚಲನಚಿತ್ರ ಎಲ್ಲ ವರ್ಗದ ಪ್ರೇಕ್ಷಕರನ್ನು ಒಂದಿಲ್ಲೊಂದು ಕಾರಣಕ್ಕೆ ಸೆಳೆದಿರುವ ಚಿತ್ರ. ವಾಸ್ತವವಾಗಿ ಈ ಚಿತ್ರ ವಿಶಿಷ್ಟ ಎನಿಸುವುದು ಎರಡು ಕಾರಣಗಳಿಗೆ. ಒಂದು, ಜಾತಿಗಳ ನಡುವಿನ ಸಂಘರ್ಷವನ್ನು ಸಂಯಮದಿಂದ ನಿರ್ವಹಿಸಿರುವುದರಿಂದ ಹಾಗೂ ಎರಡು, ಸಾಮಾಜಿಕ ವ್ಯವಸ್ಥೆಯ ರೀತಿ-ರಿವಾಜುಗಳನ್ನು ಸ್ತ್ರೀ ಪಾತ್ರ ಪ್ರಶ್ನಿಸುವುದರಿಂದಾಗಿ.

ಭಾರತದ ಚಲನಚಿತ್ರ ಇತಿಹಾಸದಲ್ಲಿ ಪ್ರೇಮದ ಕಥಾವಸ್ತುವುಳ್ಳ ಸಿನಿಮಾಗಳಿಗೆ ಕೊರತೆ ಇಲ್ಲ. ಯುವಕ-ಯುವತಿಯರ ಪ್ರೇಮ; ಮದುವೆಯ ಪ್ರಸ್ತಾಪ; ಶ್ರೀಮಂತಿಕೆ-ಬಡತನದ ಅಡ್ಡಗೋಡೆ ಅಥವಾ ಹಿರಿಯರ ನಡುವಿನ ಬದ್ಧ ದ್ವೇಷ...... ಇವು ಹಳಸಲಾದ ವಿಷಯಗಳು. ಆದರೆ, ಇಂತಹ ಒಂದು ಪ್ರೇಮಕ್ಕೆ ಜಾತಿಯನ್ನು ಸಮಸ್ಯೆಯಾಗಿ ಮಧ್ಯೆ ತಂದು ನಿಲ್ಲಿಸುವ ಕೆಲಸ ಚಿತ್ರರಂಗದಲ್ಲಿ ತುಂಬಾ ಕಷ್ಟಕರವಾದದ್ದು. ಅಲ್ಲದೆ, ಸದಾ ಸಾಮಾಜಿಕ ಬಂಧನಗಳಲ್ಲಿ ಸಿಲುಕಿರುವ ಚಲನಚಿತ್ರಗಳ ಹೆಣ್ಣು, ಆ ಬಂಧನಗಳಿಗೆ ಬಲಿಯಾಗುವುದೇ ಹೆಚ್ಚು. ಆದರೆ ಜನುಮದ ಜೋಡಿಯಲ್ಲಿ ಜಾತಿ ಪ್ರಶ್ನೆಯನ್ನು ಅತ್ಯಂತ ಸಂಯಮದಿಂದ ಚಿತ್ರಿಸಲಾಗಿದೆ ಹಾಗೂ ಸ್ತ್ರೀ ಪಾತ್ರಧಾರಿ ಸಮಾಜದ ಓರೆ-ಕೋರೆಗಳನ್ನು ಪ್ರಶ್ನಿಸುವ ದಿಟ್ಟತನ ತೋರಿಸುತ್ತಾಳೆ.

ಚಿತ್ರದ ಕಥೆ

ಹಳ್ಳಿಯೊಂದರಲ್ಲಿ 'ಮೇಲು ಜಾತಿ'ಯ ಹುಡುಗ ಮತ್ತು 'ಕೆಳ ಜಾತಿ'ಯ ಹುಡುಗಿ ಪರಸ್ಪರ ಇಷ್ಟ ಪಡುತ್ತಾರೆ. ಜೊತೆಯಾಗಿ ಬದುಕಲು ಮದುವೆಯಾಗ ಬಯಸುತ್ತಾರೆ. ಆದರೆ ಇವರ ಜಾತಿಗಳು ಈ ಮದುವೆಗೆ ಅಡ್ಡಿಯಾಗುತ್ತದೆ. ಇದನ್ನು ಮೀರಿ ಒಂದಾಗಲು, ಪ್ರೇಮಿಗಳು ರಾತ್ರಿಯಲ್ಲಿ ಗುಟ್ಟಾಗಿ ಮದುವೆಯಾಗಲು ಯತ್ನಿಸುತ್ತಾರೆ. ಈ ಸಂದರ್ಭದಲ್ಲಿ ಯುವತಿಯನ್ನು ಅಪಹರಿಸುವ ಊರ ಗೌಡ ಅವಳನ್ನು ತನ್ನ ಮನೆಯ ಆಳಿನೊಂದಿಗೆ ಬಲವಂತದ ಮದುವೆ ಮಾಡಿಸುತ್ತಾನೆ. ಈ ಮದುವೆಯನ್ನು ಹುಡುಗಿ ಪುರಸ್ಕರಿಸುವುದೇ ಇಲ್ಲ. ಆಕಸ್ಮಾತ್ತಾಗಿ ಹುಡುಗಿಯ 'ಒಲ್ಲದ ಗಂಡ' ಸತ್ತಾಗ ಅದರ ಆರೋಪ ಇವಳ ಮೇಲೆ ಬರುತ್ತದೆ. ಪ್ರೇಮಿಯೊಂದಿಗೆ ಅಕ್ರಮ ಸಂಬಂಧದ ಆರೋಪವನ್ನು ಹೊರಿಸುತ್ತಾರೆ. ರೋಸಿ ಹೋದ ಹುಡುಗಿ ಸಿಡಿದೇಳುತ್ತಾಳೆ. ಊರ ಪ್ರಮುಖರು ಎನಿಸಿಕೊಂಡವರ ಅಕ್ರಮಗಳನ್ನು ಬಯಲು ಮಾಡುತ್ತಾಳೆ. ತನ್ನ ಕಡೆ ಬೊಟ್ಟು ಮಾಡುವವರ ನೈತಿಕತೆಯನ್ನು ಪ್ರಶ್ನಿಸುತ್ತಾಳೆ. ಸಮಾಜದ ಕ್ರೂರ ನೀತಿಗಳನ್ನು ಧಿಕ್ಕರಿಸುತ್ತಾಳೆ.

ಇದು ಸ್ಥೂಲವಾಗಿ ಚಿತ್ರದ ಕಥೆ.

ಜಾತಿ ಧರ್ಮದ ವಿಷಯದಲ್ಲಿ, ಮಹಿಳೆಯರ ವಿಚಾರದಲ್ಲಿ ಪ್ರಗತಿಪರ ಧೋರಣೆ ಹೊಂದಿರುವ ಸಾಹಿತ್ಯ ಕೃತಿಗಳು ಎಲ್ಲಾ ಭಾಷೆಗಳಲ್ಲೂ ಸಾಕಷ್ಟಿರಬಹುದು. ಆದರೆ, ಚಲನಚಿತ್ರದಂತಹ ದೃಶ್ಯ ಮಾಧ್ಯಮದಲ್ಲಿ ಇಂತಹ ವಿಷಯವನ್ನು ವಸ್ತುವನ್ನಾಗಿಸುವುದು ಸಾಹಸದ ಕೆಲಸ. ಇಲ್ಲಿ ಜಾತಿಗಳ ನಡುವಿನ ಸಂಘರ್ಷವನ್ನು ಎಲ್ಲಿಯೂ ಉದ್ರೇಕಕ್ಕೆ ಕೊಂಡೊಯ್ಯುವುದಿಲ್ಲ. ಜಾತಿಯ ಪ್ರಶ್ನೆ ಇಲ್ಲಿ ಹೊಡೆದಾಟ, ಬಡಿದಾಟಕ್ಕೆ, ಶಾಶ್ವತ ದ್ವೇಷಕ್ಕೆ, ಸಾವು-ನೋವಿಗೆ ಇತ್ಯಾದಿ ಯಾವ 'ಅಲೆ'ಗೂ ಹೋಗುವುದಿಲ್ಲ. ಬದಲಿಗೆ ವ್ಯವಸ್ಥೆಯೊಳಗಿನ ಸಂಕೀರ್ಣತೆಯನ್ನು ವಿಭಿನ್ನ ನೆಲೆಗಳಲ್ಲಿ ಗುರುತಿಸುತ್ತದೆ.

ಹಾಗೆಯೇ ಇಲ್ಲಿನ ನಾಯಕಿಯನ್ನು ಓರ್ವ ಸ್ವತಂತ್ರ ವ್ಯಕ್ತಿತ್ವ ಇರುವ ಪಾತ್ರವನ್ನಾಗಿ ಮಾಡಿ ರುವುದು ಗಮನಾರ್ಹ. ಕಳೆದ ವರ್ಷ ಬಿಡುಗಡೆ ಯಾದ, ಸುನಿಲ್ ಕುಮಾರ್ ದೇಸಾಯಿ ಅವರ ನಿರ್ದೇಶನದ "ನಮ್ಮೂರ ಮಂದಾರ ಹೂವೆ" ಚಿತ್ರದ ಬೆನ್ನಿನಲ್ಲಿಯೇ ಬಂದ 'ಜನುಮದ ಜೋಡಿ'ಯೂ ಸ್ತ್ರೀ ಪಾತ್ರಕ್ಕೆ ಪೂರ್ಣ ಸ್ವಾತಂತ್ರ್ಯ ನೀಡುತ್ತದೆ.

ತ್ರಿಕೋನ ಪ್ರೇಮದ ಕಥೆ ಇರುವ 'ನಮ್ಮೂರ ಮಂದಾರ ಹೂವೆ' ಚಿತ್ರದಲ್ಲಿ ಇಬ್ಬರು ಗೆಳೆಯರು ಒಬ್ಬಳೇ ಹುಡುಗಿಯನ್ನು ಪ್ರೀತಿಸಲು ತೊಡಗುತ್ತಾರೆ. ಇದು ಪರಸ್ಪರರಿಗೆ ಅರಿವಾದಾಗ ಇಬ್ಬರೂ ಮತ್ತೊಬ್ಬನಿಗಾಗಿ ತನ್ನ ಪ್ರೇಮ ತ್ಯಾಗ ಮಾಡಲು ಮುಂದಾಗುತ್ತಾರೆ. ತ್ಯಾಗದ ಸ್ಪರ್ಧೆಯೇ ಆರಂಭವಾಗುತ್ತದೆ. ಈ ಹಂತದಲ್ಲಿ ಮಧ್ಯೆ ಪ್ರವೇಶಿಸುವ ಹುಡುಗಿ ಇಬ್ಬರಿಗೂ ಛೀಮಾರಿ ಹಾಕುತ್ತಾಳೆ. "ನನಗೆ ಬೇಡ ನೀನು ತಗೋ, ನನಗೆ ಬೇಡ ನೀನು ತಗೊ ಎಂದು ನಿಮ್ಮ ನಿಮ್ಮಲ್ಲೇ ನಿರ್ಧಾರ ಮಾಡಿಕೊಳ್ಳಲು ನಾನೇನು ನಿರ್ಜೀವ ಗೊಂಬೆಯಲ್ಲ. ನನಗೂ ಒಂದು ಮನಸ್ಸಿದೆ, ಸ್ವಂತ ಅಭಿಪ್ರಾಯವಿದೆ, ಒಂದು ಸ್ವತಂತ್ರ ವ್ಯಕ್ತಿತ್ವವಿದೆ' ಎನ್ನುತ್ತಾಳೆ.

ತಾಯಿ, ಕರುಳು, ತಾಳಿ ಇತ್ಯಾದಿ ಚಿತ್ರಗಳ ಸಾಲಿನ ನಡುವೆ ಇಂತಹ ಚಿತ್ರಗಳು ಬಂದಾಗ, ನಿರೀಕ್ಷೆ ಮೀರಿ ಯಶಸ್ವಿಯೂ ಆದಾಗ ಇವು ವಿಭಿನ್ನತೆಯ ಸಂಕೇತವಾಗುತ್ತವೆ.

ಈ ವಿಭಿನ್ನತೆಯನ್ನು ಗುರುತಿಸಿ ರಾಯಚೂರಿನ ಎಸ್ಎಫ್ಐ ಗೆಳೆಯರು, ರೈತ ಸಂಘದ ಸ್ನೇಹಿತರು "ಎಲ್ಲರೂ ನೋಡಿ; ಜನುಮದ ಜೋಡಿ" ಎಂಬ ಪ್ರಚಾರ ನಡೆಸಿದ್ದಾರೆ. ಗೋಡೆ ಬರಹ ಮಾಡಿದ್ದಾರೆ.

ಮೂಲಕಥೆ: ಪನ್ನಾಲಾಲ್ ಪಟೇಲ್, ಗುಜರಾತೀ ಲೇಖಕ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು.
ಚಿತ್ರಕಥೆ: ಬರಗೂರು ರಾಮಚಂದ್ರಪ್ಪ
ನಿರ್ದೇಶನ: ಟಿ.ಎಸ್.ನಾಗಾಭರಣ
ಕಲಾವಿದರು: ಶಿವರಾಜ್‌ಕುಮಾರ್, ಶಿಲ್ಪಾ, ಏಣಗಿ ಬಾಳಪ್ಪ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು